ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 6 | ಫೆಬ್ರವರಿ 1–7, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com



ಹಿರಿಯ ಕಾರ್ಮಿಕ ಮುಖಂಡ
ಕಾಂ. ಎಸ್.ಬಿ.ಶಿವಶಂಕರ್
ಲಾಲ್‌ಸಲಾಂ

ಚಾರಿತ್ರಿಕ ಪರ್ಯಾಯ ಗಣತಂತ್ರ ಪರೇಡ್





ಜನಶಕ್ತಿಯ ವಿರಾಟ್ ಪ್ರದರ್ಶನ



ದಿಲ್ಲಿ ಪೊಲೀಸ್‌ಗೆ ಕಿಸಾನ್ ಸಭಾದ ಏಳು ಪ್ರಶ್ನೆಗಳು

ಟೊಯೊಟೊ ಕಿರ್ಲೋಸ್ಕರ್ ಕಾರ್ಮಿಕರ ಪಾದಯಾತ್ರೆ



ದಲಿತ ಅಭಿವೃದ್ಧಿ ಹಣ ಬಳಕೆಗೆ ಸರ್ಕಾರದ ನಿರ್ಲಕ್ಷ್ಯ

ರೈತರ ಐಕ್ಯಚಳುವಳಿಯನ್ನು ಕೊಲ್ಲುವ ಸರಕಾರದ ಪ್ರಯತ್ನಗಳು ಬಯಲಾಗಿವೆ

ಜ.30–ಹುತಾತ್ಮ ದಿನದಂದು ದೇಶಾದ್ಯಂತ ರೈತರ ಉಪವಾಸ ಕಾರ್ಯಕ್ರಮ–ಸಂಯುಕ್ತ ಕಿಸಾನ್ ಮೋರ್ಚಾ

"ಕಳೆದ ಏಳು ತಿಂಗಳುಗಳ ಒಂದು ಶಾಂತಿಯುತ ಚಳುವಳಿಯ ಹೆಸರುಗೆಡಿಸುವ ಪಿತೂರಿ ಈಗ ಸಾರ್ವಜನಿಕರ ಎದುರು ಬಯಲಾಗಿದೆ. ಕೆಲವು ದೀಪ್ ಸಿಧುನಂತಹ ವ್ಯಕ್ತಿಗಳು ಮತ್ತು ಎಸ್.ಸತ್ನಾಮ್ ಸಿಂಗ್ ಪನ್ನು ನೇತೃತ್ವದ ಕಿಸಾನ್ ಮಜ್ದೂರ್ ಸಂಘರ್ಷ ಕಮಿಟಿಯಂತಹ ಸಂಘಟನೆಗಳ ಜೊತೆಗೆ ಸರಕಾರ ಈ ಚಳುವಳಿಯನ್ನು ಹಿಂಸಾತ್ಮಕಗೊಳಿಸಿದೆ. ಕೆಂಪು ಕೋಟೆ ಮತ್ತು ದಿಲ್ಲಿಯ ಇತರ ಭಾಗಗಳಲ್ಲಿ ನಡೆದಿರುವ ಹಿಂಸಾಚಾರಗಳಿಗೂ ನಮಗೂ ಸಂಬಂಧವಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟಪಡಿಸುತ್ತೇವೆ" ಎಂದು ಸಂಯುಕ್ತ ಕಿಸಾನ್ ಮೋರ್ಚಾ(ಎಸ್.ಕೆ.ಎಂ.) ಜನವರಿ 27ರಂದು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ. ಇದಕ್ಕೆ ಮೊದಲು ಮೋರ್ಚಾದ ಮುಖಂಡರ ಸಭೆ ನಡೆಯಿತು. ಈ ಕುರಿತು ಮೋರ್ಚಾದ ಮುಖಂಡರು ಒಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.

ಸಾರ್ವಜನಿಕರ ಮುಂದೆ ತೋರಿಸಿರುವಂತದ್ದು ಒಂದು ಸಂಚು. ರೈತರ ಪರೇಡ್ ಬಹುಪಾಲು ಶಾಂತಿಯುತವಾಗಿತ್ತು, ಮತ್ತು ಒಪ್ಪಿದ್ದ ಮಾರ್ಗಗಳಲ್ಲೇ ಸಾಗಿತ್ತು ಎಂದಿರುವ ಈ ಪತ್ರಿಕಾ ಹೇಳಿಕೆ ರಾಷ್ಟ್ರೀಯ ಸಂಕೇತಗಳಿಗೆ ಅವಮಾನ ಅಗಿರುವುದನ್ನು ಬಲವಾಗಿ ಖಂಡಿಸಿದೆ, ಆದರೆ, ಇದಕ್ಕಾಗಿ ರೈತರು 'ಹಿಂಸಾಚಾರ' ನಡೆಸಿದರು ಎಂದು ಬಣ್ಣ ಹಚ್ಚಲು ಸಾಧ್ಯವಿಲ್ಲ, ಏಕೆಂದರೆ, ಹಿಂಸಾಚಾರವನ್ನು ನಡೆಸಿದವರು ನಮ್ಮ ಜೊತೆಗಿರುವವರು ಅಲ್ಲ ಎಂದು ಅದು ಹೇಳಿದೆ. ಎಲ್ಲ ರೈತರೂ ತಂತಮ್ಮ ಪರೇಡ್‌ಗಳನ್ನು ಪೂರ್ಣಗೊಳಿಸಿ ದಿಲ್ಲಿಯ ಗಡಿಗಳಲ್ಲಿ ಸ್ವಸ್ಥಳಗಳಿಗೆ ಮರಳಿದ್ದಾರೆ.

ಪ್ರತಿಭಟನಾಕಾರರೊಂದಿಗೆ ಪೋಲೀಸರು ಅಮಾನುಷವಾಗಿ ವರ್ತಿಸಿದರು. ಪೋಲಿಸರು ಮತ್ತು ಇತರ ಏಜೆನ್ಸಿಗಳನ್ನು ಬಳಸಿ ಈ ಚಳುವಳಿಯನ್ನು ಕೊಲ್ಲುವ ಸರಕಾರದ ಪ್ರಯತ್ನಗಳು ಬಯಲಾಗಿವೆ. ಪರೇಡಿನಲ್ಲಿದ್ದ ಟ್ರಾಕ್ಟರುಗಳು ಮತ್ತು ಇತರ ವಾಹನಗಳನ್ನು ಜಖಂ ಮಾಡಲು, ಅವನ್ನು ವಶಕ್ಕೆ ಪಡೆಯಲು ಪ್ರಯತ್ನಿಸಿದ್ದಾರೆ.ಇಂತಹ ಪ್ರಯತ್ನಗಳನ್ನು ಖಂಡಿಸಿರುವ ಮೋರ್ಚಾ ಜನವರಿ 26ರಂದು ಬಂಧಿಸಿದ ಎಲ್ಲ ಶಾಂತಿಯುತ ಪ್ರತಿಭಟನಾಕಾರರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದೆ.

ಈ ಘಟನೆಗಳಲ್ಲಿ 110 ಪೋಲಿಸ್ ಸಿಬ್ಬಂದಿ ಮತ್ತು 215 ರೈತರು ಗಾಯಗೊಂಡಿದ್ದಾರೆ. 200 ಮಂದಿಯನ್ನು ಬಂಧಿಸಲಾಗಿದೆ ಮತ್ತು ದರ್ಶನ್‌ಪಾಲ್,



ಬುಟ್ಟಾಸಿಂಗ್ ಬುರ್ಜ್‌ಗಿಲ್, ರಾಜೇವಾಲ್, ರಾಕೇಶ್ ಟಿಕಾಯಿತ್, ಜೊಗಿಂದರ್ ಉಗ್ರಹಾನ್, ಯೋಗೇಂದ್ರ ಯಾದವ್, ಮೇಧಾ ಪಾಟ್ಕರ್ ಸೇರಿದಂತೆ 37 ಮುಖಂಡರ ಮೇಲೆ ಎಫ್‌ಐಆರ್ ಹಾಕಲಾಗಿದೆ ಎಂದು ವರದಿಯಾಗಿದೆ.

ರಾಷ್ಟ್ರೀಯ ಸಂಕೇತಗಳಿಗೆ ಅಗೌರವ ತೋರಿಸಿರುವವರು ಮತ್ತು ಅಪವಿತ್ರಗೊಳಿಸಿರುವವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಕೂಡ ಆಗ್ರಹಿಸಿರುವ ಅದು ರೈತರು ಅತಿ ದೊಡ್ಡ ರಾಷ್ಟ್ರಿಯವಾದಿಗಳು, ಅವರು ರಾಷ್ಟ್ರದ ಸುಪ್ರತಿಷ್ಠೆಯ ರಕ್ಷಕರು ಎಂದು ಹೇಳಿದೆ.

ಜನವರಿ 26ರ ಕೆಲವು ವಿಷಾದಕರ ಘಟನೆಗಳಿಗೆ ನೈತಿಕ ಹೊಣೆಗಾರಿಕೆಯನ್ನು ತೆಗೆದುಕೊಳ್ಳುತ್ತ ಸಂಯುಕ್ತ ಕಿಸಾನ್ ಮೋರ್ಚಾ ಫೆಬ್ರುವರಿ 1ರಂದು ನಡೆಸಬೇಕೆಂದಿದ್ದ ಸಂಸದ್ ಚಲೋ ಕಾರ್ಯಕ್ರಮವನ್ನು ಮುಂದೂಡಿರುವುದಾಗಿ ಪ್ರಕಟಿಸಿದೆ, ಮತ್ತು ಜನವರಿ 30ರಂದು, ಗಾಂಧೀಜಿಯವರು ಹುತಾತ್ಮರಾದ ದಿನದಂದು ಶಾಂತಿ ಮತ್ತು ಅಹಿಂಸೆಗೆ ಒತ್ತು ನೀಡಲು ದೇಶಾದ್ಯಂತ ಒಂದು ದಿನದ ಉಪವಾಸ ನಡೆಸಲಾಗುವುದು ಎಂದು ಹೇಳಿದೆ.

ದೀಪ್ ಸಿಧುನಂತಹ ವ್ಯಕ್ತಿಗಳ ಸಾಮಾಜಿಕ ಬಹಿಷ್ಕಾರ ನಡೆಸಬೇಕು ಎಂದು ಅದು ಸಾರ್ವಜನಿಕರಿಗೆ ಮನವಿ ಮಾಡಿದೆ.

ದಿಲ್ಲಿ ಮಾತ್ರವಲ್ಲ, ರೈತರ ಸಂಘಟನೆಗಳು ಕರೆ ನೀಡಿದ್ದ ಕಿಸಾನ್ ಗಣತಂತ್ರ ಪರೇಡ್ ಹಲವು ರಾಜ್ಯಗಳಲ್ಲಿ ನಡೆದಿವೆ. ಬಿಹಾರದಲ್ಲಿ ರೈತರು ಪಾಟ್ನಾ ಸೇರಿದಂತೆ ಹಲವು ಸ್ಥಳಗಳಲ್ಲಿ ಗಣತಂತ್ರ ದಿನಾಚರಣೆ ನಡೆಸಿದರು. ಮಧ್ಯಪ್ರದೇಶದಲ್ಲಿ ಪೂರ್ಣ ಉತ್ಸಾಹದಿಂದ ಈ ಭವ್ಯ ದಿನವನ್ನು ರೈತರು ಆಚರಿಸಿದರು. ದಿಲ್ಲಿಯಲ್ಲಿ ಜನವರಿ 26ರಂದು ಎನ್.ಎ.ಪಿ.ಎಂ. ಕಾರ್ಯಕರ್ತರು ರೈತರ ಪರೇಡಿನಲ್ಲಿ ಸೇರಿಕೊಂಡರು. ಮುಂಬೈಯಲ್ಲಿ ಆಜಾದ್ ಮೈದಾನದಲ್ಲಿ ಒಂದು ಬೃಹತ್ ರ್‍ಯಾಲಿ ನಡೆದಿದೆ. ಬೆಂಗಳೂರಿನಲ್ಲಿ ಸಾವಿರಾರು ರೈತರು ಕಿಸಾನ್ ಪರೇಡಿನಲ್ಲಿ ಭಾಗವಹಿಸಿದರು, ಅದು ಸಂಪೂರ್ಣ ಶಾಂತಿಯುತವಾಗಿ ನಡೆಯಿತು. ತಮಿಳುನಾಡು, ಕೇರಳ, ಹೈದರಾಬಾದ್, ಒಡಿಶ, ಪಶ್ಚಿಮ ಬಂಗಾಲ, ಛತ್ತಿಸ್‌ಗಡ ಮತ್ತು ಉತ್ತರಪ್ರದೇಶದಲ್ಲಿ ರೈತರು ಗಣತಂತ್ರ ಪರೇಡಿನಲ್ಲಿ ಭಾಗವಹಿಸಿದರು ಎಂದಿರುವ ಈ ಪತ್ರಿಕಾ ಹೇಳಿಕೆ ಮುಂಬರುವ ದಿನಗಳಲ್ಲಿ ಇತರ ಯೋಜನೆಗಳು ಮತ್ತು ಚಟುವಟಿಕೆಗಳನ್ನು ಪ್ರಕಟಿಸಲಾಗುವುದು ಎಂದಿದೆ.

"ನಮ್ಮ ಚಳುವಳಿ ಶಾಂತಿಯುತವಾಗಿಯೇ ಇರುತ್ತದೆ ಎಂದು ನಾವು ಸ್ಪಷ್ಟಪಡಿಸ ಬಯಸುತ್ತೇವೆ. ರೈತರು ವಿಶ್ವಾಸದಿಂದಿದ್ದಾರೆ, ಈ ಸರಕಾರದೊಂದಿಗೆ ಭಿನ್ನಮತವನ್ನು ಶಾಂತಿಯುತವಾಗಿ ತೋರಿಸುತ್ತಾರೆ. ಪರೇಡಿನಲ್ಲಿ ದಿಲ್ಲಿಯ ನಾಗರಿಕರ ಪ್ರೀತಿಯನ್ನು ಕಂಡು ನಾವು ಗದ್ಗದಿತರಾಗಿದ್ದೇವೆ" ಎಂದು ಸಂಯುಕ್ತ ಕಿಸಾನ್ ಮೋರ್ಚಾ ಪತ್ರಿಕಾ ಹೇಳಿಕೆಯ ಕೊನೆಯಲ್ಲಿ ಜನಗಳಿಗೆ ಕೃತಜ್ಞತೆಯನ್ನು ಸಲ್ಲಿಸಿದೆ.

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐ.ಕೆ.ಎಸ್‌ಸಿ.)ಯ ರಾಷ್ಟ್ರೀಯ ಕಾರ್ಯಕಾರಿ ಗುಂಪು ಇದರ ಒಬ್ಬ ಸದಸ್ಯರಾಗಿದ್ದ ವಿಎಂ ಸಿಂಗ್ ಹೋರಾಟದಿಂದ ಹಿಂತೆಗೆದುಕೊಳ್ಳುವುದಾಗಿ ನೀಡಿರುವ ಹೇಳಿಕೆ ಎಐ.ಕೆ.ಎಸ್‌ಸಿಸಿ. ಯ ಅಧಿಕೃತ ಹೇಳಿಕೆಯಲ್ಲ, ಅದಕ್ಕೂ ಎಐಕೆಎಸ್‌ಸಿಸಿ ಗೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಿದೆ.

ಗಾಜೀಪುರ ಗಡಿಯಿಂದ ಎಬ್ಬಿಸುವ ಪ್ರಯತ್ನಕ್ಕೆ ತೀವ್ರ ಪತ್ರಿರೋಧ ಸಂಸತ್ತಿನಲ್ಲಿ ರಾಷ್ಟ್ರಪತಿಗಳ ಭಾಷಣಕ್ಕೆ 18 ಪ್ರತಿಪಕ್ಷಗಳ ಬಹಿಷ್ಕಾರ

ದಿಲ್ಲಿಯನ್ನು ಪ್ರವೇಶಿಸುವ ಗಾಜೀಪುರ ಗಡಿಯಲ್ಲಿ ಪ್ರತಿಭಟಿಸುತ್ತಿರುವ ರೈತರನ್ನು ಅಲ್ಲಿಂದ ಬಲವಂತದಿಂದ ಎಬ್ಬಿಸಲು ಉತ್ತರಪ್ರದೇಶ ಪೋಲೀಸ್ ಮಾಡಿರುವ ಪ್ರಯತ್ನ ಸದ್ಯಕ್ಕೆ ವಿಫಲವಾಗಿದೆ. ಮೂಲ ಸೌಕರ್ಯಗಳನ್ನು ನಿಲ್ಲಿಸುವ ಮೂಲಕ ಈ ಪ್ರಯತ್ನ ಆರಂಭವಾಯಿತು. ಆರೆಸ್ಸೆಸ್–ಬಿಜೆಪಿ ಪ್ರಾಯೋಜಿತ ವ್ಯಕ್ತಿಗಳನ್ನು ಸ್ಥಳೀಯ ನಾಗರಿಕರೆಂದು ಕಳಿಸಲಾಯಿತು. ಆದರೆ ರೈತ ಮುಖಂಡರಾದ ರಾಕೇಶ್ ಟಿಕಾಯಿತ್, ತಜಿಂದರ್ ವಿರ್ಕ್, ಕೆ.ಕೆ. ರಾಗೇಶ್ ಮುಂತಾದವರು ಬಂದು ಸಾರ್ವಜನಿಕರಿಗೆ ಈ ಹೋರಾಟಕ್ಕೆ ಮಸಿ ಬಳೆಯುವ ಸರಕಾರದ ಹುನ್ನಾರಗಳನ್ನು ವಿವರಿಸಿದರು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಈ ಹೋರಾಟದ 65ನೇ ದಿನವಾದ ಜನವರಿ 28ರಂದು ನೀಡಿದ ಹೇಳಿಕೆಯಲ್ಲಿ ತಿಳಿಸಿದೆ. ಸರಕಾರದ ಹುನ್ನಾರಕ್ಕೆ ಪ್ರತಿಕ್ರಿಯೆಯಾಗಿ ಉತ್ತರಪ್ರದೇಶದ ಪಶ್ಚಿಮ ಭಾಗದಿಂದ ಮತ್ತು ಹರ್ಯಾಣದ ಇನ್ನಷ್ಟು ರೈತರು ಗಾಜೀಪುರ ಗಡಿಯತ್ತ ಧಾವಿಸಿ ಬರುತ್ತಿದ್ದು ಅಲ್ಲಿರುವ ಪ್ರತಿಭಟನಾಕಾರರ ಬಲ ಹೆಚ್ಚುತ್ತಿದೆ ಎಂದು ವರದಿಯಾಗಿದೆ.

ಜನವರಿ 26ರ ರೈತರ ಕಾರ್ಯಕ್ರಮದಿಂದ ನಡುಗಿ ಹೋಗಿರುವ ಸರಕಾರ ಈ ಚಳುವಳಿ ಹಿಂಸಾತ್ಮಕವಾಗಿದೆ ಎಂದು ಬಿಂಬಿಸಿ ಅದನ್ನು ಮುರಿಯಲು ಶತಪ್ರಯತ್ನ ನಡೆಸಿದೆ. ರೈತರು ಎರಡು ತಿಂಗಳಿಂದ ಪ್ರತಿಭಟಿಸುತ್ತಿರುವ ಎಲ್ಲ ಗಡಿ ಸ್ಥಳಗಳಲ್ಲಿ ಭದ್ರತಾಪಡೆಗಳನ್ನು ಹೆಚ್ಚಿಸಿದೆ. ಪಲ್ವಾಲ್‌ನಲ್ಲಿ ಕೆಲವು ಸ್ಥಳೀಯರನ್ನು ಮತ್ತು ಛಿದ್ರಕಾರಿಗಳನ್ನು ಛೂಬಿಟ್ಟು ಪ್ರತಿಭಟನಾಕಾರರನ್ನು ಎಬ್ಬಿಸುವ ಪ್ರಯತ್ನ ನಡೆದಿದೆ. ಅದರೆ ಸಂಯುಕ್ತ ಕಿಸಾನ್ ಮೋರ್ಚಾ ಮೂರು ಕರಾಳ ಕೃಷಿ ಕಾಯ್ದೆಗಳು ರದ್ದಾಗುವ ವರೆಗೆ ಮತ್ತು ಕನಿಷ್ಟ ಬೆಂಬಲ ಬೆಲೆಗೆ ಕಾನೂನಿನ ರೂಪ ಕೊಡುವ

ಪುಟ 10 ನೋಡಿ

ದುರಾಗ್ರಹ ಬಿಟ್ಟು ಕೃಷಿ ಕಾಯ್ದೆಗಳನ್ನು ರದ್ದು ಮಾಡಿ –ಮೋದಿ ಸರಕಾರಕ್ಕೆ ಎಡಪಕ್ಷಗಳ ಆಗ್ರಹ

ಕೇಂದ್ರ ಸರಕಾರ ತನ್ನ ಮೊಂಡುತನವನ್ನು ಬಿಡಬೇಕು, ಈ ವಾರ ಆರಂಬವಾಗಲಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಈ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಲಾಗುವುದು ಎಂದು ತಕ್ಷಣವೇ ರೈತರಿಗೆ ತಿಳಿಸಬೇಕು ಎಂದು ಎಡ ಪಕ್ಷಗಳು ಆಗ್ರಹಿಸಿವೆ. ಈಗಾಗಲೇ ಸರಕಾರ ಈ ಕಾಯ್ದೆಗಳನ್ನು ಹದಿನೆಂಟು ತಿಂಗಳು ಅವಾನತಿನಲ್ಲಿಡಲು ತಾನನು ಸಿದ್ಧ ಎಂದು ಹೇಳಿದೆ. ಸಂಸತ್ತು ಮಾಡಿರುವ ಶಾಸನಗಳು ರಾಷ್ಟಪತಿಗಳು ಸಹಿ ಮಾಡಿ, ರಾಜಪತ್ರ(ಗಜೆಟ್) ದಲ್ಲಿ ಅಧಿಸೂಚಿತಗೊಂಡ ಮೇಲೆ ಈ ನಾಡಿನ ಕಾನೂನುಗಳಾಗುತ್ತವೆ. ಅವನ್ನು ಅಮಾನತಿನಲ್ಲಿಡಲು ಸಾಧ್ಯವಿಲ್ಲ. ಅವನ್ನು ರದ್ದುಗೊಳಿಸದಿದ್ದರೆ ಜಾರಿಗೊಳಿಸಬೇಖಾಗುತ್ತದೆ. ಆದ್ದರಿಂದ ಸರಕಾರ ತರ್ಕಬದ್ಧವಾಗಿರಬೇಕು, ಈ ಕಾಯ್ದೆಗಳನ್ನು ರದ್ದು ಮಾಢಿ, ಕರ್ಷಕ ಸುಧಾರಣೆಗಳ ಬಗ್ಗೆ ರೈತರು ಮತ್ತು ರಾಜ್ಯಸರಕಾರಗಳೂ ಸೇರಿದಂತೆ ಇತರ ಭಾಗೀದಾರರೊಂದಿಗೆ ಚರ್ಚಿಸಬೇಕು, ಆನಂತರ ಯಾವುದಾದರೂ ಪ್ರಸ್ತಾವಗಳಿದ್ದರೆ ಅವುಗಳನ್ನು ಪರಿಶೀಲಿಸಲು ಮತ್ತು ಚರ್ಚಿಸಲು ಸಂಸತ್ತಿನ ಮುಂದೆ ತರಬೇಕು ಎಂಧು ಎಡಪಕ್ಷಗಳು ಸೂಚಿಸಿವೆ.

ದಿಲ್ಲಿಯ ಗಡಿಗಳಲ್ಲಿ ತೀವ್ರ ಚಳಿಗಾಳಿ ಎದುರಿಸುತ್ತಲೇ ಪ್ರತಿಭಟಿಸುತ್ತಿರುವ ಲಕ್ಷಾಂತರ ರೈತರು, ಮತ್ತು ಅವರಿಗೆ ಸೌಹಾರ್ದ ವ್ಯಕ್ತಪಡಿಸುತ್ತ ದೇಶಾದ್ಯಂತ ಶಾಂತಿಯುತವಾಗಿ ಪ್ರತಿಭಟಿಸುತ್ತಿರುವ ಇನ್ನೂ ಲಕ್ಷಾಂತರ ಜನಗಳ ದೃಢನಿರ್ಧಾರ, ಐಕ್ಯತೆ ಮತ್ತು ದೃಢ ಸಂಕಲ್ಪವನ್ನು ಎಡಪಕ್ಷಗಳು ಪ್ರಶಂಸಿಸಿವೆ. ಇದುವರೆಗೆ ಈ ಹೋರಾಟದಲ್ಲಿ ನೂರಕ್ಕೂ ಹೆಚ್ಚು ರೈತರು ಹುತಾತ್ಮರಾಗಿದ್ದಾರೆ. ಪ್ರತಿಭಟನಾ ಚಳುವಳಿಗಳು ದಿನೇದಿನೆ ಬಲಗೂಡಿಸಿಕೊಳ್ಳುತ್ತಿವೆ. ರೈತರು ನಮ್ಮ ಜಾತ್ಯತೀತ, ಪ್ರಜಾಸತ್ತಾತ್ಮಕ ಸಂವಿಧಾನದ ರಕ್ಷಣೆಗೆ ಮತ್ತು ಈ ಕಾಯ್ದೆಗಳ ರದ್ಧತಿಗೆ ಗಣತಂತ್ರ ದಿನದಂದು 'ಟ್ರಾಕ್ಟರ್ ಪರೇಡ್' ನಡೆಸುವ ದೃಢ ಸಂಕಲ್ಪವನ್ನು ಮಾಡಿದ್ದಾರೆ. ಇದು ಪ್ರಶಂಸಾರ್ಹ ಎನ್ನುತ್ತ ಎಡಪಕ್ಷಗಳು ನಮ್ಮ ಅನ್ನದಾತರ ಈ ಚಾರಿತ್ರಿಕ ಹೋರಾಟಕ್ಕೆ ಬೆಂಬಲ ಮತ್ತು ಸೌಹಾರ್ದವನ್ನು ಪುನರುಚ್ಛರಿಸುವುದಾಗಿ ಐದು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ಸಿಪಿ(ಎಂಎಲ್)–ಲಿಬರೇಷನ್, ಫಾರ್ವರ್ಡ್ ಬ್ಲಾಕ್ ಮತ್ತು ಆರ್.ಎಸ್..ಪಿ.ಯ ಪ್ರಧಾನ ಕಾರ್ಯದರ್ಶಿಗಳು ಜಂಟಿಯಾಗಿ ನೀಡಿರುವ ಹೇಳಿಕೆ ತಿಳಿಸಿದೆ

ಕೃಷಿ ಕಾಯ್ದೆಗಳನ್ನು ರದ್ದುಮಾಡಿ –ಕೇಂದ್ರ ಸರಕಾರಕ್ಕೆ ಮತ್ತೊಮ್ಮೆ ಸಿಪಿಐ(ಎಂ) ಆಗ್ರಹ

ಗಣತಂತ್ರ ದಿನದಂದು ರೈತ ಸಂಘಗಳು ಸಂಘಟಿಸಿದ ಬೃಹತ್ ಟ್ರಾಕ್ಟರ್ ಪರೇಡಿನಲ್ಲಿ ಒಂದು ಲಕ್ಷ ಟ್ರಾಕ್ಟರುಗಳು, ಲಕ್ಷಾಂತರ ರೈತರು ಭಾಗವಹಿಸಿ ಒಪ್ಪಿಕೊಂಡಿದ್ದ ಮಾರ್ಗಗಳಲ್ಲಿ ಶಾಂತಿಯುತವಾಗಿ ಸಾಗಿದರು, ಇದು ಪ್ರಶಂಸನೀಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ವರ್ಣಿಸಿದೆ.

ದೇಶದ ಎಲ್ಲ ರಾಜ್ಯಗಳಲ್ಲಿಯೂ ಇಂತಹುದೇ ಪರೇಡ್‌ಗಳು ಮತ್ತು ಇತರ ಸೌಹಾರ್ದ ಕಾರ್ಯಾಚರಣೆಗಳು ದೊಡ್ಡ ಪ್ರಮಾಣದಲ್ಲಿ ನಡೆದವು. ಈ ಹೋರಾಟ ಈ ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಮತ್ತು ಕನಿಷ್ಟ ಬೆಂಬಲ ಬೆಲೆಯನ್ನು ದೇಶದ ಎಲ್ಲ ರೈತರಿಗೆ ಒಂದು ಕಾನೂನಾತ್ಮಕ ಹಕ್ಕಾಗಿ ಶಾಸನ ಮಾಡಬೇಕು ಎಂದು ಒತ್ತುಕೊಟ್ಟು ಪುನರುಚ್ಚರಿಸಿದೆ. ಈ ಪ್ರತಿಗಾಮಿ ಕಾಯ್ದೆಗಳನ್ನು ರದ್ದು ಮಾಡುವ ವರೆಗೆ ಶಾಂತಿಯುತ ಹೋರಾಟವನ್ನು ಮುಂದುವರೆಸಲು ಸಂಯುಕ್ತ ಕಿಸಾನ್ ಮೋರ್ಚಾದ ನಿರ್ಧಾರದೊಂದಿಗೆ ಪೊಲಿಟ್‌ಬ್ಯುರೊ ಸಂಪೂರ್ಣ ಸೌಹಾರ್ದ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದೆ.

ಈ ಸಂದರ್ಭದಲ್ಲಿ ನಡೆದಿರುವ ಅಹಿತಕರ ಘಟನೆಗಳು ಪ್ರಧಾನ ಬೇಡಿಕೆಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಸಾಧ್ಯವಿಲ್ಲ. ಈ ಘಟನೆಗಳು ಗಲಭೆ ಪ್ರಚೋದಿಸುವ ಏಜೆಂಟರ ಕೃತ್ಯಗಳು, ಇವರಲ್ಲಿ ಕೆಲವರು ಆಳುವ ಪಕ್ಷದೊಂದಿಗೆ ಸಂಪರ್ಕ ಹೊಂದಿರುವವರು, ಇವನ್ನು ಸಮಸ್ತ ರೈತ ಆಂದೋಲನ ಖಂಡಿಸಿದೆ.

ಅದೇ ವೇಳೆಗೆ, ಟ್ರಾಕ್ಟರ್ ಪರೇಡಿಗೆ ಒಪ್ಪಿಕೊಂಡ ಮಾರ್ಗಗಳಲ್ಲೂ ಪೋಲೀಸರು ಅಡೆ–ತಡೆಗಳನ್ನು ಒಡ್ಡಿದ್ದು, ಹಲವೆಡೆಗಳಲ್ಲಿ ಲಾಠೀ ಪ್ರಹಾರ, ಅಶ್ರುವಾಯು ಪ್ರಯೋಗಗಳನ್ನು ನಡೆಸಿರುವುದು ಸಹಜವಾಗಿಯೂ ಆಕ್ರೋಶವನ್ನು ಪ್ರಚೋದಿಸಿದೆ. ಇಂತಹ ಕ್ರಿಯೆಗಳನ್ನು ಮನ್ನಿಸುವುದು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ತಕ್ಷಣವೇ ಈ ಕಾಯ್ದೆಗಳನ್ನು ರದ್ದು ಮಾಡುವುದಾಗಿ ಪ್ರಕಟಿಸಬೇಕು, ಮುಂಬರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಈ ಉದ್ದೇಶದತ್ತ ಸಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮತ್ತೊಮ್ಮೆ ಕೇಂದ್ರ ಸರಕಾರಕ್ಕೆ ಕರೆ ನೀಡಿದೆ.

ಕೇಂದ್ರ ಸರ್ಕಾರ ದೌರ್ಜನ್ಯ ದಬ್ಬಾಳಿಕೆಗಳನ್ನು ವಿರೋಧಿಸಿ ರೈತರ ಬೇಡಿಕೆಗಳನ್ನು ಪಡೆಯಲು

ಜನವರಿ 30, 2021 ರ "ಮಹಾತ್ಮ ಗಾಂಧೀಜಿ ಹುತಾತ್ಮ ದಿನ"ವನ್ನು "ಶಾಂತಿಯುತ ಸಂಘರ್ಷ ಸಂಕಲ್ಪ ದಿನ"ದಂದು ಸಾಮೂಹಿಕ ಉಪವಾಸ ಸತ್ಯಾಗ್ರಹ

ಜನವರಿ 30, 2021 ರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ರವರ ಹುತಾತ್ಮ ದಿನವನ್ನು ಕೇಂದ್ರ ಸರ್ಕಾರದ ದೌರ್ಜನ್ಯ ದಬ್ಬಾಳಿಕೆಗಳನ್ನು ವಿರೋಧಿಸಿ, ರೈತರ ಬೇಡಿಕೆಗಳನ್ನು ಪಡೆಯಲು 'ಶಾಂತಿಯುತ ಸಂಘರ್ಷ ಸಂಕಲ್ಪ ದಿನ'ವನ್ನಾಗಿ 'ಸಾಮೂಹಿಕ ಉಪವಾಸ ಸತ್ಯಾಗ್ರಹ'ದ ಮೂಲಕ ಆಚರಿಸಲು 'ಸಂಯುಕ್ತ ಹೋರಾಟ–ಕರ್ನಾಟಕ' ನಿರ್ಧಾರ ಮಾಡಿದೆ. ಅಂದು ಬೆಂಗಳೂರಿನ ಫ್ರೀಡಂ ಪಾರ್ಕ್ ಸೇರಿದಂತೆ ರಾಜ್ಯದ ಎಲ್ಲಾ ತಾಲೂಕ್ ಮತ್ತು ಜಿಲ್ಲಾ ಕೇಂದ್ರಗಳಲ್ಲಿ 'ಸಾಮೂಹಿಕ ಉಪವಾಸ ಸತ್ಯಾಗ್ರಹ'ದ ಹೋರಾಟಗಳು ನಡೆಯಲಿದ್ದು, ರಾಜ್ಯದ ರೈತರು, ದಲಿತರು, ಕಾರ್ಮಿಕರು, ವಿದ್ಯಾರ್ಥಿ, ಯುವಜನ, ಮಹಿಳೆಯರು ಹಾಗೂ ಎಲ್ಲಾ ದೇಶಪ್ರೇಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿಸಿದೆ.

ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳು, ವಿದ್ಯುತ್ ಮಸೂದೆಯನ್ನು ವಾಪಸ್ಸು ಪಡೆದು, ಡಾ. ಎಂ.ಎಸ್. ಸ್ವಾಮಿನಾಥನ್ ವರದಿಯನ್ವಯ ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಖಾತ್ರಿ ಮಾಡುವ ಕಾನೂನು ಜಾರಿ ಮಾಡಬೇಕೆಂದು ಲಕ್ಷಾಂತರ ರೈತರು ಕಳೆದ ಎರಡು ತಿಂಗಳುಗಳಿಂದ ದಿಲ್ಲಿಯ ಹೊರವಲಯದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಶಾಂತಿಯುತ ಚಾರಿತ್ರಿಕ ಹೋರಾಟವನ್ನೂ ನಡೆಸುತ್ತಿದ್ದಾರೆ. ಕಾರ್ಪೊರೇಟ್ ಕಂಪನಿಗಳ ಗುಲಾಮನಾಗಿರುವ ಕೇಂದ್ರ ಸರ್ಕಾರ, ರೈತರ ಬೇಡಿಕೆಗಳನ್ನು ಈಡೇರಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ ಮಾತ್ರವಲ್ಲ 'ಅನ್ನದಾತ' ರೈತರನ್ನು 'ದೇಶದ್ರೋಹಿಗಳು' 'ಚೀನಾ', 'ಪಾಕಿಸ್ತಾನ ಏಜೆಂಟರು', 'ಉಗ್ರಗಾಮಿಗಳು' ಎಂದು ಅಪಪ್ರಚಾರ ಮಾಡುತ್ತಾ, ಹೋರಾಟವನ್ನು ಛಿದ್ರಗೊಳಿಸಲು ಅನೇಕ ಪ್ರಯತ್ನಗಳನ್ನು ಮಾಡುತ್ತಾ ಬಂದಿತ್ತು. ಆದರೆ ಇಂತಹ ಯಾವುದೇ ಅಪಪ್ರಚಾರಗಳನ್ನು ಲೆಕ್ಕಿಸದೆ ದಿನ ದಿನಕ್ಕೆ ರೈತ ಹೋರಾಟ ಬಲಗೊಳ್ಳುತ್ತಿರುವುದನ್ನು ಕಂಡು ಹೆದರಿದ ಸರ್ಕಾರ, ಪೊಲೀಸ್, ಮಿಲಿಟರಿಯನ್ನು ಬಳಸಲು ವಿಫಲ ಯತ್ನಗಳನ್ನು ನಡೆಸಿತು.

ಆದರೆ ಈಗ ಐತಿಹಾಸಿಕ ಲಕ್ಷಾಂತರ ರೈತರು, ಟ್ರ್ಯಾಕ್ಟರ್‌ಗಳ ಜನ ಗಣರಾಜ್ಯೋತ್ಸವದ ಯಶಸ್ಸಿನಿಂದ ಮತ್ತಷ್ಟು ಕೆರಳಿರುವ ಸರ್ಕಾರದ ಕುತಂತ್ರಗಳ ಭಾಗವಾಗಿ ಜನವರಿ 26, 2021ರಂದು ದೆಹಲಿ ಮತ್ತು ದೆಹಲಿಯ ಕೆಂಪು ಕೋಟೆಯಲ್ಲಿ ನಡೆದ ಅಹಿತಕರ ಘಟನೆಗಳನ್ನು ಮುಂದೆ ಮಾಡಿ, ಕಾರ್ಪೊರೇಟ್ ಮಾಧ್ಯಮಗಳ ಮೂಲಕ ಶಾಂತಿಯುತ ರೈತ ಹೋರಾಟಕ್ಕೆ ಕಪ್ಪು ಮಸಿ ಬಳೆಯಲು ಪ್ರಯತ್ನಿಸುತ್ತಿರುವದರ ಜೊತೆಗೆ 'ಸಂಘ ಪರಿವಾರ ಶಕ್ತಿ'ಗಳನ್ನು 'ಸ್ಥಳೀಯರು' ಎನ್ನುವ ಹೆಸರಿನಲ್ಲಿ ಎತ್ತಿಕಟ್ಟಿ ಅವರುಗಳ ಜೊತೆಗೆ ಹತ್ತಾರು ಸಾವಿರ ಪೊಲೀಸ್, ಅರೆಸೇನಾ ಪಡೆಗಳನ್ನು ಬಳಸಿ ಶಾಂತಿಯುತ ಹೋರಾಟ ಮಾಡುತ್ತಿರುವ ರೈತರ ಮೇಲೆ ದೈಹಿಕ ದಾಳಿಗಳನ್ನು ನೆನ್ನೆಯಿಂದ ಶುರು ಮಾಡಿದ್ದಾರೆ. ನಿನ್ನೆ ಗಾಜಿಪುರ ಗಡಿಯಲ್ಲಿ ಶುರುವಾದ ದಾಳಿ ಇಂದು ಸಿಂಘು ಗಡಿಯಲ್ಲಿ ಮುಂದುವರೆದಿದೆ.

ಕೇಂದ್ರ ಸರ್ಕಾರ ಮತ್ತು ಸಂಘ ಪರಿವಾರದ ಪ್ರಜಾಪ್ರಭುತ್ವ–ವಿರೋಧಿ ಫ್ಯಾಸಿಸ್ಟ್ ದಾಳಿಗಳನ್ನು ಸಂಯುಕ್ತ ಹೋರಾಟ–ಕರ್ನಾಟಕ ಉಗ್ರವಾಗಿ ಖಂಡಿಸುತ್ತದೆ. ಕೂಡಲೇ ಇಂತಹ ದಾಳಿಗಳನ್ನು ನಿಲ್ಲಿಸಬೇಕೆಂದು ಆಗ್ರಹಿಸಿದೆ.

ದಿಲ್ಲಿ ಹೋರಾಟ ನಿರತ ರೈತರ ಮೇಲಿನ ದಾಳಿಗಳಿಂದ ಕೆರಳಿದ ರೈತರು ನಿನ್ನೆ ರಾತ್ರಿಯಿಂದ ಮತ್ತಷ್ಟು ದೊಡ್ಡ ಸಂಖ್ಯೆಯಲ್ಲಿ ಹೋರಾಟದ ಕೇಂದ್ರಗಳಲ್ಲಿ ಜಮಾವಣೆಯಾಗುತ್ತಿದ್ದಾರೆ. 'ಹಿಂಸೆ'ಯ ಹೆಸರಿನಲ್ಲಿ ರೈತ ಹೋರಾಟವನ್ನು ದಮನ ಮಾಡುವ ಕೇಂದ್ರ ಸರ್ಕಾರದ ಪ್ರಯತ್ನಗಳಿಗೆ ವಿರುದ್ಧವಾಗಿ ಶಾಂತಿದೂತ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಹುತಾತ್ಮ ದಿನ ಜನವರಿ 30, 2021 ರಂದು ದೇಶಾದ್ಯಂತ ಶಾಂತಿಯೂತ ಸಂಘರ್ಷದ ಸಂಕಲ್ಪದೊಂದಿಗೆ 'ಸಾಮೂಹಿಕ ಉಪವಾಸ ಸತ್ಯಾಗ್ರಹ'ದ ಹೋರಾಟಗಳನ್ನು ನಡೆಯುವುದರ ಮೂಲಕ ರೈತರ ಬೇಡಿಕೆಗಳನ್ನು ಪಡೆಯುವ 'ಶಾಂತಿಯುತ ಸಂಘರ್ಷ ದಿನ'ವನ್ನಾಗಿ ಆಚರಿಸಲು ಸಂಯುಕ್ತ ಕಿಸಾನ್ ಮೋರ್ಚಾ(ಎಸ್‌ಎಂಕೆ) ಕರೆ ನೀಡಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ಬೇಡಿಕೆಗಳ ಜೊತೆಗೆ, ರಾಜ್ಯ ಸರ್ಕಾರದ ಕಾರ್ಪೊರೇಟ್ ಕಂಪನಿಗಳಿಗೆ ಕೃಷಿ ಭೂಮಿ, ಕೃಷಿ ಮಾರುಕಟ್ಟೆಯನ್ನು ಒಪ್ಪಿಸಲು ಇತ್ತೀಚೆಗೆ ಅಂಗೀಕಾರ ಮಾಡಿರುವ ಭೂ ಸುಧಾರಣೆ ಕಾಯ್ದೆ ಮತ್ತು ಎಪಿಎಂಸಿ ಕಾಯ್ದೆ ತಿದ್ದುಪಡಿಗಳನ್ನು ವಾಪಸ್ಸು ಪಡೆಯಬೇಕು ಹಾಗು ಹೈನುಗಾರಿಕೆ, ಕೃಷಿ ಆರ್ಥಿಕತೆ, ಆಹಾರ ಹಕ್ಕಿನ ಪ್ರಶ್ನೆ ಇತ್ಯಾದಿ ಅಂಶಗಳಿಗೆ ಮಾರಕವಾಗಿರುವ ಗೋಹತ್ಯೆ ನಿಷೇಧ ಕಾಯ್ದೆಯ ಸುಗ್ರೀವಾಜ್ಞೆಯನ್ನು ವಾಪಸ್ ಪಡೆಯಬೇಕೆಂದು ರಾಜ್ಯದ ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿಯಾದ 'ಸಂಯುಕ್ತ ಹೋರಾಟ–ಕರ್ನಾಟಕ' ರಾಜ್ಯದ ಎಲ್ಲಾ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ರೈತರ ಬೇಡಿಕೆಗಳನ್ನು ಪಡೆಯಲು ಮಹಾತ್ಮ ಗಾಂಧೀಜೀಯವರ ಹುತಾತ್ಮ ದಿನವಾದ ಜನವರಿ 30, 2021 ನ್ನು 'ಶಾಂತಿಯುತ ಸಂಘರ್ಷ ಸಂಕಲ್ಪ' ದಿನವನ್ನಾಗಿ 'ಸಾಮೂಹಿಕ ಉಪವಾಸ ಸತ್ಯಾಗ್ರಹ'ದ ಮೂಲಕ ಹೋರಾಟಗಳನ್ನು ನಿರ್ಧರಿಸಿದೆ.

ಈ ಹೋರಾಟದಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸಿ, ಹೋರಾಟ ನಿರತ 'ಅನ್ನದಾತ'ನಿಗೆ ಶಕ್ತಿಯನ್ನು ನೀಡಬೇಕೆಂದು ಮತ್ತೊಮ್ಮೆ ವಿನಂತಿಸಿದೆ.

ಹಿರಿಯ ಕಾರ್ಮಿಕ ಮುಖಂಡ ಕಾ. ಎಸ್.ಬಿ. ಶಿವಶಂಕರ್‌ರವರಿಗೆ ಶ್ರದ್ಧಾಂಜಲಿ

ಶಿವಮೊಗ್ಗ ಜಿಲ್ಲೆಯ ನೆಚ್ಚಿನ ಕಾರ್ಮಿಕ ನಾಯಕ ಹಾಗೂ ಸಿ.ಐ.ಟಿ.ಯು. ಜಿಲ್ಲಾಧ್ಯಕ್ಷರಾದ ಕಾ. ಎಸ್.ಬಿ. ಶಿವಶಂಕರ್‌ರವರು 29 ಡಿಸೆಂಬರ್ 2020 ರಂದು ನಿಧನರಾಗಿದ್ದಾರೆ.

ಬಡಕುಟುಂಬದಲ್ಲಿ ಜನಿಸಿದ ಕಾ. ಶಿವಶಂಕರ್‌ರವರು ತಮ್ಮ ಪ್ರೌಢಶಾಲಾ ಶಿಕ್ಷಣ ಮುಗಿಸಿದ ನಂತರ ಸಮಾಜವಾದಿ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿದ್ದ ಇವರು, ತಮ್ಮ ಸಣ್ಣ ವಯಸ್ಸಿನ ದಿನಗಳಿಂದಲೂ ಅನ್ಯಾಯ, ಶೋಷಣೆಗಳ ವಿರುದ್ಧ ಸಿಡಿದೇಳುತ್ತಿದ್ದರು. ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ನಡೆಯುತ್ತಿದ್ದ ಉಳುವವನೆ ಭೂಮಿಗೆ ಒಡೆಯ ಹೋರಾಟಗಳು ಇವರಿಗೆ ಇನ್ನಷ್ಟು ಸ್ಫೂರ್ತಿಯನ್ನು ನೀಡಿದವು. 1971ರಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಇದರ ಸದಸ್ಯರಾದರು. ದಿ. ಕಾ. ಚಂದುಕುಟ್ಟಿಯವರ ಅನುಯಾಯಿಯಾಗಿದ್ದ ಇವರು, ಅನೇಕ ವರ್ಷಗಳ ಕಾಲ ಪಕ್ಷದಲ್ಲಿ ಸಕ್ರಿಯರಾಗಿದ್ದು ಕಾರ್ಮಿಕ ಸಂಘಟನೆಗಳನ್ನು ಕಟ್ಟಲು ಮುಂದಾದರು. ಖಾಸಗಿ ಸಾರಿಗೆ ನೌಕರರ ಸಂಘ, ಹಮಾಲಿ ಕಾರ್ಮಿಕರ ಸಂಘ, ಶಿವಮೊಗ್ಗ ಪೇಪರ್ ಪ್ಯಾಕೇಜ್ ಕಾರ್ಮಿಕರ ಸಂಘ, ಗ್ರಾಮ ಪಂಚಾಯತ್ ನೌಕರರ ಸಂಘ, ಐ.ಓ.ಸಿ. ಕಾರ್ಮಿಕರ ಸಂಘ, ಭದ್ರಾವತಿ ವಿಐಎಸ್‌ಎಲ್ ಕಾರ್ಮಿಕ ಸಂಘ, ಸಣ್ಣ ಕೈಗಾರಿಕೆಗಳ ಕಾರ್ಮಿಕ ಸಂಘ, ಕೆಎಸ್‌ಆರ್‌ಟಿಸಿ ನೌಕರರ ಸಂಘ, ಬಿಸಿಯೂಟ ನೌಕರರ ಸಂಘ, ಅಂಗನವಾಡಿ ಕಾರ್ಯಕರ್ತರ ಸಂಘ, ಮೆಡಿಕಲ್ ರೆಪ್ರೆಸೆಂಟಟಿವ್‌ಗಳ ನೌಕರರ ಸಂಘ, ಭದ್ರಾವತಿ ವಿಐಎಸ್‌ಎಲ್ ಗುತ್ತಿಗೆ ಕಾರ್ಮಿಕರ ಸಂಘ, ಮುಂತಾದವುಗಳನ್ನು ಸಂಘಟಿಸಿ ನೇತೃತ್ವವನ್ನು ನೀಡಿ ಕಾರ್ಮಿಕರಿಗೆ ಆಗುತ್ತಿದ್ದ ಅನ್ಯಾಯ ಶೋಷಣೆಗಳ ವಿರುದ್ಧ ಹೋರಾಟ ನಡೆಸಿ,



ಜಿಲ್ಲೆಯ ಸಮಸ್ತ ಕಾರ್ಮಿಕರ ಧ್ವನಿಯಾಗಿದ್ದರು. ಕಾರೆಹಳ್ಳಿ ಭೂರಹಿತರ ಭೂಮಿ ಹೋರಾಟದ ಮುಂಚೂಣಿಯಲ್ಲಿದ್ದು ಜಿಲ್ಲೆಯ ಗಮನ ಸೆಳೆದಿದ್ದರು. ಭದ್ರಾವತಿಯ ವಿ.ಐ.ಎಸ್.ಎಲ್.ನ ಕಾರ್ಮಿಕರಿಗೆ ಸಮಸ್ಯೆಯಾದಾಗ ಮತ್ತು ಭದ್ರಾವತಿ ಪೇಪರ್ ಮಿಲ್ ಲಾಕೌಟ್ ಆದಾಗ ಕಾರ್ಮಿಕರನ್ನು ಸಂಘಟಿಸಿ, ರಾಜ್ಯ ಕಾರ್ಮಿಕ ಮುಖಂಡ ಕಾಮ್ರೇಡ್ ಎಸ್. ಸೂರ್ಯನಾರಾಯಣರಾವ್‌ರವರನ್ನು ಭದ್ರಾವತಿಗೆ ಕರೆತಂದು ಲಾಕೌಟ್ ತೆರೆವುಗೊಳಿಸುವಲ್ಲಿ ಮತ್ತು ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಎಲ್ಲೆಲ್ಲಿ ಕಾರ್ಮಿಕರಿಗೆ ಅನ್ಯಾಯ, ಶೋಷಣೆ ನಡೆಯುತ್ತಿದ್ದವೋ ಅಲ್ಲೆಲ್ಲ ಇವರು ಕಾರ್ಮಿಕರನ್ನು ಸಂಘಟಿಸಿ, ನೇತೃತ್ವ ನೀಡಿ ಹೋರಾಟವನ್ನು ಮುನ್ನಡೆಸಿ ಕಾರ್ಮಿಕರ ಹಿತ ಕಾಯುತ್ತಿದ್ದರು. ಅಲ್ಲದೆ, ಅನೇಕ ಕಾರ್ಮಿಕ ಸಂಘಗಳಿಗೆ ಮಾರ್ಗದರ್ಶಕರಾಗಿದ್ದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾರ್ಮಿಕ ವಿರೋಧಿ ನೀತಿಗಳನ್ನು ಕಾರ್ಯರೂಪಕ್ಕೆ ತರುವಾಗ ಅದರ ವಿರುದ್ಧ ಕಾರ್ಮಿಕರ ಐಕ್ಯ ಚಳುವಳಿಯನ್ನು ಕಟ್ಟಿ ಹೋರಾಟಗಳನ್ನು ಯಶಸ್ವಿಗೊಳಿಸುವಲ್ಲಿ ಶಿವಮೊಗ್ಗ ಜಿಲ್ಲೆಯ ಮುಂಚೂಣಿ ನಾಯಕರಾಗಿದ್ದರು. ಇಂಥ ಮಹಾನ್ ಕಾರ್ಮಿಕ ನಾಯಕ ಇತ್ತೀಚಿನ ಕೆಲವು ತಿಂಗಳುಗಳಿಂದ ತೀವ್ರ ತರಹದ ಮಧುಮೇಹ ರೋಗಕ್ಕೆ ತುತ್ತಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಚಿಕಿತ್ಸೆ ಫಲಕಾರಿಯಾಗದೆ 29 ಡಿಸೆಂಬರ್ 2020 ರಂದು ಬೆಳಿಗ್ಗೆ 11.20ಕ್ಕೆ ಕೊನೆಯುಸಿರೆಳೆದರು.

ಕಾರ್ಮಿಕ ನಾಯಕನ ಗೌರವಾರ್ಥ ಶ್ರದ್ಧಾಂಜಲಿ ಸಭೆಯೊಂದನ್ನು ಶಿವಮೊಗ್ಗದ ಎನ್.ಇ.ಎಸ್. ಸಭಾಂಗಣದಲ್ಲಿ ದಿನಾಂಕ 24 ಜನವರಿ 2021 ರಂದು ನಡೆಯಿತು. ಕಾರ್ಯಕ್ರಮದಲ್ಲಿ ಜಿಲ್ಲೆಯ ಈ ಕೆಳಗಿನ ವಿವಿಧ ರಾಜಕೀಯ ಪಕ್ಷಗಳ ನಾಯಕರು, ರಾಜ್ಯ ಕಾರ್ಮಿಕ ಮುಖಂಡರು, ಪತ್ರಕರ್ತ, ಬಂಧುಗಳು, ಮಾತನಾಡಿ ಕಾಮ್ರೇಡ್ ಶಿವಶಂಕರ್‌ರವರು ಕಾರ್ಮಿಕರಿಗಾಗಿ ನಡೆಸಿದ ಹೋರಾಟಗಳು ಮತ್ತು ಶಿವಮೊಗ್ಗ ಜಿಲ್ಲೆಯ ಕಾರ್ಮಿಕ ಹೋರಾಟಗಳ ಚರಿತ್ರೆಯ ಮೇಲೆ ಬೆಳಕು ಚೆಲ್ಲಿದರು.

ಶ್ರೀಯುತ ರಮೇಶ್ ಹೆಗ್ಡೆ, ಶಿವಮೊಗ್ಗ ನಗರ ಪಾಲಿಕೆ ಸದಸ್ಯರು, ಕಾಂಗ್ರೆಸ್ ಪಕ್ಷದ ಜಿಲ್ಲಾ ಮುಖಂಡರು, ಶ್ರೀಯುತ ಎಂ. ಶ್ರೀಕಾಂತ್, ರಾಜ್ಯ ಪ್ರಧಾನ ಕಾರ್ಯದರ್ಶಿ, ಜನತಾದಳ (ಜಾತ್ಯಾತೀತ), ಶ್ರೀಯುತ ಚಂದ್ರಕಾಂತ್, ಸಂಪಾದಕರು, ಶಿವಮೊಗ್ಗ ಟೈಂಮ್ಸ್ ಪತ್ರಿಕೆ, ಕಾ. ಡಿ.ಸಿ. ಮಾಯಣ್ಣ, ರಾಜ್ಯ ಮಂಡಳಿ ಸದಸ್ಯರು, ಭಾರತ ಕಮ್ಯುನಿಸ್ಟ್ ಪಕ್ಷ, ಕರ್ನಾಟಕ,ಕಾ. ಡಾ. ಪ್ರಕಾಶ್, ರಾಜ್ಯ ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ಸಾರಿಗೆ ನೌಕರರ ಒಕ್ಕೂಟ, ಉಪಾಧ್ಯಕ್ಷರು ರಾಜ್ಯ ಸಿಐಟಿಯು, ಕಾ. ಎಂ.ಬಿ. ನಾಡಗೌಡರು, ರಾಜ್ಯ ಉಪಾಧ್ಯಕ್ಷರು, ಗ್ರಾಮ ಪಂಚಾಯತ್ ನೌಕರರ ಸಂಘ ಹಾಗೂ ಸಿಐಟಿಯು ರಾಜ್ಯ ಕಾರ್ಯದರ್ಶಿ, ಶ್ರೀಯುತ ಶಿವಾನಂದ ಕುಗ್ವೆ, ರೈತ ನಾಯಕರು ಮತ್ತು ಸಾಮಾಜಿಕ ಹೋರಾಟಗಾರರು, ಸಾಗರ, ಕಾ. ರಂಗೇಗೌಡ, ಹಿರಿಯ ಕಾರ್ಮಿಕ ನಾಯಕರು, ಭದ್ರಾವತಿ.

ಕಾ. ಅನಂತರಾಮು ವಿವಿಧ ನಾಯಕರನ್ನು ಮತ್ತು ಸಭೆಯಲ್ಲಿ ಭಾಗವಹಿಸಿದ್ದ ಸಾರ್ವಜನಿಕರನ್ನು ಮತ್ತು ಕಾರ್ಮಿಕರನ್ನು ಸ್ವಾಗತಿಸಿದರು. ಕಾರ್ಯಕ್ರಮದ ಬಗ್ಗೆ ಪ್ರಸ್ತಾವನೆಯನ್ನು ಜಿಲ್ಲಾ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳಾದ ಕಾ. ನಾರಯಣ್ ಮಾಡಿ ಕಾ. ಶಿವಶಂಕರ್‌ರವರು ಜಿಲ್ಲೆಯಲ್ಲಿ ಬಡ ಕಾರ್ಮಿಕರ ಮೇಲೆ ಇಟ್ಟಿದ್ದ ಕಾಳಜಿ ಮತ್ತು ಅವರ ಹೋರಾಟ ಮನೋಭಾವದ ಬಗ್ಗೆ ಸಭೆಗೆ ತಿಳಿಸಿದರು. ಸಭೆಯಲ್ಲಿ, ದಾಸೋಹ (ಬಿಸಿಯೂಟ) ನೌಕರರ ಸಂಘ, ಅಂಗನವಾಡಿ ನೌಕರರ ಸಂಘ, ಗ್ರಾಮ ಪಂಚಾಯತ್ ನೌಕರರ ಸಂಘ, ಕೆಎಸ್‌ಆರ್‌ಟಿಸಿ ನೌಕರರ ಸಂಘ, ವಿಐಎಸ್‌ಎಲ್ ಗುತ್ತಿಗೆ ನೌಕರರ ಸಂಘ, ಐಓಸಿ ಕಾರ್ಮಿಕ ಸಂಘ, ಮೆಡಿಕಲ್ ರೆಪ್ರಸೆಂಟಟಿವ್ಸ್‌ರವರ ಸಂಘ, ವಿಮಾ ನೌಕರರ ಸಂಘ ಮುಂತಾದ ಕಾರ್ಮಿಕ ಸಂಘಟನೆಯ ನಾಯಕರು ಮತ್ತು ಕಾರ್ಮಿಕರು ಭಾಗವಹಿಸಿ ಅಗಲಿದ ನಾಯಕರಿಗೆ ಶ್ರದ್ಧಾಂಜಲಿ ಅರ್ಪಸಿದರು. ದಿವಾಂಗತ ಶಿವಶಂಕರ್‌ರವರ ಧರ್ಮಪತ್ನಿ ಶ್ರೀಮತಿ ರೇಣುಕರವರು ತಮ್ಮ ಪತಿಯ ಸಮಾಜ ಸೇವೆ ಮತ್ತು ಕುಟುಂಬದ ಸದಸ್ಯರೊಂದಿಗಿನ ತಮ್ಮ ಭಾಂಧವ್ಯಗಳ ಸಭೆಗೆ ಭಾವಪೂರ್ಣವಾಗಿ ತಿಳಿಸಿದರು.

ಕೊನೆಯಲ್ಲಿ ಕಾ. ಪ್ರಭಾಕರನ್ ಸಭೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಧನ್ಯವಾದ ಸಮರ್ಪಿಸಿದರು.

ಮಂಗಳೂರು, ಉಡುಪಿಗಳಲ್ಲಿ ರೈತರನ್ನು ಬೆಂಬಲಿಸಿ ಗಣರಾಜ್ಯ ಪರೇಡ್



ವರದಿ: **ವಾ.ಉ.**

ದೆಹಲಿಯಲ್ಲಿ ಜನವರಿ 26 ರಂದು ಸಂಯುಕ್ತ ಕಿಸಾನ್ ಮೋರ್ಚಾ ವತಿಯಿಂದ ನಡೆದ ರೈತರ ಗಣರಾಜ್ಯ ಪರೇಡ್‌ಗೆ ಬೆಂಬಲವಾಗಿ ಕರಾವಳಿಯ ಜಿಲ್ಲಾ ಕೇಂದ್ರಗಳಾದ ಮಂಗಳೂರು ಮತ್ತು ಉಡುಪಿಯಲ್ಲೂ ಮೆರವಣಿಗೆ ಹಾಗೂ ಬಹಿರಂಗ ಸಭೆಗಳು ಭಾರೀ ಜನತೆಯ ಭಾಗವಹಿಸುವಿಕೆಯೊಂದಿಗೆ ನಡೆದು, ಸರಕಾರದ ಗಣರಾಜ್ಯ ಪರೇಡ್‌ಗಳಿಗೆ ಪರ್ಯಾಯವಾಗಿ ಜನಪರ್ಯಾಯ ಗಣರಾಜ್ಯ ಉತ್ಸವಗಳು ನಡೆದುವು.

ಮಂಗಳೂರು: ದ.ಕ.ಜಿಲ್ಲಾ ರೈತ, ಕಾರ್ಮಿಕ, ದಲಿತ ಜನಪರ ಚಳುವಳಿಗಳ ಒಕ್ಕೂಟದ ವತಿಯಿಂದ ನಡೆದ ಪಥಸಂಚಲನ ಅಪರಾಹ್ನ ಮಂಗಳೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ ಆರಂಭವಾಗಿ ಲೇಡಿಗೋಷನ್ ಆಸ್ಪತ್ರೆ, ಕ್ಲಾಕ್ ಟವರ್‌ನಿಂದಲಾಗಿ ನೆಹರೂ ಮೈದಾನವನ್ನು ಸುತ್ತುವರಿದು ಮಂಗಳೂರು ತಾಲೂಕು ಮಿನಿವಿಧಾನಸೌಧದ ಎದುರು ರಸ್ತೆ ಬದಿಯಲ್ಲೇ ನಿರ್ಮಿಸಿದ್ದ ವೇದಿಕೆ ಸುತ್ತ ಸಮಾವೇಶಗೊಂಡಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ರವಿಕಿರಣ ಪುಣಚ, ಪ್ರಾಂತ ರೈತ ಸಂಘದ ದ.ಕ.ಜಿಲ್ಲಾ ಕಾರ್ಯದರ್ಶಿ ಯಾದವ ಶೆಟ್ಟಿ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ ಅಲ್ಲದೆ ದಸಂಸ (ಅಂಬೇಡ್ಕರ್ ವಾದ), ಎಐಟಿಯುಸಿ, ಜಿಲ್ಲಾ ದಲಿತ್ ಸೇವಾ ಸಮಿತಿ, ಜನವಾದಿ ಮಹಿಳಾ ಸಂಘ, ರಾಜ್ಯ ರೈತ ಸಂಘ ಹಾಗೂ ಎನ್‌ಜಿಓ ಪ್ರಮುಖರು ಮಾತನಾಡಿದರು. ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಘಟಕರಾದ ಎಂ.ದೇವದಾಸ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ ಪಥ ಸಂಚಲನದ ಮಾರ್ಗದರ್ಶನ ಹಾಗೂ ಬಹಿರಂಗ ಸಭೆಯ ನಿರೂಪಣೆ ಹಾಗೂ ಸ್ವಾಗತ ನಡೆಸಿಕೊಟ್ಟರು. ಡಿವೈಎಫ್‌ಐನ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ವಂದಿಸಿದರು.

2 ಟ್ರಾಕ್ಟರ್‌ಗಳು, ನೂರಾರು ರಾಷ್ಟ್ರಧ್ವಜಗಳು, ಖ್ಯಾತ ವ್ಯಂಗ್ಯಚಿತ್ರಕಾರರ ವ್ಯಂಗ್ಯಚಿತ್ರಗಳನ್ನು ಒಳಗೊಂಡ ಪ್ಲೇಕಾರ್ಡ್‌ಗಳು, ಬ್ಯಾಂಡ್ ಸೆಟ್‌ಗಳೊಂದಿಗೆ ಚಾಲನೆಗೊಂಡ ಪಥಸಂಚಲನಕ್ಕೆ ಇನ್ನೂರಕ್ಕೂ ಮೀರಿದ ಡಿವೈಎಫ್‌ಐ ಕಾರ್ಯಕರ್ತರು ಧರಿಸಿದ್ದ ರೈತರನ್ನು ಪ್ರತಿನಿಧಿಸುವ ಟೀ ಶರ್ಟುಗಳು ವಿಶೇಷ ಕಳೆ ನೀಡಿದವು. ಏಳುನೂರರಷ್ಟು ಸಾರ್ವಜನಿಕರನ್ನು ಒಳಗೊಂಡ ಪಥಸಂಚಲನದಲ್ಲಿ ನೀಲಿ ಶಾಲಿನ ದಲಿತರು, ಅಲ್ಪಸಂಖ್ಯಾತ ಮುಸ್ಲಿಮರು, ಕ್ರೈಸ್ತರು, ಕಾರ್ಮಿಕರು, ಹಸಿರು ಕೆಂಪು ಶಾಲುಗಳ ರೈತ ಪ್ರತಿನಿಧಿಗಳು ಭಾಗವಹಿಸಿ ವಿಶೇಷವಾದ ಮೆರವಣಿಗೆ ಎನಿಸಿತು. ಕೋವಿಡ್ ಕಾರಣದಿಂದಾಗಿ 10 ತಿಂಗಳಿನಿಂದಲೂ ನಡೆಯದಿದ್ದ ಬೃಹತ್ ಮೆರವಣಿಗೆಯೊಂದು ಶಾಂತಿಯುತವಾಗಿ ನಡೆಯಿತು.

ಸಿಐಟಿಯು ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಯು.ಬಿ.ಲೋಕಯ್ಯ, ರಾಮಣ್ಣ ವಿಟ್ಲ, ಕೆ.ಪಿ.ಜಾನಿ ಸುಳ್ಯ, ವಿಲ್ಲಿ ವಿಲ್ಸನ್, ರಮಣಿ ಮೂಡಬಿದ್ರಿ, ಪ್ರಾಂತ ರೈತ ಸಂಘದ ಕೃಷ್ಣಪ್ಪ ಸಾಲ್ಯಾನ್, ಎಸ್.ಎಂ.ಶಿವಕುಮಾರ್, ಎಸ್. ಎಂ.ಹರಿದಾಸ್, ವಾಸುದೇವ ಉಚ್ಚಿಲ, ಸದಾಶಿವ ದಾಸ್, ಜೆ.ಎಂ.ಎಸ್‌ನ ಪದ್ಮಾವತಿ ಶೆಟ್ಟಿ, ಭಾರತಿ ಬೋಳಾರ್, ದಸಂಸ (ಬಿ.ಕೃಷ್ಣಪ್ಪ ಸ್ಥಾಪಿತ)ದ ರಘು ಎಕ್ಕಾರು, ದಸಂಸ (ಅಂಬೇಡ್ಕರ್‌ವಾದ)ದ ಚಂದು ಎಲ್, ಆದಿವಾಸಿ ಹಕ್ಕುಗಳ ಸಮಿತಿಯ ಡಾ.ಕೃಷ್ಣಪ್ಪ ಕೊಂಚಾಡಿ, ಶೇಖರ ಲಾಯಿಲ, ಡಿಎಚ್‌ಎಸ್‌ನ ತಿಮ್ಮಯ್ಯ ಕೊಂಚಾಡಿ, ಕೃಷ್ಣ ತಣ್ಣೀರುಬಾವಿ, ಡಿವೈಎಫ್‌ಐನ ಬಿ.ಕೆ.ಇಮ್ತಿಯಾಜ್, ಅಶ್ರಫ್ ಕೆಸಿರೋಡ್, ಸುನಿಲ್ ತೇವುಲ, ನವೀನ್ ಕೊಂಚಾಡಿ, ಮಾಜಿ ಕಾರ್ಪರೇಟರ್ ದಯಾನಂದ ಶೆಟ್ಟಿ, ಎಐಟಿಯುಸಿಯ ಶೇಖರ್ ಬಿ, ಎಚ್.ವಿ.ರಾವ್, ದಲಿತ್ ಸೇವಾ ಸಮಿತಿಯ ಸೇಸಪ್ಪ ಬೆದ್ರಕಾಡು, ಕರಾವಳಿ ಕರ್ನಾಟಕ ಜನಾಭಿವೃದ್ಧಿ ವೇದಿಕೆಯ ವಿದ್ಯಾ ದಿನಕರ್, ಶಬೀರ್, ಎಐಎಲ್‌ಯೂನ ಯಶವಂತ ಮರೋಳಿ, ರಾಮಚಂದ್ರ ಬಬ್ಬುಕಟ್ಟೆ, ಬಿಇಎಫ್‌ಐನ ಬಿ.ಎಂ.ಮಾಧವ, ಬ್ಯಾಂಕ್ ಅಧಿಕಾರಿಗಳ ಸಂಘದ ಕೆ.ರಾಘವ, ರಂಗಕರ್ಮಿ ಶಾಮಸುಂದರ್ ರಾವ್, ಕವಿ ವಿಲ್ಸನ್ ಕಟೀಲ್, ಸಮುದಾಯದ ಮನೋಜ್ ವಾಮಂಜೂರು, ಬರಹಗಾರ್ತಿ ಗುಲಾಬಿ ಬಿಳಿಮಲೆ, ಸಾಮಾಜಿಕ ಕಾರ್ಯಕರ್ತೆ ರೀಟಾ ನೊರೊನ್ಹಾ ಈ ಪಥಸಂಚಲನ ಹಾಗೂ ಬಹಿರಂಗ ವಿಚಾರ ಮಂಥನದಲ್ಲಿ ಭಾಗವಹಿಸಿದ್ದರು.

ಉಡುಪಿ: ಉಡುಪಿಯ ಬೋರ್ಡ್ ಹೈಸ್ಕೂಲ್‌ನಿಂದ ಅಜ್ಜರಕಾಡು ಹುತಾತ್ಮ ಸ್ಮಾರಕದವರೆಗೆ ಗಣರಾಜ್ಯ ಪರ್ಯಾಯ ಕಾಲ್ನಡಿಗೆ ಜಾಥಾ ನಡೆಯಿತು. ಉಡುಪಿಯ ಸಾಮೂಹಿಕ ಸಂಘಟನೆಗಳ ಐಕ್ಯ ವೇದಿಕೆಯ ನೇತೃತ್ವದಲ್ಲಿ ಈ ಮೆರವಣಿಗೆ ನಡೆದು, ಅಜ್ಜರಕಾಡಿನಲ್ಲಿ ಪ್ರತಿಭಟನಾ ಬಹಿರಂಗ ಸಭೆ ನಡೆಯಿತು.

ಸ್ವತಂತ್ರ ಭಾರತದ ಯಾವುದೇ ಕಾಯಿದೆಗಳಲ್ಲಿ ಇಲ್ಲದ ಕಾನೂನಿನ ಮೂಲಕ ನ್ಯಾಯ ಪಡೆಯುವಂತಹ ಅಧಿಕಾರವನ್ನು ಈ ರೈತ ಕಾಯಿದೆಗಳು ಕಿತ್ತುಕೊಳ್ಳಲಿವೆ. ಈ ನ್ಯಾಯಿಕ ಅಧಿಕಾರವನ್ನು ಈಗ ರೈತರಿಂದ ಕಿತ್ತುಕೊಂಡರೆ ಮುಂದೆ ಕಾರ್ಮಿಕರು ನಾಗರಿಕರಿಂದಲೂ ಕಿತ್ತುಕೊಳ್ಳಲಿದ್ದಾರೆ. ಹೀಗೆ ಇಡೀ ದೇಶವು ಫ್ಯಾಸಿಸ್ಟ್ ಹಾಗೂ ಕಾರ್ಪೊರೇಟ್ ಪಾಳೇಗಾರಿ ದಾಸ್ಯಕ್ಕೆ ಒಳಪಡಲಿದೆ ಎಂಬುದಾಗಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಸಾಹಿತಿ ಹಾಗೂ ಚಿಂತಕ ಪ್ರೊ.ಫಣಿರಾಜ್ ಆತಂಕ ವ್ಯಕ್ತಪಡಿಸಿದರು.

ರೈತರಿಗೆ ನ್ಯಾಯ ಸಿಗದಂತೆ ಮಾಡುವ ಮತ್ತು ಕಾರ್ಪೊರೇಟ್ ಪಾಳೇಗಾರಿಕೆಯನ್ನು ತರಲು ಈ ಕಾಯ್ದೆಗಳನ್ನು ಅಣಿಗೊಳಿಸಲಾಗುತ್ತಿದೆ. ಹೀಗೆ ಪ್ರಜಾಪ್ರಭುತ್ವ, ನಾಗರಿಕ ಹಾಗೂ ಸಂವಿಧಾನ ವಿರೋಧಿ ಕಾಯ್ದೆ ಇದಾಗಿದೆ ಎಂದು ಹೇಳಿದ ಅವರು, ಸರ್ವಾಧಿಕಾರಿ ಹಾಗೂ ಬಂಡವಾಳಶಾಹಿಗಳನ್ನು ರಕ್ಷಿಸುವ ಈ ಕಾಯ್ದೆಯು ರಾಜ್ಯಗಳ ಶಾಸನ ಸಭೆಗಳ ಅಧಿಕಾರಗಳನ್ನೇ ಕಿತ್ತುಕೊಳ್ಳಿದೆ ಎಂದು ಅವರು ದೂರಿದರು.

ದಸಂಸ (ಅಂಬೇಡ್ಕರ್‌ವಾದ)ದ ಜಿಲ್ಲಾ ಸಂಚಾಲಕ ಸುಂದರ ಮಾಸ್ತರ್,ಧರ್ಮಗುರು ಫಾ.ವಿಲಿಯಂ ಮಾರ್ಟಿಸ್ ಕೂಡಾ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮೆರವಣಿಗೆ ಮತ್ತು ಬಹಿರಂಗ ಸಭೆಗಳಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ, ಶಶಿಧರ ಗೊಲ್ಲ, ದಸಂಸ ಜಿಲ್ಲಾ ಮುಖಂಡರು, ಜಿಲ್ಲಾ ಮುಸ್ಲಿಂ ಒಕ್ಕೂಟದ ಮುಖಂಡರು, ಹಲವಾರು ಸಾಮಾಜಿಕ ಕಾರ್ಯಕರ್ತರು, ಪ್ರೊ.ಸಿರಿಲ್ ಮಥಾಯಸ್, ಜನಾರ್ಧನ ಭಂಡಾರ್ಕರ್, ಡಾ.ಸುನೀತಾ ಶೆಟ್ಟಿ ಭಾಗವಹಿಸಿದ್ದರು.

ಸರಕಾರೀ ಮೆಡಿಕಲ್ ಕಾಲೇಜು ಆರಂಭಿಸಲು ಸುಳ್ಯದಲ್ಲಿ ಧರಣಿ:

ದ.ಕ. ಜಿಲ್ಲೆಯ ಪುತ್ತೂರು ತಾಲೂಕಿನ ಬನ್ನೂರಿನಲ್ಲಿ ಮೆಡಿಕಲ್ ಕಾಲೇಜಿಗಾಗಿ ಈಗಾಗಲೇ ಜಮೀನನ್ನು ಸರಕಾರ ಕಾದಿರಿಸಿದ್ದರೂ ಈ ಬಗ್ಗೆ ಮಾತೆತ್ತದಿರುವ ಕ್ರಮವನ್ನು ಜನವರಿ 27 ರಂದು ಸುಳ್ಯ ತಾಲೂಕು ಕಚೇರಿ ಎದುರು ಧರಣಿ ಹೂಡಿದ್ದ ಸರಕಾರೀ ಆಸ್ಪತ್ರೆ ಉಳಿಸಿ ಸುಳ್ಯ ತಾಲೂಕು ಹೋರಾಟ ಸಮಿತಿ ಖಂಡಿಸಿತು.

ಸಿಐಟಿಯು, ರಾಜ್ಯ ರೈತ ಸಂಘ, ದಲಿತ ಸಂಘಟನೆಗಳು ಹಾಗೂ ಸಾಮಾಜಿಕ ಕಾರ್ಯಕರ್ತರನ್ನೊಳಗೊಂಡು ಹೋರಾಟ ಸಮಿತಿ ರಚಿತವಾಗಿದ್ದು, ದ.ಕ.ಜಿಲ್ಲೆಯಲ್ಲಿ ಸರಕಾರೀ ಆಸ್ಪತ್ರೆಗಳನ್ನು ಬಲಪಡಿಸುವಂತೆ 7 ತಾಲೂಕುಗಳಲ್ಲಿ ಈಗಾಗಲೇ ಇಂಥ ಸಮಿತಿಗಳಿಂದ ಒಂದು ಹಂತದ ಪ್ರತಿಭಟನಾ ಧರಣಿ ಸತ್ಯಾಗ್ರಹಗಳು ನಡೆದಿವೆ. ಹಲವು ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಆಶ್ರಯ ಒದಗಿಸಿಕೊಟ್ಟ ಜಿಲ್ಲೆಯ ಶಾಸಕರುಗಳು ಕಾದಿರಿಸಲಾದ ಜಮೀನು ಇದ್ದಾಗಲೂ ಸರಕಾರೀ ಮೆಡಿಕಲ್ ಕಾಲೇಜು ಆರಂಭಿಸಲು ಆಗ್ರಹಿಸದಿರುವುದು ವಿಷಾದನೀಯ ಎಂದು ಸತ್ಯಾಗ್ರಹಿಗಳು ಟೀಕಿಸಿದರು.

ಧರಣಿ ಸತ್ಯಾಗ್ರಹವನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಿಐಟಿಯು ಸುಳ್ಯ ತಾಲೂಕು ಮುಖಂಡರಾದ ಕೆ.ಪಿ. ಜಾನಿ, ಸಂತೋಷ್ ಬಜಾಲ್ ಮಾತನಾಡಿದರು.

ದೊಡ್ಡರಂಗೇಗೌಡ ವಿವಾದಾತ್ಮಕ ಹೇಳಿಕೆಗೆ ವ್ಯಾಪಕ ಖಂಡನೆ

'ಹಿಂದಿ ರಾಷ್ಟ್ರ ಭಾಷೆ, ಅದಕ್ಕೆ ವಿರೋಧ ಸಲ್ಲದು' ಎಂದು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ದೊಡ್ಡರಂಗೇಗೌಡ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ. ಇವರ ಹೇಳಿಕೆಗೆ ಸಾಕಷ್ಟು ವಿರೋಧ ವ್ಯಕ್ತವಾಗಿದೆ.

ಹಾವೇರಿಯಲ್ಲಿ ನಡೆಯಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ ಆಯ್ಕೆ ಆದ ಬಳಿಕ ಮಾತನಾಡಿದ ಅವರು ಹಿಂದಿ ನಮ್ಮ ರಾಷ್ಟ್ರೀಯ ಭಾಷೆ. ಇಲ್ಲಿ ಕನ್ನಡ ಅನ್ನುವುದೂ ಹೇಗೋ ಹಾಗೇ ಹಿಂದಿ ಭಾಷೆ ಎಂದು ಹೇಳಿರುವುದು ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಕನ್ನಡ ಭಾಷೆಯು ರಂಗಭೂಮಿ, ಸಾಹಿತ್ಯ, ಜಾನಪದ ಹಾಗೂ ನಾನಾ ಕಲೆಗಳ ಅಭಿವೃದ್ಧಿಗೆ ಕನ್ನಡ ಭಾಷೆಯ ಪಾತ್ರ ಮಹತ್ವವಾದದ್ದು. ಅತಿ ಹೆಚ್ಚು ಜ್ಞಾನ ಪೀಠ ಪ್ರಶಸ್ತಿಯನ್ನು ಪಡೆದ ಭಾಷೆ ಎಂಬ ಹೆಗ್ಗಳಿಕೆಯು ಕನ್ನಡ ಭಾಷೆಗಿದೆ. ಈಗ ಹಿಂದಿ ಹೇರಿಕೆ, ಇಂಗ್ಲಿಷ್ ವ್ಯಾಮೋಹಕ್ಕೆ ಸಿಕ್ಕು ಕನ್ನಡ ಭಾಷೆ ಮೂಲೆಗುಂಪಾಗುತ್ತಿದೆ ಎಂದು ಹಿರಿಯ ಸಾಹಿತಿಗಳ ಅಭಿಪ್ರಾಯ.

ಕನ್ನಡ ನಾಡು ನುಡಿ ಕನ್ನಡ ಭಾಷೆಯ ಮೆರಗು ಸಾರುವ ಮತ್ತು ಕನ್ನಡ ಭಾಷೆಯ ಇತಿಹಾಸ, ಅದರ ಸಾಧಕ ಬಾಧಕಗಳನ್ನು ಪ್ರಚುರಪಡಿಸಲು ವೇದಿಕೆಯಾಗಿರುವುದೇ ಈ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ. ಈ ಸಮ್ಮೇಳ ಕನ್ನಡಿಗರ ಹೆಮ್ಮೆ.

ಇಂತಹ ಕನ್ನಡ ಸಾಹಿತ್ಯ ಸಮ್ಮೇಳಕ್ಕೆ ಕನ್ನಡಕ್ಕಾಗಿ ಅವಿರತ ದುಡಿದ, ಕನ್ನಡ ಭಾಷೆಗೆ ತಮ್ಮ ಅತ್ಯಮೂಲ್ಯ ಕೊಡುಗೆಗಳನ್ನು ನೀಡಿದ ಸಾಹಿತಿಗಳು, ಕವಿಗಳನ್ನು ಗುರುತಿಸಿ ಅವರನ್ನು ಈ ಸಮ್ಮೇಳನ ಅಧ್ಯಕ್ಷರನ್ನಾಗಿ ನಿಯೋಜಿಸಲಾಗುತ್ತದೆ.

ಪ್ರಗಾಥಗಳ ಸಾಮ್ರಾಟ್ ಎಂದು ಪ್ರಸಿದ್ಧಿರಾದ ಕನ್ನಡದ ಕವಿ, ಸಾಹಿತಿ ಮತ್ತು ಕನ್ನಡ ಚಲನಚಿತ್ರ ಸಾಹಿತಿಗಳಲ್ಲೊಬ್ಬರು ಆದ ದೊಡ್ಡರಂಗೇಗೌಡ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿರುವುದು ಖುಷಿಯ ವಿಚಾರ. ಆದರೆ ಇಂತಹ ಸಾಹಿತಿಗಳೇ ಕನ್ನಡವನ್ನು ಕಡೆಗಣಿಸಿದರೇ ಕನ್ನಡ ಭಾಷೆ ಮತ್ತಷ್ಟು ಕೆಳಸ್ಥರದಲ್ಲಿ ಕುಗ್ಗಲಿದೆ ಎಂದು ಚಿಂತಕರು, ಕನ್ನಡ ಹೋರಾಟಗಾರರ ಆರೋಪಿಸಿದ್ದಾರೆ. ●

ಪೊಲೀಸ್ ಠಾಣೆಗೆ ಕರೆಯಿಸಿ ಹಂಪನಾ ವಿಚಾರಣೆಗೆ ವ್ಯಾಪಕ ಖಂಡನೆ

ಇದು ಆಕಸ್ಮಿಕ ಹೇಳಿಕೆಯಲ್ಲ. ಇದು ಹಿಂದಿ ಸಾಮ್ರಾಜ್ಯಶಾಹಿಯ ರಾಜಕೀಯ ಅಜೆಂಡಾದ ಭಾಗ. ಕನ್ನಡವನ್ನು ಕನ್ನಡಿಗರಿಂದ ದಮನಗೊಳಿಸುವುದು ಈ ಸಾಮ್ರಾಜ್ಯಶಾಹಿಯ ಕುತಂತ್ರ. ತೇಜಸ್ವಿ ಸೂರ್ಯ, ಸಿ.ಟಿ. ರವಿ ಥರದವರು ಆಗಾಗ ಹಿಂದಿ ಹೇರಿಕೆ ಪರವಾಗಿ ಬ್ಯಾಟ್ ಬೀಸುವುದನ್ನು ನಾವು ಗಮನಿಸಿದ್ದೇವೆ. ಈಗ ಸಾಹಿತಿಗಳ ಬಾಯಿಂದಲೂ ಅದನ್ನೇ ಹೇಳಿಸುತ್ತಿದ್ದಾರೆ. ಹಿಂದಿ ಸಾಮ್ರಾಜ್ಯಶಾಹಿಯ ಗುರಿ ದೇಶವನ್ನು ಹಿಂದಿಯನ್ನರು ಮಾತ್ರ ಆಳಬೇಕು, ಹಿಂದಿಯೇತರರು ಎರಡನೇ ದರ್ಜೆ ಪ್ರಜೆಗಳಾಗಬೇಕು. ಮುಂಬರುವ ದಿನಗಳಲ್ಲಿ ದೇಶದ ಎಲ್ಲ ರಾಜ್ಯಗಳಲ್ಲೂ ಹಿಂದಿಯನ್ನೇ ಅಧಿಕೃತ ಭಾಷೆಯನ್ನಾಗಿ ಮಾಡಬೇಕು. ಹಿಂದಿಯೇತರ ತಾಯ್ನುಡಿಗಳನ್ನೆಲ್ಲ ನಾಶಮಾಡಿ ದೇಶಕ್ಕೆ ಒಂದೇ ಭಾಷೆ ಇರುವಂತೆ ಮಾಡುವುದು ಆಗಿದೆ ಎಂಬುದು ಚಿಂತಕರವಾದವಾಗಿದೆ.

ಹಿಂದಿ ಭಾರತದ ರಾಷ್ಟ್ರಭಾಷೆ ಎಂಬ ಡಾ. ದೊಡ್ಡರಂಗೇಗೌಡರ ಹೇಳಿಕೆಯನ್ನು ಕನ್ನಡ ಸಂಘರ್ಷ ಸಮಿತಿ ಖಂಡಿಸುತ್ತದೆ ಎಂದು ಅಧ್ಯಕ್ಷ ಕೋ.ವೆಂ. ರಾಮಕೃಷ್ಣೇಗೌಡ ಹೇಳಿದ್ದಾರೆ. ಹಿಂದಿ ರಾಷ್ಟ್ರ ಭಾಷೆಯಲ್ಲ ಅದು ಕೇವಲ ಸಂಪರ್ಕ ಭಾಷೆ ಮಾತ್ರ ಭಾರತವು ಭಾಷಿಕ ರಾಷ್ಟ್ರಗಳ ಒಕ್ಕೂಟ ಹೊರತು ಏಕಸಂಸ್ಕೃತಿಯ ರಾಷ್ಟ್ರವಲ್ಲ ಎಂದು ಅವರು ಹೇಳಿದ್ದಾರೆ.

ದೊಡ್ಡರಂಗೇಗೌಡರಂಥವರು ಈ ಹಿಂದಿ ಸಾಮ್ರಾಜ್ಯಶಾಹಿಯ ಸಣ್ಣ ಹತಾರಗಳಲ್ಲಿ ಒಂದು. ಅಂಥವರನ್ನು ಹೇಗೆ ಬಳಸಿ ಬಿಸಾಡುವುದೆಂಬುದು ಅದಕ್ಕೆ ಚೆನ್ನಾಗಿ ಗೊತ್ತಿದೆ. ಹಿಂದೀಕರಣದ ಅಪಾಯಗಳ ಬಗ್ಗೆ ಅತ್ಯಂತ ಸ್ಪಷ್ಟ ತಿಳಿವಳಿಕೆ, ದೂರಾಲೋಚನೆ ಇದ್ದಿದ್ದು ರಾಷ್ಟ್ರಕವಿ ಕುವೆಂಪು ಅವರಿಗೆ ಮಾತ್ರವೇ. ಆದರೆ ಆ ಕಾಲದಿಂದಲೂ ನಮ್ಮ ಸಾಹಿತಿಗಳು ಹಿಂದಿಯ ಅಪಾಯಗಳ ಕುರಿತು ಮಾತನಾಡಲೇ ಇಲ್ಲ, ಗಂಭೀರವಾಗಿ ತೆಗೆದುಕೊಳ್ಳಲೇ ಇಲ್ಲ.

ಈಗಲೂ ಅಷ್ಟೆ, ಹಿಂದಿಹೇರಿಕೆ ಕುರಿತು ಜಾಗೃತಿ ಮೂಡಿಸುತ್ತ, ಮುಂಬರುವ ಅಪಾಯಗಳ ಕುರಿತು ಹೆಚ್ಚುಹೆಚ್ಚು ಮಾತನಾಡುತ್ತಿರುವುದು ಕನ್ನಡಪರ ಚಳವಳಿಗಾರರೇ ಹೊರತು ಸಾಹಿತಿಗಳಲ್ಲ. ಕರ್ನಾಟಕ ರಕ್ಷಣಾ ವೇದಿಕೆ ನಮ್ಮ ಮೆಟ್ರೋದಲ್ಲಿನ ಹಿಂದಿ ಹೇರಿಕೆಯನ್ನು ತೀವ್ರರೂಪದಲ್ಲಿ ಪ್ರತಿಭಟಿಸಿ ಒಂದೇ ದಿನ, ಒಂದೇ ಸಮಯದಲ್ಲಿ ಎಲ್ಲ ನಿಲ್ದಾಣಗಳಿಗೆ ನುಗ್ಗಿ ಅಲ್ಲಿನ ಬೋರ್ಡುಗಳನ್ನು ಕಿತ್ತು ಎಸೆದಾಗ ಬಹಳಷ್ಟು ಸಾಹಿತಿಗಳು ಮೌನವಾಗೇ ಇದ್ದರು. ಅಪಾಯ ತುಂಬ ದೊಡ್ಡದಿದೆ. ಕತ್ತಿ ನಮ್ಮವರೇ ಹಾಕಿ ತಿವಿದರೆ ಅದೇನು ಹೂವೇ ಎಂದು ಪ್ರಶ್ನಿಸಿದ್ದರು ಕುವೆಂಪು. ಈಗ ತಿವಿಯುತ್ತಿರುವವರು ನಮ್ಮವರೇ. ಕನ್ನಡಕ್ಕಿಂತ ದೊಡ್ಡವರು, ದೊಡ್ಡದು ಯಾರೂ, ಯಾವುದೂ ಇಲ್ಲ. ಇದನ್ನು ದೊಡ್ಡರಂಗೇಗೌಡರಂಥವರಿಗೆ ಅರ್ಥ ಮಾಡಿಸುವುದು ಹೇಗೆ? ನಿದ್ದೆ ಮಾಡುತ್ತಿರುವವರನ್ನು ಎಬ್ಬಿಸಬಹುದು, ನಿದ್ದೆ ಮಾಡುತ್ತಿರುವಂತೆ ನಟಿಸುತ್ತಿರುವವರನ್ನು ಹೇಗೆ ಎಬ್ಬಿಸುವುದು? ಎಂದು ದಿನೇಶ್ ಕುಮಾರ್ ಎಸ್.ಸಿ. ಯವರು ಪ್ರಶ್ನಿಸಿದ್ದಾರೆ.

ದಲಿತರ ಅಭಿವೃದ್ಧಿ ಹಣ ಬಳಕೆಗೆ ಸರಕಾರದ ನಿರ್ಲಕ್ಷ್ಯ

ದಲಿತರ ಅಭಿವೃದ್ಧಿಗಾಗಿ ಇರುವಂತಹ ಎಸ್.ಸಿ. ಎಸ್.ಟಿ./ ಟಿ.ಎಸ್.ಪಿ ಉಪ ಯೋಜನೆ ಸಮರ್ಪಕವಾಗಿ ಜಾರಿಯಾಗ್ತಾ ಇದೆಯಾ? ದಲಿತರ ಉದ್ಧಾರಕ್ಕಾಗಿ ಮೀಸಲಾಗಿರುವ 28 ಸಾವಿರ ಕೋಟಿ ರೂ. 39 ಇಲಾಖೆಯಲ್ಲಿ ಹರಿದು ಹಂಚಿ ಹೋಗುತ್ತಿರುವುದಕ್ಕೆ ಕಾರಣವಾದರೂ ಏನು? ಯೋಜನೆ ಇದ್ದೂ ಅದು ದಲಿತರಿಗೆ ಸಿಗದಿರುವುದಕ್ಕೆ ಕಾರಣವೇನು? ಅಚ್ಚರಿ ಬಿಳಿಸಿದೆ ಸರ್ಕಾರದ ಹೇಳಿಕೆಗಳು.

ಕರ್ನಾಟಕದಲ್ಲಿ ಅಸಮಾನ ಶ್ರೇಣಿಕೃತ ತಳ ಸಮುದಾಯಗಳೆಂದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು. ಇವರು ಸಾಮಾಜಿಕವಾಗಿ ಅಸ್ಪೃಶ್ಯತೆಗೆ ಒಳಗಾಗಿರುವುದು ಗಂಭೀರ ಸಮಸ್ಯೆಯಾಗಿದೆ. ಈ ಸಮುದಾಯಗಳ ಆರ್ಥಿಕ ಸಮಸ್ಯೆಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಈ ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಲಗೊಳ್ಳಲು ಹೋರಾಟಗಳು ನಡೆಯುತ್ತಿವೆ. ಆಳುವ ಸರಕಾರಗಳು ದಲಿತರ ಅಭಿವೃದ್ಧಿಗಾಗಿ ಉಪ ಯೋಜನೆಗಳನ್ನು ತರುತ್ತಿವೆ. ಆ ಯೋಜನೆಗಳು ದಲಿತರಿಗೆ ತಲುಪುತ್ತಿವೆಯಾ ಎನ್ನುವ ಪ್ರಶ್ನೆಯೂ ಸಹಜವಾಗಿ ಮೂಡುತ್ತಿದೆ ಹಾಗಾದರೆ ಆ ಯೋಜನೆಗಳು ಯಾವುವು?

1975 ರಲ್ಲಿ ಪರಿಶಿಷ್ಟ ಪಂಗಡದ ಜನರ ಅಭಿವೃದ್ಧಿಗಾಗಿ ವಿಶೇಷ ಗಮನ ಹರಿಸಲು ಕೇಂದ್ರ ಸರಕಾರದಿಂದ ಟ್ರೈಬಲ್ ಸಬ್ ಪ್ಲಾನ್ ಅಂದ್ರೆ ಟಿ.ಎಸ್.ಪಿ ಅಂತಾ ಏನು ಕರೆಯುತ್ತೇವೆ ಅದನ್ನು ರೂಪಿಸಲಾಯಿತು. ತದನಂತರ ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯನ್ನು ರೂಪಿಸಲಾಯಿತು. ಆಗಿನ ಕೇಂದ್ರ ಯೋಜನಾ ಆಯೋಗದ ಮಾರ್ಗ ಸೂಚಿಗಳಂತೆ ಯೋಜನಾ ವೆಚ್ಚದಲ್ಲಿ ಎಲ್ಲಾ ರಾಜ್ಯ ಸರಕಾರಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಮಿಸಲಿಡಲು ಸೂಚಿಸಲಾಗಿತ್ತು.

ಆದರೆ ರಾಜ್ಯ ಸರಕಾರಗಳು ಜನಸಂಖ್ಯೆ ಆಧಾರದ ಮೇಲೆ ಅನುದಾನವನ್ನು ಹಂಚಿಕೆ ಮಾಡುತ್ತಿರಲಿಲ್ಲ. ಅಭಿವೃದ್ಧಿಗಾಗಿ ಹಣ ಬೇಕು ಎಂದು ಸಂಘಟನೆಗಳು ಹೋರಾಟವನ್ನು ನಡೆಸಿದವು ಪರಿಣಾಮ ಕರ್ನಾಟಕ ರಾಜ್ಯದಲ್ಲಿ 2013 ರಲ್ಲಿ ಕರ್ನಾಟಕ ಅನುಸುಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡಕಟ್ಟುಗಳ ಉಪ ಹಂಚಿಕೆ ಅಧಿನಿಯಮವನ್ನು ಜಾರಿ ಮಾಡಲಾಯಿತು.

ಕ್ರ.ಸಂ	ವರ್ಷ	ಎಸ್.ಸಿ.ಎಸ್.ಪಿ (ರೂ.ಕೋಟಿಗಳಲ್ಲಿ)	ಟಿ.ಎಸ್.ಪಿ (ರೂ.ಕೋಟಿಗಳಲ್ಲಿ)	ಒಟ್ಟು (ರೂ.ಕೋಟಿಗಳಲ್ಲಿ)
1	2014–15 ರಲ್ಲಿ	11518.99 ಕೋಟಿ	4315.18 ಕೋಟಿ	15834.17 ಕೋಟಿ
2	2015–16 ರಲ್ಲಿ	11773.54 ಕೋಟಿ	4582.72 ಕೋಟಿ	16356.26 ಕೋಟಿ
3	2016–17 ರಲ್ಲಿ	14253.26 ಕೋಟಿ	5631.67 ಕೋಟಿ	19884.93 ಕೋಟಿ
4	2017–18 ರಲ್ಲಿ	19647.58 ಕೋಟಿ	8314.76 ಕೋಟಿ	27962.34 ಕೋಟಿ
5	2018–19	20957. 15 ಕೋಟಿ	8766.42 ಕೋಟಿ	29723.57 ಕೋಟಿ
6	2019–20	21602. 63 ಕೋಟಿ	8842.36 ಕೋಟಿ	30444. 99 ಕೋಟಿ

ಈ ಕಾಯ್ದೆಯ ಪ್ರಕಾರ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನಸಂಖ್ಯೆಗೆ ತಕ್ಕಂತೆ ಅಭಿವೃದ್ಧಿ ಆಯವ್ಯಯದಲ್ಲಿ (ಡವಲೆಪ್ ಮೆಂಟ್ ಬಜೆಟ್) ಎಸ್.ಸಿ. ಎಸ್, ಪಿ/ ಟಿ.ಎಸ್.ಪಿ ಅಡಿಯಲ್ಲಿ ಅನುದಾನ ಹಂಚಿಕೆ ಮಾಡಲಾಗುತ್ತಿದೆ. ಅನುದಾನ ವೆಚ್ಚ ಮಾಡದೆ ಇದ್ರೆ ಅಂದ್ರೆ ಖರ್ಚು ಮಾಡದೆ ಇದ್ದರೆ ಲೆಕ್ಕ ತಪಾಸಣೆ ನಡೆಸಿ ನಂತರ ಆರ್ಥಿಕ ವರ್ಷದಲ್ಲಿ ಬಳೆಸಲು ಅವಕಾಶವನ್ನು ಕಲ್ಪಿಸಲಾಗಿದೆ.

ಕಾಯ್ದೆ ಜಾರಿಗೆ ಬಂದ ನಂತರ ಬಜೆಟ್ ನಲ್ಲಿ ಸರಕಾರ ಹಂಚಿಕೆ ಮಾಡಿರುವ ಅನುದಾನವನ್ನು ಕೋಷ್ಟಕದಲ್ಲಿ ನೋಡಬಹುದು.

ಈ ಉಪ ಯೋಜನೆಯ ಹಣವನ್ನು ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ, ವಸತಿ ಸೌಕರ್ಯಗಳಿಗೆ, ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ, ಎಸ್.ಸಿ.ಎಸ್.ಟಿ. ವಿದ್ಯಾರ್ಥಿಗಳಿಗೆ ವಿವಿಧ ಕೋರ್ಸಗಳನ್ನು ಪಡೆಯುವುದಕ್ಕಾಗಿ, ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯಗಳನ್ನು ಪಡೆಯುವದಕ್ಕಾಗಿ, ಕಾಲೋನಿಗಳಿಗೆ ಮೂಲ ಸೌಲಭ್ಯಗಳನ್ನು ಪಡೆಯುವದಕ್ಕಾಗಿ, ಮಕ್ಕಳಿಗೆ ಪೌಷ್ಠಿಕ ಆಹಾರ ನೀಡುವುದಕ್ಕಾಗಿ, ಭೂ ರಹಿತ ಕೃಷಿ ಕಾರ್ಮಿಕರಿಗೆ ಖಾಸಗೀ ಜಮೀನನ್ನು ಖರಿದಿಸಲು, ಆರೋಗ್ಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ, ಕುಡಿಯುವ ನೀರಿನ ಯೋಜನೆಗೆ, ಪಿಂಚಣಿ ಯೋಜನೆಗೆ, ಅನ್ನ ಭಾಗ್ಯ ಯೋಜನೆ ಸೇರಿದಂತೆ ಇತರೆ ಇಲಾಖೆಗಳಿಗೆ ವಿತರಿಸಲಾಗುತ್ತದೆ.

ಪರಿಶಿಷ್ಟ ಸಮುದಾಯದ ಅಭಿವೃದ್ಧಿಗಾಗಿ 'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ)' ಅಡಿ 2020–21ನೇ ಸಾಲಿನಲ್ಲಿ ವಿವಿಧ ಇಲಾಖೆಗಳಿಗೆ ಪರಿಷ್ಕೃತಗೊಳಿಸಿ ಹಂಚಿಕೆ ಮಾಡಲಾದ ಒಟ್ಟು –25,616 ಕೋಟಿ. ಇದರಲ್ಲಿ ಡಿಸೆಂಬರ್ ಅಂತ್ಯದವರೆಗೆ –12,154 ಕೋಟಿ ರೂ (ಶೇ 47.45) ಮಾತ್ರ ವೆಚ್ಚವಾಡಲಾಗಿದೆ. ಬಜೆಟ್‌ನಲ್ಲಿ –27,699 ಕೋಟಿ ಅನುದಾನ ಹಂಚಿಕೆ ಮಾಡಿದ್ದರೂ, ಕೋವಿಡ್ ಕಾರಣದಿಂದ –2,083 ಕೋಟಿ ಕಡಿತಗೊಳಿಸಲಾಗಿತ್ತು. ಒಟ್ಟು 39 ಇಲಾಖೆಗಳಿಗೆ ಅನುದಾನ ಹಂಚಿಕೆ ಮಾಡಲಾಗಿದೆ. ಆದರೆ, ಮಾತೃಇಲಾಖೆಗಳಾದ ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ವಿವಿಧ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಅನುದಾನದಲ್ಲಿ ಶೇ 44ನ್ನು ಮಾತ್ರ ವೆಚ್ಚಮಾಡಲಾಗಿದೆ ಎಂದು ಸರಕಾರದ ಅಂಕಿ ಅಂಶಗಳೆ ಹೇಳುತ್ತಿವೆ.

443.91 ಕೋಟಿ ಮೀಸಲಿಟ್ಟಿರುವ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) ಮತ್ತು –253.50 ಕೋಟಿ ಮೀಸಲಿಟ್ಟಿರುವ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ), ಭಾಗ್ಯಲಕ್ಷ್ಮಿ, ಕುಡಿಯುವ ನೀರು ಪೂರೈಕೆ ಸೇರಿದಂತೆ 14 ಯೋಜನೆಗಳಲ್ಲಿ ನಯಾಪೈಸೆ ಖರ್ಚಾಗಿಲ್ಲ. 15ಕ್ಕೂ ಹೆಚ್ಚು ಕಾರ್ಯಕ್ರಮಗಳಲ್ಲಿ ಅತೀ ಕಡಿಮೆ ಅನುದಾನ ಬಳಕ ಮಾಡಲಾಗಿದೆ ಎಂಬ ಮಾಹಿತಿ ಹೊರಬಿದ್ದಿದೆ. ಸರಕಾರಗಳು ಹಕ್ಕುಗಳನ್ನು ಇಲ್ಲವಾಗಿಸುವ ಕ್ರಮವನ್ನು ಜಾರಿ ಮಾಡುತ್ತಿವೆ. ದಲಿತರಿಗೆ ಮೀಸಲಿಟ್ಟ ಹಣವನ್ನು ಅವರ ಅಭಿವೃದ್ಧಿಗಾಗಿ ಬಳಸಬೇಕು. ಅದಕ್ಕಾಗಿ ಅಧಿಕಾರದ ವಿಕೇಂದ್ರಿಕರಣ ಆಗಬೇಕು ಎಂದು ಅರ್ಥಶಾಸ್ತ್ರಜ್ಞರಾದ ಪ್ರೋ ಟಿ.ಆರ್. ಚಂದ್ರಶೇಖರ್ ರವರು ಒತ್ತಾಯಿಸಿದ್ದಾರೆ.

ಸರಕಾರ ದಲಿತರ ಅಭಿವೃದ್ಧಿಗೆ ನಿಗದಿ ಪಡಿಸಿದ ಹಣದಲ್ಲಿ ಡೀಮ್ಡ್ ಹೆಸರಿನಲ್ಲಿ ಇತರೆ ಇಲಾಖೆಗಳಿಗೆ ಬಳಕೆ ಮಾಡಲಾಗುತ್ತಿದೆ. ದಲಿತರ ಅಭಿವೃದ್ಧಿಗೆ ಇದ್ದ ಹಣವನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ದುರುಪಯೋಗ ಪಡಿಸಿಕೊಳ್ಳುತ್ತಿವೆ ಎಂದು ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿ ಆರೋಪಿಸಿದ್ದಾರೆ.

ದಲಿತರ ಸ್ಥಿತಿಗತಿ ಸುಧಾರಿಸುವ ನೆಪದಲ್ಲಿ ಪ್ರತಿ ಬಜೆಟ್ ನಲ್ಲೂ ಹಣವನ್ನು ಮೀಸಲಿಡಲಾಗುತ್ತಿದೆ. ಆದರೆ ಅದನ್ನೂ ಕಳಕಳಿಯಿಂದ ಅರ್ಥಪೂರ್ಣವಾಗಿ ಖರ್ಚು ಮಾಡುತ್ತಿಲ್ಲ. ಅಂದ್ರೆ ದಲಿತರಿಗೆ ಯೋಜನೆಯನ್ನು ಕೊಟ್ಟಿದ್ದೇವೆ ಎಂಬುದಕ್ಕೆ ಸರಕಾರದಲ್ಲಿ ದಾಖಲೆ ಇದೆ. ಆದರೆ ಜಾರಿ ಆಗ್ತಾ ಇಲ್ಲ ಎನ್ನುವದನ್ನು ಗಮನಿಸಬೇಕಿದೆ. ಯೋಜನೆ ಇದ್ದು ಆ ಹಣ ದಲಿತರಿಗೆ ಸಿಗದಂತಹ ಪರಸ್ಥಿತಿಯನ್ನು ಆಳುವ ಸರಕಾರಗಳು ನಿರ್ಮಾಣ ಮಾಡಿವೆ. ದಲಿತರಿಗಾಗಿಯೇ ಮೀಸಲಿಟ್ಟ ಹಣವನ್ನು ಅವರಿಗಾಗಿ ನೀಡುವ ಮೂಲಕ ಆ ಸಮುದಾಯವನ್ನು ಬಲಪಡಿಸಲು ಸರಕಾರ ಮುಂದಾಗಬೇಕಿದೆ. ●

ಟಿಕೆಎಂ ಕಾರ್ಖಾನೆ ವಿರುದ್ಧ ಕಾರ್ಮಿಕರ ಪಾದಯಾತ್ರೆ, ಪಾದಯಾತ್ರೆಗೆ ಕುಟುಂಬದವರ ಸಾಥ್



ಟೊಯೋಟಾ ಕಿರ್ಲೋಸ್ಕರ್ ಮೋಟಾರ್ (ಟಿಕೆಎಂ) ಆಡಳಿತ ಮಂಡಳಿಯ ವಿರುದ್ದ ಅಲ್ಲಿನ ಕಾರ್ಮಿಕರು ನಡೆಸುತ್ತಿರುವ ಹೋರಾಟ 82 ನೇ ದಿನ ತಲುಪಿದೆ. ಹೋರಾಟ ಆರಂಭವಾಗಿ ಮೂರು ತಿಂಗಳಾಗುತ್ತ ಬಂದರೂ ರಾಜ್ಯ ಸರ್ಕಾರವಾಗಲಿ, ಆಡಳಿತ ಮಂಡಳಿಯಾಗಲಿ ಯಾವುದೆ ರೀತಿಯಲ್ಲಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿ ಕಂಪನಿಯ ಕಾರ್ಮಿಕರು ಇಂದು ಬೃಹತ್ ಪಾದಯಾತ್ರೆ ನಡೆಸಿದರು.

ಪಟ್ಟಣದ ಬಿಜಿಎಸ್ ವೃತ್ತದಿಂದ ಆರಂಭಗೊಂಡ ಮೆರವಣಿಗೆಯಲ್ಲಿ ಸಾವಿರಾರು ಕಾರ್ಮಿಕರು ಮತ್ತು ಅವರ ಕುಟುಂಬಸ್ತರು ಭಾಗವಹಿಸಿದ್ದರು. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಕಾರ್ಮಿಕ ಪರ ಘೋಷಣೆ ಕೂಗುತ್ತ ಕಾಲ್ನಡಿಗೆ ಹೊರಟು ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯ ಮುಂಭಾಗ ಸಮಾವೇಶಗೊಳ್ಳಲಾಯಿತು. ರಾಮನಗರ, ಬೆಂಗಳೂರು ಗ್ರಾಮಾಂತರ, ಮಂಡ್ಯ ಮೊದಲಾದ ಜಿಲ್ಲೆಗಳಿಂದ ಪ್ರಗತಿಪರ ಸಂಘಟನೆಗಳ ಮುಖಂಡರು ಪಾದಯಾತ್ರೆಗೆ ಸಾಥ್ ನೀಡಿದ್ದರು. ಸಂಸದ ಡಿ.ಕೆ. ಸುರೇಶ್, ಮಾಜಿ ಶಾಸಕ ಎಚ್.ಸಿ. ಬಾಲಕೃಷ್ಣ ಸೇರಿದಂತೆ ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಮುಖಂಡರು ಭಾಗಿವಹಿಸಿದ್ದರು.

ಕಾರ್ಖಾನೆಯ ಮುಂಭಾಗ ಪಾದಯಾತ್ರೆ ಉದ್ದೇಶಿಸಿ ಮಾತನಾಡಿದ ಬೆಂಗಳೂರು ಗ್ರಾಮಾಂತರ ಸಂಸದ ಡಿ.ಕೆ. ಸುರೇಶ್, ಸಮಸ್ಯೆ ಇತ್ಯರ್ಥಕ್ಕೆ ಟೊಯೊಟಾ ಆಡಳಿತ ಮಂಡಳಿಗೆ ಒಂದು ವಾರದ ಗಡುವು ನೀಡಿದರು. ಅಷ್ಟರೊಳಗೆ ಕಾರ್ಮಿಕರ ಜೊತೆ ಮಾತುಕತೆ ನಡೆಸಿ, ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳದೇ ಹೋದರೆ ಕಾರ್ಖಾನೆಗೆ ಬೀಗ ಜಡಿಯುವುದಾಗಿ ಸುರೇಶ್ ಎಚ್ಚರಿಕೆ ನೀಡಿದ್ದಾರೆ.

ಈ ರೀತಿಯ ಬಿಕ್ಕಟ್ಟು ಉಲ್ಬಣಕ್ಕೆ ಕಾರ್ಖಾನೆಯ ಹಠಮಾರಿ ಧೋರಣೆ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸ್ಥಳೀಯ ಶಾಸಕರ ನಿರ್ಲಕ್ಷ್ಯವೇ ಕಾರಣ', ಸರಕಾರ ಮಧ್ಯಪ್ರವೇಶಿಸಲು ವಿಳಂಬ ನೀತಿ ಅನುಸರಿಸುತ್ತಿದೆ ಎಂದು ಮಾಜಿ ಶಾಸಕ ಎಚ್.ಸಿ. ಬಾಲಕೃಷ್ಣ ಆರೋಪಿಸಿದರು.

ಡಿ.ಕೆ.ಸುರೇಶ್ ಹೇಳಿಕೆಯನ್ನು ಬೆಂಬಲಿಸಿದ ಕಾರ್ಮಿಕರು ಮುಂದಿನ ಗುರುವಾರದೊಳಗೆ ಸಮಸ್ಯೆ ಇತ್ಯರ್ಥಕ್ಕೆ ಬಾರದೆ ಹೋದರೆ ಬೀಗ ಜಡೆಯುವುದಾಗು ಘೋಷಣೆಗಳನ್ನು ಮೊಳಗಿಸಿದರು. ■

ಕೆಪಿಎಸ್ಸಿ ಅಂಗೈ ಶುದ್ಧಗೊಳ್ಳೋದು ಯಾವಾಗ?!

ರಾಜ್ಯದಲ್ಲಿ ನೇಮಕಾತಿಗಳಿಗೆ, ಬಡ್ತಿಗಳಿಗೆ ಪರೀಕ್ಷೆ ನಡೆಸುವ ಕರ್ನಾಟಕ ಲೋಕಸೇವಾ ಆಯೋಗ ಹಲವು ವರ್ಷಗಳಿಂದ ಬ್ರಷ್ಟಾಚಾರದಲ್ಲಿ ಮುಳಗಿ ಹೋಗಿದೆ. ಜಾರಿಯಾಗದೆ ಮರೆಯಾಗ್ತಾ ಇದೆಯಾ ಹೋಟಾ ಸಮಿತಿ ಶಿಫಾರಸ್ಸು. ಕೆ.ಪಿ.ಎಸ್.ಸಿ ಅಂಗೈ ಶುದ್ಧಗೊಳ್ಳೊದು ಯಾವಾಗ? ಎಂಬ ಸಾರ್ವಜನಿಕ ವಲಯದಲ್ಲಿ ಹಲವು ಪ್ರಶ್ನೆಗಳು ಉದ್ಭವಿಸುತ್ತಿದೆ.

ಕಳೆದ ವಾರ ನಡೆಯಬೇಕಿದ್ದ ಎಫ್.ಡಿ.ಎ ಪ್ರಶ್ನೆಪತ್ರಿಕೆ ಸೋರಿಕೆಯ ಕಾರಣದಿಂದ ರದ್ದಾಗಿದ್ದು ನಿಮಗೆಲ್ಲ ಗೊತ್ತಿರುವ ವಿಚಾರ. ಕೆ.ಪಿ.ಎಸ್.ಸಿ ಇಲಾಖೆಯ ಇಬ್ಬರೂ ಸಿಬ್ಬಂದಿ ಸಿಸಿಬಿಯರ ಕೈಯಲ್ಲಿ ಸಿಕ್ಕಿಬಿದ್ದಿದ್ದಾರೆ. ಸಿಸಿಬಿ ಪೊಲೀಸರು ಅವರನ್ನು ವಿಚಾರಣೆ ಮಾಡುತ್ತಿದ್ದಾರೆ. ಪ್ರಕರಣದ ಜಾಲ ದೊಡ್ಡದಿದ್ದು ಸೋರಿಕೆಯ ಹಿಂದಿರುವ ಕೈಗಳನ್ನು ಪತ್ತೆ ಹತ್ತುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಆದರೆ ಸರಕಾರ ತನ್ನ ಜವಬ್ದಾರಿಯನ್ನು ಯಾಕೆ ನಿರ್ವಹಣೆ ಮಾಡುತ್ತಿಲ್ಲ ಎನ್ನುವ ಪ್ರಶ್ನೆಗಳು ಎದ್ದಿವೆ. ಯಾಕಂದರೆ ಲೋಕಸೇವಾ ಆಯೋಗದ ಅಂಗೈಯನ್ನು ಶುದ್ದಗೊಳಿಸುವ ಜವಬ್ದಾರಿ ಸರಕಾರದ್ದಾಗಿದೆ. ಕೆಪಿಎಸ್ಸಿ ಕರ್ಮಕಾಂಡ ಇವತ್ತು ನಿನ್ನೆಯದು ಅಲ್ಲ. ಹತ್ತಕ್ಕೂ ಹೆಚ್ಚು ವರ್ಷಗಳಿಂದ ಪ್ರಶ್ನೆ ಪತ್ರಿಕೆ ಸೋರಿಕೆ, ಅಕ್ರಮ ನೇಮಕಾತಿ, ಭ್ರಷ್ಟಾಚಾರದಂತಹ ಆರೋಪಗಳು ಕೇಳಿ ಬರುತ್ತೀವೆ. ಸ್ವತಃ ಹೈಕೋರ್ಟ್ ಕ್ರಮವನ್ನು ಕೈಗೊಳ್ಳಬೇಕು ಅಂತಾ ಹೇಳಿದ್ದರೂ ಕೂಡಾ ಇಲ್ಲಿವಯರೆಗೆ ಕ್ರಮ ಜರುಗಿಸಿರುವ ಉದಾಹರಣೆಗಳಿಲ್ಲ, ಯಾಕೆ ಅಂದ್ರೆ ಈ ಕೂಪದಲ್ಲಿ ಪ್ರಭಾವಿ ರಾಜಕಾರಿಗಳು ಇರಬಹುದು ಎಂದು ಬಹಳಷ್ಟು ಜನ ಆರೋಪವನ್ನು ಮಾಡ್ತಾ ಇದ್ದಾರೆ.

1998, 1999, 2004ರ ಕೆಎಎಸ್ ಅಧಿಕಾರಿಗಳ ನೇಮಕಾತಿಗೆ ಸಂಬಂಧಿಸಿದಂತೆ ಭಾರೀ ಭ್ರಷ್ಟಾಚಾರ, ಅವ್ಯವಹಾರ ಮತ್ತು ಅಕ್ರಮಗಳು ಜರುಗಿರುವುದು ಸಿಐಡಿ ತನಿಖೆ ಮತ್ತು ಹೈಕೋರ್ಟ್ ನೇಮಿಸಿದ್ದ ಸತ್ಯಶೋಧನೆ ಸಮಿತಿಯ ವರದಿಗಳಿಂದ ಬಹಿರಂಗವಾಗಿದೆ. ಅನೇಕ ವರ್ಷಗಳಿಂದ ಆಯೋಗದ ಸದಸ್ಯರಾಗಿದ್ದ ಮತ್ತು 2001 ರಿಂದ 2007 ರವರೆಗೆ ಅಧ್ಯಕ್ಷರಾಗಿದ್ದ ಡಾ.ಎಚ್.ಎನ್.ಕೃಷ್ಣ ಈ ಎಲ್ಲಾ ಹಗರಣಗಳ ರೂವಾರಿಯಾಗಿದ್ದರು ಮತ್ತು ಅವರು ಎಸ್.ಎಂ.ಕೃಷ್ಣ ಮತ್ತು ಕುಮಾರಸ್ವಾಮಿಯವರಿಗೆ ಪರಮಾಪ್ತರೂ ಆಗಿದ್ದರು. ಇವು ಕೆಲವಿಷ್ಟು ಹೆಸರು ಮಾತ್ರ ಹೀಗೆ ಪಟ್ಟಿ ಬೆಳೆಯುತ್ತಲೆ ಹೋಗುತ್ತದೆ. ಆದರೆ ತಪ್ಪು ಮಾಡಿದವರಿಗೆ ಶಿಕ್ಷೆ ಮಾತ್ರ ಆಗಿಲ್ಲ. 2011 ರಲ್ಲೂ ಕೆ.ಎ.ಎಸ್ ನೇಮಕ ಹಗರಣ ಸಾಕಷ್ಟು ಸದ್ದು ಮಾಡಿತ್ತು. ಕಳೆದ ಆರೇಳು ವರ್ಷದಿಂದ ನಿರಂತರವಾಗಿ ಪ್ರಶ್ನೆ ಪತ್ರಿಕೆಗಳು ಸೋರಿಕಾಯುಗುತ್ತಲೆ ಬಂದಿವೆ. ಕೆಪಿಎಸ್ಸಿ ಅಕ್ರಮಗಳನ್ನು ತಡೆಯೋದಕ್ಕಾಗಿ ಯುಪಿಎಸ್.ಸಿ ನಿವೃತ್ತ ಅಧ್ಯಕ್ಷರಾಗಿದ್ದ ಪಿ.ಎಸ್. ಹೋಟಾ ಸಮಿತಿ ಕೆಲ ಶಿಫಾರಸ್ಸುಗಳನ್ನು ನೀಡಿತ್ತು, ಆ ಶಿಫಾರಸ್ಸುಗಳು ಇನ್ನೂ ಜಾರಿಯಾಗಿಲ್ಲ.

ಹೋಟಾ ಸಮಿತಿ ನೀಡಿದ್ದ ಪ್ರಮುಖ ಶಿಫಾರಸ್ಸುಗಳು ಈ ರೀತಿ ಇವೆ.

ಪ್ರತಿ ಎರಡು ವರ್ಷಕ್ಕೊಮ್ಮೆ ಕೆಪಿಎಸ್ಸಿ ಸಿಬ್ಬಂದಿಯ ಬದಲಾವಣೆ ಆಗಬೇಕು. ಮುಖ್ಯ ಪರೀಕ್ಷೆಯ ಅಂಕಗಳನ್ನು ಅಭ್ಯರ್ಥಿಗಳಿಗೆ

ಪುಟ 15 ಕ್ಕೆ

ಸಮರ್ಪಣೆಯ ಸಮಯ

ಲಾಂಗರ್‌ಗಳು ಇಲ್ಲಿ ಬಡಿಸುವ ಊಟಗಳಷ್ಟೇ ವೈವಿಧ್ಯಪೂರ್ಣವಾಗಿವೆ ಹಾಗೂ ದೈನಿಕದ ಅಗತ್ಯಗಳೆಲ್ಲ ಪ್ರತಿ ಹೊಸ ದಿನ ಹೊಸತಾಗಿ ನಿರ್ಧರಿತವಾಗುತ್ತವೆ; ಹೆದ್ದಾರಿಗುಂಟ ಡೀಸಲ್ ಲಾಂಗರ್‌ಗಳು; ಯುನೈಟೆಡ್ ಸಿಖ್ಖ ಸಂಸ್ಥೆಯ ಡೇರೆ ಮತ್ತು ತಾಡಪತ್ರೆ ಲಾಂಗರ್‌ಗಳು; ದೈನಿಕದ ಅಗತ್ಯಗಳಿಗಾಗಿ ಖಾಲ್ಸಾ ಏಯ್ಡ್‌ನವರ ಕಿಸಾನ್ ಮಾಲ್‌ಗಳು; ದಿಲ್ಲಿ ಗುರುದ್ವಾರ ಆಡಳಿತ ಸಮಿತಿಯವರ ರಾತ್ರಿ ವಸತಿ ಬಸ್ ಲಾಂಗರ್‌ಗಳು; ಕಬಡ್ಡಿ ತಂಡವೊಂದರ ಸೇವೆಯಾಗಿ ಬಟ್ಟೆ ಒಗೆದುಕೊಡುವ ಲಾಂಗರ್‌ಗಳು; ನ್ಯೂಜೆರ್ಸಿಯಿಂದ ಬಂದ ಹೃದ್ರೋಗ ತಜ್ಞನೂ ಇರುವ ವೈದ್ಯಕೀಯ ಲಾಂಗರ್‌ಗಳು; ಕಾರ್ಯಕರ್ತರು ಹಾಗೂ ಸಿನೆಮಾ ನಿರ್ಮಾಪಕರು ಪ್ರಕಟಿಸುವ 'ಟ್ರೋಲಿ ಟೈಮ್ಸ್' ಎಂಬ ಬಹುಭಾಷಿಕ ವೃತ್ತಪತ್ರಿಕೆ.... ಎಲ್ಲ ಸ್ವಯಂ ಸೇವಕರು ರೈತರು, ವ್ಯಾಪಾರಿಗಳು ಹಾಗೂ ಭೂರಹಿತರನ್ನು ಈ ಸದುದ್ದೇಶದ ಶಾಂತಿಧಾಮಗಳಲ್ಲಿ ಒಗ್ಗೂಡಿಸುತ್ತಿವೆ.

ಮೂಲ : ದೇವನ್ (ಸಿನೆಮಾ ನಿರ್ಮಾಪಕ), ಕನ್ನಡಕ್ಕೆ: ಎಂ.ಜಿ. ಹೆಗಡೆ, ಕುಮಟಾ
ಕವನಾನುವಾದ: ಭಾಯಿ ಕುಲ್ತಾರ್ ಸಿಂಗ್ (ಕೃಪೆ : ಇಂಡಿಯನ್ ಎಕ್ಸ್‌ಪ್ರೆಸ್ ಜನವರಿ 13, 2021)

ಮೊದಲ ಗುರು ನಾನಕರ ಹೆಸರಿನಿಂದ ಕರೆಯಲಾಗುವ ನಾನಕ್‌ಶಾಹಿ ಪಂಚಾಂಗದ ಪ್ರಕಾರ ನಾವೀಗ ಚಳಿಗಾಲದ ಪರಾಕಾಷ್ಠೆಯಾದ ಪೋಹ್ ತಿಂಗಳಿನಲ್ಲಿದ್ದೇವೆ. ಈ ಹತ್ತನೆಯ ತಿಂಗಳು ಪ್ರತಿವರ್ಷ ಡಿಸೆಂಬರ್ ಹದಿನಾಲ್ಕರ ಸುಮಾರಿಗೆ ಶುರುವಾಗಿ ಮುಂದಿನ ಮೂವತ್ತು ದಿನಗಳವರೆಗೆ ಇರುತ್ತದೆ. ಆಮೇಲೆ ಋತುಗಳು ಬದಲಾಗುತ್ತವೆ; ಬೆಳಕು ಮತ್ತೆ ಹೊರಹೊಮ್ಮುತ್ತದೆ.

ಹೋರಾಟದ ಕಾಲವಾದ ಪೋಹ್ ದೀರ್ಘವಾದ ಹಿಮಾವೃತ ರಾತ್ರಿಗಳೊಂದಿಗೆ ಕೊನೆಯಾಗುವ ಚಳಿಗಾಲದಿಂದ ಪಾರಾಗಿ ಪ್ರತಿಫಲವನ್ನು ದೊರಕಿಸಿಕೊಳ್ಳುತ್ತದೆ. ನಾವು ಬದ್ಧರಾಗಿರುವ ಉದ್ದೇಶಕ್ಕೆ ಬೇಕಾಗಿ ಶಹಾದತ್ಯೆನ್ ಅಥವಾ ಹುತಾತ್ಮತೆ ಸಹ ಸ್ವೀಕಾರಾರ್ಹ. ಹತ್ತಿರ ಬಂದಿದ್ದು ಗುರು ಗೋವಿಂದಸಿಂಗ್‌ರ ಜನ್ಮದಿನ. ಪ್ರಕೃತಿಯಲ್ಲಿ ನವಚೈತನ್ಯ ತುಂಬುತ್ತದೆ.

ಅಂದು..... ಮುನ್ನೂರು ವರ್ಷಗಳ ಹಿಂದೆ ಮಚ್ಚಿವಡದಲ್ಲಿ ಗುರು ಗೋವಿಂದ ಸಿಂಗರು ತಮ್ಮ ಸೈನಿಕರನ್ನೂ ತಮ್ಮ ಇಬ್ಬರು ಮಕ್ಕಳನ್ನೂ ಕಳೆದುಕೊಂಡು ಕಾಡಿಗೆ ಹಿಮ್ಮೆಟ್ಟಿದ್ದು ಸಹ ಪೋಹ್ ತಿಂಗಳಲ್ಲೇ. ಅವರ ಇಬ್ಬರು ಸಾಹಿಬ್‌ಜಾದೆಗಳು – ಅಜಿತ್ ಸಿಂಗ್ ಮತ್ತು ಜುಜಾರ್ ಸಿಂಗ್ – ಯುದ್ಧದಲ್ಲಿ ಹುತಾತ್ಮರಾದಾಗ ಅದು ಎಂಟನೆಯ ಪೋಹ್ ಅಥವಾ ಸರಿಸುಮಾರು ಡಿಸೆಂಬರ್ ಇಪ್ಪತ್ತೊಂದು. ಅವರ ಪಠಾಣ ಭಕ್ತರು ಅವರನ್ನು ತಮ್ಮ ಗುರು ಎಂಬ ಸೋಗಿನಲ್ಲಿ ಸುರಕ್ಷಿತ ತಾಣಕ್ಕೆ ಕರೆದೊಯ್ದರು. ಮಚ್ಚಿವರದಲ್ಲಿ ಈ ಸಂತ–ಸೈನಿಕ ತಮ್ಮ ದುಗುಡವನ್ನೆಲ್ಲ ಸೃಷ್ಟಿಕರ್ತನಿಗೆ ನಿವೇದಿಸಿಕೊಂಡ: "ಮಿತ್ತರ್ ಪ್ಯಾರೆನು, ಹಾಲ ಮುರೀದೀನ್ ದಾ ಕೆಹ್ನಾ"

ನಿನ್ನನುಯಾಯಿಗಳೆಲ್ಲ ನಮ್ಮದೇ ಪಾಡು
ನೀನಿಲ್ಲದೆ ಮನೆಯು ಸರ್ಪಗಳ ಗೂಡು
ಬೆಚ್ಚಗಿನ ಹೊದಿಕೆಯಾ ಹೊತ್ತಂತೆ ಕೇಡು
ನೀನಿದ್ದರೆ ಸಾಕು ಶಿಲೆಯ ಮೆತ್ತೆ
ಸುಪ್ಪತ್ತಿಗೆಯಾಗುವುದು ಮನ ತಣಿಸಿ ಮತ್ತೆ

ಗುರು ಗೋವಿಂದ ಸಿಂಗರು ತಮ್ಮ ಆತ್ಮೀಯನಿಗೆ ಸಲ್ಲಿಸಿದ ಮನವಿಯು ಬಹುಶಃ ಇಂದು ಪಂಜಾಬಿನ ರೈತರ ಮನಸ್ಸಿನಲ್ಲಿ ಮತ್ತಷ್ಟು ಮಂದ್ರವಾಗಿ ಅನುರಣಿಸುತ್ತಿದೆ; ಸ್ಫೂರ್ತಿ ನೀಡುತ್ತಿದೆ. ಇಬ್ಬರೂ ಸ್ವಇಚ್ಛೆಯಿಂದಲೇ ನೆಮ್ಮದಿಯ ಮನೆ ತೊರೆದು ಪ್ರತಿಕೂಲಗಳ ನಡುವಿನ ಅನಿಶ್ಚಿತ ಬದುಕು ಆಯ್ದುಕೊಂಡರು.



ಇದೂ ಕೂಡ ಪೋಹ್ ತಿಂಗಳೇ. ನವೆಂಬರ್ ಇಪ್ಪತ್ತೆಂಟರಿಂದ ಪಂಜಾಬಿನ ರೈತರು ಟ್ರಾಕ್ಟರ್ ಮತ್ತು ಟ್ರೊಲಿಗಳಲ್ಲಿ ದೆಹಲಿಯ ಹೊರವಲಯದತ್ತ ಮುಂಬರಿದರು. ಸಂಭವನೀಯ ಕೃಷಿ ಬಿಕ್ಕಟ್ಟು ಎಂದು ಯಾವುದನ್ನು ಈಗ ಒಪ್ಪಿಕೊಳ್ಳುತ್ತಿದ್ದೇವೊ ಅದಕ್ಕಾಗಿಯೇ ಅವರು ಒಟ್ಟಿಗೆ ಬಂದಿದ್ದು– ತಡೆಗೋಡೆಗಳನ್ನು ದಾಟಿ. ಟ್ರೋಲಿಗಳು ಮತ್ತು ಡೇರೆಗಳ ಪಟ್ಟಣಗಳೇ ಹುಟ್ಟಿಕೊಂಡವು– ತುರ್ತು ಜನವಸತಿ ನಿರ್ಮಾಣದ ಎಲ್ಲ ದಾಖಲೆಗಳನ್ನೂ ಮುರಿದು.

ರಬಾಬ್ ಆಟಗಾರ ಮರ್ದನನು ನಾನಕರಿಗೆ ಜೊತೆಯಾಗಿದ್ದಂತೆ ಪೋಹ್‌ಗೆ ನಿರಂತರ ಒಡನಾಡಿಯಾದ ತೀವ್ರ ಚಳಿ ಮಾತ್ರ ಹಿಮ್ಮೆಟ್ಟದೇ ಉಳಿದಿದೆ. ಕಳೆದ ನೂರೈವತ್ತು ವರ್ಷಗಳಲ್ಲೇ ಅತ್ಯಂತ ಕ್ರೂರವಾದ ಡಿಸೆಂಬರನ್ನು ಹಿಂಬಾಲಿಸಿ ಬಂದಿದ್ದು ಅಭೂತಪೂರ್ವ ಜನವರಿಯ ತಾಪಮಾನ. ದೆಹಲಿಯ ಹೆದ್ದಾರಿಗುಂಟ ಹಲವು ಕಿಲೋಮೀಟರ್‌ಗಳಷ್ಟು ಉದ್ದದ ಟ್ರಾಕ್ಟರ್ ಟ್ರೊಲಿಗಳ ಹಾಗೂ ಗುಡಾರಗಳ ಪಟ್ಟಣದಲ್ಲಿ ನೆಲೆನಿಂತ ನಿವಾಸಿಗಳ ಸಂಕಲ್ಪವೂ ಅಚಲವಾಗಿದೆ.

ಸ್ವಇಚ್ಛೆಯಿಂದ ಪಂಜಾಬಿನ ಮನೆಯ ನೆಮ್ಮದಿಯನ್ನು ಹೆದ್ದಾರಿಯ ಬದುಕಿನ ಕಾರ್ಪಣ್ಯಕ್ಕೆ ವಿನಿಮಯ ಮಾಡಿಕೊಂಡ ಪ್ರತಿಭಟನೆಯ ನಲವತ್ತೇಳನೆಯ ದಿನದ ಹೊತ್ತಿಗೆ ಕಳೆದುಹೋದ ಹಲವು ಜೀವಗಳಿಗೆ ಶ್ರದ್ಧಾಂಜಲಿ ಅರ್ಪಿಸಿಯಾಗಿದೆ. ರಕ್ತನಾಳಗಳು ಮತ್ತು ಅಪಧಮನಿಗಳ ಜೀವಸತ್ವ ಹಿಂಡಿಹೋಗಿದೆ– 'ಗುರು ಗ್ರಂಥ ಸಾಹೇಬ'ದ ಪೋಹ್‌ನ ಪೀಠಿಕೆಯಲ್ಲಿ ಗುರು ನಾನಕರು ವರ್ಣಿಸಿರುವ ಕಾಡುಗಳು ಮತ್ತು ಮರಗಳಂತೆ: "ಪೋಖಿ ತುಖರು ಪಾರ್‍ಯಾ ವನು ತ್ರಿನು ರಾಸು ಸೊಖೈ" (ಕೊರೆವ ಚಳಿಗಾಲದಲ್ಲಿ ಪೋಹ್ ಅಡವಿಗಳ ಹುಲ್ಲುಗಳ ರಸ ಬತ್ತಿಸುತ್ತದೆ).

ಭೌಗೋಳಿಕವಾಗಿ, ಚಾರಿತ್ರಿಕವಾಗಿ ಅಥವಾ ತಾತ್ತ್ವಿಕವಾಗಿ ಹೊಲಗಳು ಮತ್ತು ಮನೆಗಳ ಸುರಕ್ಷಿತತೆಗಾಗಿನ ಹೋರಾಟದಲ್ಲಿ ಪಂಜಾಬಿನ ಕೃಷಿ ಸಮುದಾಯವನ್ನು ಮುಂಚೂಣಿಗೆ ತರುವ ಒತ್ತಾಸೆ ಯಾವುದು? "ನಮ್ಮ ಜಮೀನುಗಳನ್ನು ಕಸಿದುಕೊಂಡು ಹೋಗುತ್ತಿರುವಾಗ ನೀವೆಲ್ಲಿದ್ದಿರಿ?" ಎಂದು ನಮ್ಮ ಮಕ್ಕಳು ಕೇಳುವಾಗ ಅವರನ್ನು ನಾವು ಎದುರಿಸುವುದಾದರೂ ಹೇಗೆ? ನಾವು ಕಿಸಾನರೇ ಜವಾನರಿಗೆ ಜನ್ಮ ನೀಡುವವರು.

ಆದರೂ ಬಳಸಲಾದ ಅನುಕೂಲ ಸಿಂಧು ಹಣೆಚೀಟಿ "ಖಲಿಸ್ತಾನಿ" – ಸಮುದಾಯವೊಂದನ್ನು ದುರ್ಬಲಗೊಳಿಸುವ ಹೀನಾಯಿಸುವ ಗುರಿಹೊತ್ತ ಹಣೆಚೀಟಿ. ಆದರೆ ಈ ದುಷ್ಕೃತ್ಯವು ಚೈತನ್ಯವನ್ನು ಉತ್ತೇಜಿಸಿದೆ – ತಮ್ಮ ಜಮೀನಿನ ಸಂರಕ್ಷಣೆಯಲ್ಲಿ ನಿರತವಾದ ಸಾಮರ್ಥ್ಯಕ್ಕೆ ಗಾಂಭೀರ್ಯ ಮತ್ತು ಝಮೀರ್ ಅಥವಾ ಅಂತಃಸಾಕ್ಷಿಯ ನೈತಿಕ ಬಲವನ್ನು ತುಂಬುವಂತೆ ಪಡೆಗಳ ಕೆಲವು ವಿಭಾಗಗಳಲ್ಲೂ ಸಹ.

"ಐದು ಶತಮಾನಗಳಿಂದಲೂ ವಿಶ್ವದಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ಲಾಂಗರ್‌ಗಳಿಗೆ (ಅನ್ನ ದಾಸೋಹ) ಹಣಕಾಸು ಒದಗಿಸುವುದನ್ನು ಯಾರೂ ಏಕೆ ಪ್ರಶ್ನಿಸುವುದಿಲ್ಲ" ಎಂಬುದು ಅನಿವಾಸಿ ಭಾರತೀಯನೊಬ್ಬನ ಪ್ರಶ್ನೆ. ಬುರಾರಿಯಲ್ಲಿ ಅವಳು ಹೆದ್ದಾರಿ ವಿಭಾಜಕಗಳ ಕಡೆ ತಲೆ ಬಾಗಿಸುತ್ತಾಳೆ. ಅಲ್ಲಿ ಅವಳ ಜನರು ಇದೀಗ ಈರುಳ್ಳಿ ಬೀಜಗಳನ್ನು ಬಿತ್ತಿದ್ದಾರೆ. ಸಾವಯವ ಕೃಷಿಯ ಈ ಇಳುವರಿಯನ್ನು ನೂರಕ್ಕೂ ಹೆಚ್ಚು ಸಮುದಾಯ ಅಡಿಗೆ ಮನೆಗಳಿಗೆ ಹಂಚಲಾಗುತ್ತದೆ. "ಅಡಿಗೆಯವಳು ಮತ್ತು


ಪುಟ 14 ಕ್ಕೆ

ಗೋದಿ ಮೀಡಿಯಾ ನೊಣಗಳು ಹೂವನ್ನು ತೊರೆದು ಹೊಲಸು ವಾಸನೆಯತ್ತ ಹಾರಿದ್ದೇಕೆ?

ಜನವರಿ 26ರ ದಿಲ್ಲಿ ಘಟನೆಗಳ ಬಗ್ಗೆ ಟಿಲಿ ಮಾಧ್ಯಮಗಳ ಪ್ರಸಾರ ಮತ್ತು ಜನವರಿ 27ರ ದಿನಪತ್ರಿಕೆಗಳ ಸುದ್ದಿ ವೈಖರಿಯನ್ನು ಕುರಿತು ಹಿರಿಯ ಪತ್ರಕರ್ತರಾದ ರಾಜಾರಾಂ ತಲ್ಲೂರು ಅವರ ಟಿಪ್ಪಣಿ:

1. ಒಂದಿಷ್ಟು ಜನರ ಗದ್ದಲದ ಕಾರಣದಿಂದಾಗಿ, ಸಾಗರದೋಪಾದಿಯಲ್ಲಿ ಟ್ರಾಕ್ಟರ್ ಪರೇಡಿಗೆ ಸೇರಿದ್ದ ಲಕ್ಷಾಂತರ ಟ್ರಾಕ್ಟರ್‌ಗಳು ಮತ್ತು ಜನರು ನಿಗದಿತವಾದ ಮಾರ್ಗಗಳಲ್ಲಿ ನಿಗದಿತ ಸಮಯಕ್ಕೆ ಉದ್ದೇಶಿಸಿದ ಅಭೂತಪೂರ್ವ ಪರೇಡ್ ನಡೆಸಿದರೆ? ಅದು ಹೇಗೆ ನಡೆಯಿತು? ಅಥವಾ ಅದು ಆರಂಭಗೊಳ್ಳುವ ಮೊದಲೇ ಸ್ಥಗಿತಗೊಂಡಿತೇ ಎಂಬ ಸುದ್ದಿ ಸಂಪೂರ್ಣವಾಗಿ ಅಡಗಿಹೋಯಿತು. ನನಗನ್ನಿಸುವಂತೆ, ಆ ಗದ್ದಲದ ಹಿಂದಿನ ಉದ್ದೇಶವೇ ಅದಾಗಿರಬಹುದು.
2. ದಿಲ್ಲಿ ರಾಜಧಾನಿಯ ರಕ್ಷಣಾ–ಪೊಲೀಸ್ ವ್ಯವಸ್ಥೆ ಇರುವುದು ಕೇಂದ್ರ ಗೃಹ ಇಲಾಖೆಯ ಬಳಿ. ಮಧ್ಯಾಹ್ನ 12ಕ್ಕೆ ಅಧಿಕೃತ ಗಣತಂತ್ರದಿನ ಸಮಾರಂಭ ಮುಗಿದ ಬಳಿಕ ಹೊರಡುವುದೆಂದು ನಿಗದಿಯಾಗಿದ್ದ ಟ್ರಾಕ್ಟರ್ ಪರೇಡ್ ಬೆಳಗಿನ ಜಾವವೇ ಎದ್ದು ಹೊರಟಾಗ ಮತ್ತು ಹಾದಿಯಲ್ಲಿ ಅಡ್ಡಿ–ತಡೆಗಳನ್ನು ಧ್ವಂಸ ಮಾಡಿದಾಗ ರಾಜಧಾನಿಯ ಭದ್ರತಾ ವ್ಯವಸ್ಥೆ ಹೇಗಿರಬೇಕಿತ್ತು?
3. ಬೆಳಗಿನ ಜಾವ ಒಪ್ಪಂದ ಧಿಕ್ಕರಿಸಿ ಹೊರಟ ಪರೇಡ್ ಹೊರಟ ದಾರಿ ಯಾವುದೆಂದು ಗಮನಕ್ಕೆ ಬಂದಾಗ ಅದು ತಲುಪಬಹುದಾದ ಗಮ್ಯ ಯಾವುದು ಎಂಬುದು ಗೊತ್ತಿರಬೇಕಲ್ಲವೆ? ಅಂತಹ ಸಂಭಾವ್ಯ ಗಮ್ಯಗಳಲ್ಲಿ ಭದ್ರತಾ ವ್ಯವಸ್ಥೆ ಹೇಗಿರಬೇಕಿತ್ತು?
4. ಕೆಂಪುಕೋಟೆಯಲ್ಲಿ ಅನಿರೀಕ್ಷಿತ–ಅಹಿತಕರ ಘಟನೆಗಳು ನಡೆದವು. ಈ ಸಂಬಂಧ ಎಷ್ಟು ಜನರನ್ನು ದಿಲ್ಲಿ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ? ಅವರು ಯಾರು–ಹಿನ್ನೆಲೆ ಏನು? ಉಗ್ರಗಾಮಿಗಳಾಗಿದ್ದರೆ ಅಲ್ಲಿ ಸುಲಭವಾಗಿ ಸೆರೆಸಿಕ್ಕುತ್ತಿದ್ದರಲ್ಲ? ಅವರ ವಿರುದ್ಧ ಏನೇನು ಕಾನೂನು ಕ್ರಮಗಳು ಜರುಗಿವೆ?
5. ಕೇಶ್, ಖಡಾ, ಕಂಗಾ, ಕಚ್ಚಾ, ಕಿರ್ಪಾಣ್ – ಇವು ಸಿಖ್ ಧರ್ಮದ ನಿಶಾನಿಗಳು. ಹಾಗಾಗಿ ಅವರು ಕತ್ತಿ ಹಿರಿದಿರುವುದು, ಝಳಪಿಸುವುದು ವಿಶೇಷವೇನಲ್ಲ. ಆದರೆ ಮಾಧ್ಯಮಗಳು ಆ ಕಿರ್ಪಾಣ್‌ಗಳು ಹಿಂಸೆಗಾಗಿಯೇ ತಂದವೆಂಬಂತೆ ಬಿಂಬಿಸಿವೆ. ಒಂದು ವೇಳೆ ಅವರು ಕಿರ್ಪಾಣ್ ದಾಳಿಗೆ ಬಳಸಿದ್ದರೆ, ದೊಡ್ಡ ಸಂಖ್ಯೆಯಲ್ಲಿ ಗಾಯಾಳುಗಳು ಇರಬೇಕಿತ್ತು. ಅಂತಹ ಸುದ್ದಿಗಳಿವೆಯೆ?
6. ವ್ಯವಸ್ಥೆ ಮತ್ತು ಮಾಧ್ಯಮಗಳು ಒಂದು ಕಡೆ ಒಟ್ಟಾಗಿ ನಿಂತಾಗ ಇಂತಹ ಸನ್ನಿವೇಶ ಎದುರಾಗುವುದು ಸಹಜ. ಆದರೆ, ಕೃಷಿ ನೀತಿಯ ವಿರುದ್ಧ ನಿಂತವರ ಸಮಸ್ಯೆಗಳಿಗೂ ಈ ಎಲ್ಲ ಬೆಳವಣಿಗೆಗಳಿಗೂ ಸಂಬಂಧವೇ ಇಲ್ಲದಿರುವುದರಿಂದ, ಅವರು ತಮ್ಮ ನಿಲುವಿನಿಂದ ಹಿಂಜರಿಯುವುದಾಗಲೀ ಈ ಹೋರಾಟ ಇಲ್ಲಿಗೆ ಮುಕ್ತಾಯವಾಗುವುದಾಗಲೀ ಕಾಣುತ್ತಿಲ್ಲ. ಬದಲಾಗಿ ಇನ್ನಷ್ಟು ಅಪನಂಬಿಕೆಗಳ ನಡುವೆ ಮಾತುಕತೆ, ಸಂಧಾನ ಮುಂದುವರಿಯಬೇಕಾಗುತ್ತದೆ. ಹಾದಿ ಇನ್ನಷ್ಟು ಜಟಿಲ ಆದಂತಾಗಿದೆ.
7. ಎಲ್ಲಕ್ಕಿಂತ ಕೊನೆಯದಾಗಿ, ಜನರಿಗೆ ಒಪ್ಪಿಗೆ ಇಲ್ಲದ (ದೇಶದಾದ್ಯಂತ ಈ ಕಾಯಿದೆಗಳಿಗೆ ವಿರೋಧ ಸೂಚಿಸಿ ಪ್ರತಿಭಟನೆಗಳು ನಡೆದಿವೆ), ಚರ್ಚೆಯಾಗದೇ ಜಾರಿಗೆ ಬಂದ ಕಾಯಿದೆಯನ್ನು ಉಳಿಸಿಕೊಳ್ಳುವ ಹಠ ಸರ್ಕಾರಕ್ಕೆ ಯಾಕೆ? ಈ ಎಲ್ಲ ಘಟನೆಗಳಿಗೆ ಮೂಲ ಕಾರಣ ಅದಲ್ಲವೇ? ಇವನ್ನೆಲ್ಲ ಸಾರ್ವಜನಿಕರಿಗೆ ತಿಳಿಸುವ ಜವಾಬ್ದಾರಿ ಮಾಧ್ಯಮಗಳಿಗಿಲ್ಲವೇ?

ರಾಜಾರಾಂ ತಲ್ಲೂರು





ಈ ವರ್ಷದ ಗಣತಂತ್ರ ದಿನದಂದು ನಡೆದಿರುವ ಈ ವೈಶಿಷ್ಟ್ಯಪೂರ್ಣ ಸಾಮೂಹಿಕ ಕಾರ್ಯಾಚರಣೆ ಹಾಗೂ ಶಾಂತಿಯುತ ಪ್ರತಿಭಟನೆಯ ಮಹತ್ವವನ್ನು ಕೆಲವೇ ಕೆಲವು ಕ್ಷುಲ್ಲಕ ಶಕ್ತಿಗಳು ನಡೆಸಿದ ಕೃತ್ಯಗಳ ಕಾರಣದಿಂದ ತಳ್ಳಿಹಾಕಲು ಆಗುವುದಿಲ್ಲ. ಚಳಿ-ಮಳೆಗಳನ್ನೂ ಲೆಕ್ಕಿಸದೆ ಸಾವಿರಾರು ಪುರುಷರು ಮತ್ತು ಮಹಿಳೆಯರು ಕಳೆದ ಎರಡು ತಿಂಗಳಿಂದ ರಾಜಧಾನಿ ಪ್ರವೇಶಿಸುವ ಗಡಿ ಭಾಗಗಳಲ್ಲಿ ಪ್ರತಿಭಟನೆಗಳನ್ನು ನಡೆಸುತ್ತಲೇ ಇದ್ದಾರೆ. ಮೂರು ಕರಾಳ ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವಲ್ಲಿ ಸರ್ಕಾರದ ಮೊಂಡುತನದ ನಿರಾಕರಣೆ ಹಾಗೂ ಅಸಮರ್ಥನೀಯ ಧೋರಣೆಯೇ ಜನವರಿ 26ರಂದು ಟ್ರ್ಯಾಕ್ಟರ್ ರ‍್ಯಾಲಿ ನಡೆಸಿ ಜನ ಗಣರಾಜ್ಯ ಆಚರಿಸಲು ಮುಂದಾಗುವ ಪರಿಸ್ಥಿತಿ ನಿರ್ಮಿಸಿತ್ತು ಎನ್ನುವುದನ್ನು ಗಮನಿಸಬೇಕು. ದೆಹಲಿ ಗಡಿಗಳಲ್ಲಿ ವೀರಾವೇಶದ ಹೋರಾಟ ನಡೆಸುತ್ತಿರುವ ರೈತರು ಏಕಾಂಗಿಗಳಲ್ಲ. ಇತರ ಶ್ರಮಜೀವಿಗಳೂ ವಿವಿಧ ಜನವಿಭಾಗಗಳೂ ಅವರ ಜೊತೆಗಿದ್ದಾರೆ. ಹೊಸ ಕಸುವು-ಸಂಕಲ್ಪದೊಂದಿಗೆ ಚಳವಳಿ ಮುಂದುವರಿಯಲಿದೆ.

ಜನಶಕ್ತಿಯ ವಿರಾಟ್ ಪ್ರದರ್ಶನ

* ಪ್ರಕಾಶ್ ಕಾರಟ್

ದಿಲ್ಲಿಯಲ್ಲಿ 2021ರ ಗಣರಾಜ್ಯ ದಿನದಂದು ರೈತರ ಟ್ರ್ಯಾಕ್ಟರ್ ಮೆರವಣಿಗೆ ಒಂದು ಅಭೂತಪೂರ್ವ ಹಾಗೂ ಅತ್ಯಂತ ವಿಭಿನ್ನವಾದ ಸಾಮೂಹಿಕ ಕಾರ್ಯಾಚರಣೆ ಆಗಿತ್ತು. ದೇಶದ ರಾಜಧಾನಿ ಹಿಂದೆ ಯಾವತ್ತೂ ಇಂಥ ಅಸಾಮಾನ್ಯ ಪ್ರತಿಭಟನೆಯನ್ನು ಕಂಡಿರಲಿಲ್ಲ. ಒಂದು ಲಕ್ಷಕ್ಕೂ ಹೆಚ್ಚು ಟ್ರ್ಯಾಕ್ಟರ್‌ಗಳು ಮತ್ತು ಹತ್ತಾರು ಸಾವಿರ ಜನರು ಅದರಲ್ಲಿ ಭಾಗವಹಿಸಿದ್ದರು. ಹಿಂದೆ ದೊಡ್ಡ ಪ್ರತಿಭಟನೆಗಳು ನಡೆದಿರಬಹುದು; ಆದರೆ ಇಷ್ಟೊಂದು ಅಗಾಧವಾದ ಪ್ರತಿಭಟನಾ ಕಾರ್ಯಾಚರಣೆ ನಡೆದಿರಲಿಲ್ಲ.

ನಿಗದಿತ ಮಾರ್ಗಗಳಾದ ಸಿಂಘು, ಟಿಕ್ರಿ ಮತ್ತು ಗಾಜಿಪುರ ಗಡಿ ಪ್ರದೇಶಗಳಿಂದ ಟ್ರ್ಯಾಕ್ಟರ್‌ಗಳು ಮತ್ತು ಜನರು ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಆದರೆ, ತಪ್ಪುಹಾದಿಗೆಳೆಯಲ್ಪಟ್ಟ ಕೆಲವರು ನಿಗದಿತ ಮಾರ್ಗಗಳನ್ನು ಬಿಟ್ಟು ಬೇರೆಯೇ ಮಾರ್ಗದಲ್ಲಿ ಸಾಗಿ ರಿಂಗ್ ರೋಡ್ ಮೂಲಕ ಕೆಂಪು ಕೋಟೆಯತ್ತ ಸಾಗಿದರು. ಅಲ್ಲಿ ಖಾಲ್ಸಾ ಧ್ವಜ ಹಾರಿಸಿದ್ದು ಒಂದು ಪ್ರಚೋದನಕಾರಿ ಕೃತ್ಯ. ರಿಂಗ್ ರೋಡ್‌ಗೆ ಹೋಗುವಂತೆ ಕರೆ ನೀಡಿದ್ದ "ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿ'ಯು ಹೊಸ ಕೃಷಿ ಕಾನೂನುಗಳ ವಿರುದ್ಧ ಚಳವಳಿಯನ್ನು ಮುನ್ನಡೆಸುತ್ತಿರುವ ಸಂಯುಕ್ತ ಕಿಸಾನ್ ಮೋರ್ಚಾದ (ಎಸ್‌ಕೆಎಂ) ಭಾಗವಲ್ಲ.

ಕೆಲವೇ ಕೆಲವು ಕ್ಷುಲ್ಲಕ ಶಕ್ತಿಗಳು ನಡೆಸಿದ ಕೃತ್ಯಗಳ ಕಾರಣದಿಂದ ಇಡೀ ಸಾಮೂಹಿಕ ಕಾರ್ಯಾಚರಣೆ ಹಾಗೂ ಶಾಂತಿಯುತ ಪ್ರತಿಭಟನೆಯ ಮಹತ್ವವನ್ನು ತಳ್ಳಿಹಾಕಲು ಆಗುವುದಿಲ್ಲ. ಬಿಜೆಪಿ, ಕಾರ್ಪೊರೇಟ್‌ಗಳ ಸಾಕುಪ್ರಾಣಿಗಳಂತಿರುವ ಕೆಲವು ಮಾಧ್ಯಮ ಹಾಗೂ ಕೆಲವು ಪ್ರತಿಪಕ್ಷಗಳ ರಾಜಕಾರಣಿಗಳು ಕೆಂಪುಕೋಟೆಯಲ್ಲಿ ನಡೆದ ಕೃತ್ಯವನ್ನು ಇಡೀ ರೈತ ಚಳವಳಿ ಹಾಗೂ ರೈತ ಸಂಘಟನೆಗಳಿಗೆ ಮಸಿ ಬಳಿಯಲು ಬಳಸಿಕೊಂಡಿದ್ದಾರೆ. ಹೀಗಾಗಿ, ಈ ವಿದ್ಯಮಾನವನ್ನು ಸರಿಯಾದ ದೃಷ್ಟಿಕೋನದಿಂದ ವಿಶ್ಲೇಷಿಸುವುದು ಅಗತ್ಯವಾಗಿದೆ.

ಪಂಜಾಬ್‌ನ ಪ್ರತಿ ಹಳ್ಳಿ, ಹರಿಯಾಣದ ಬಹಳಷ್ಟು ಭಾಗಗಳು ಮತ್ತು ದೆಹಲಿ ಗಡಿಗೆ ಹೊಂದಿಕೊಂಡಿರುವ ಉತ್ತರ ಪ್ರದೇಶದ ಜಿಲ್ಲೆಗಳಿಂದ ಜನರು ಹಾಗೂ ಟ್ರ್ಯಾಕ್ಟರ್‌ಗಳು ಬಂದಿದ್ದರಿಂದಲೇ ಇಷ್ಟೊಂದು ಅಗಾಧ ರೀತಿಯಲ್ಲಿ ಪ್ರತಿಭಟನೆ ರೂಪಿಸಲು ಸಾಧ್ಯವಾಗಿತ್ತು. ಜತೆಗೆ ದೇಶದ ವಿವಿಧ ಭಾಗಗಳಿಂದಲೂ ಜನರು ಆಗಮಿಸಿದ್ದರು.

2020ರ ಜೂನ್‌ನಲ್ಲಿ ಮೂರು ಕೃಷಿ ಸುಗ್ರೀವಾಜ್ಞೆಗಳನ್ನು ಜಾರಿ ಮಾಡಿದ ಕ್ಷಣದಿಂದಲೇ ಪಂಜಾಬ್ ಮತ್ತು ಹರಿಯಾಣದಲ್ಲಿ ಪ್ರತಿಭಟನೆಯ ದಾವಾನಲ ಹರಡತೊಡಗಿತ್ತು. ಅದುವೇ ಬೃಹತ್ ಆಂದೋಲನದ ಮೂಲ ಕಿಡಿಯಾಗಿದೆ. ರೈತ ಸಂಘಗಳ ಒಂದು ಒಕ್ಕೂಟದ ನೇತೃತ್ವದಲ್ಲಿ ನಡೆಯುತ್ತಿದ್ದ ಐದುವರೆ ತಿಂಗಳಷ್ಟು ಹಳೆಯ ಚಳವಳಿ ನೀಡಿದ್ದ ದೆಹಲಿ ಚಲೋ ಕರೆಗೆ ಸಂಘಟನೆಗಳ ಪ್ರಭಾವದಾಚೆಗೂ ಇರುವವರಿಂದಲೂ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಸಾಮಾನ್ಯ ರೈತರು ಹಾಗೂ ಅವರ ಕುಟುಂಬ ವರ್ಗದವರು ಮಾತ್ರವಲ್ಲದೆ ಕೆಲವು ಹಳ್ಳಿಗೆ ಹಳ್ಳಿಯೇ ಎದ್ದು ಬಂದಾಗ ಅವರನ್ನು ನಿಭಾಯಿಸುವುದು ಯಾವುದೇ ಸಂಘಟನೆ ಅಥವಾ ನಾಯಕರ ನಿಯಂತ್ರಣಕ್ಕೆ ಮೀರಿದ ವಿಚಾರವಾಗಿತ್ತು.

ಆದ್ದರಿಂದ, ಹಾದಿ ತಪ್ಪಿದ ಶಕ್ತಿಗಳಿಂದ ನಡೆದ ಯಾವುದೋ ಕೆಲವು ಅನಪೇಕ್ಷಿತ ಘಟನೆಗಳಿಗೆ ರೈತ ಸಂಘಟನೆಗಳು ಮತ್ತು ಅವುಗಳ ಮುಖಂಡರನ್ನು ದೂರುವುದು ಆಂದೋಲನಕ್ಕೆ ಕೆಟ್ಟ ಹೆಸರು ತರುವ ದುರುದ್ದೇಶದಿಂದ ಪ್ರೇರಿತವಾದುದು ಎನ್ನಬೇಕಾಗುತ್ತದೆ. ಪ್ರತಿಭಟನೆಕಾರರ ಒಂದು ಸಣ್ಣ ವಿಭಾಗವನ್ನು ತಪ್ಪುದಾರಿಗೆ ಎಳೆದವರು ಯಾರು ಎನ್ನುವುದು ಶೀಘ್ರದಲ್ಲೇ ಗೊತ್ತಾಗಲಿದೆ. ಈ ಶಕ್ತಿಗಳನ್ನು ಸಂಯುಕ್ತ ಕಿಸಾನ್ ಮೋರ್ಚಾ ಕಟುವಾಗಿ ಖಂಡಿಸಿದೆ. ಚಳವಳಿಯನ್ನು ಶಾಂತಿಯುತವಾಗಿ ಮುಂದಕ್ಕೊಯ್ಯುವ ಬದ್ಧತೆಯನ್ನು ಘೋಷಿಸಿದೆ.

ದೊಂಬಿ ಮತ್ತು ಹಿಂಸಾಚಾರ ನಡೆಯಿತು ಎಂದು ಹೇಳುವುದು ಕೂಡ ಒಂದು ಅಪ್ರಾಮಾಣಿಕ ಪಿತೂರಿಯೇ ಆಗಿದೆ. ತಪ್ಪು ದಾರಿಗೆಳೆಯಲ್ಪಟ್ಟ ಪ್ರತಿಭಟನೆಕಾರರು ಕೂಡ ನಗರವನ್ನು ಪ್ರವೇಶಿಸಿ ತಮ್ಮ ಒಂದು ಅಂಶವನ್ನು ಎತ್ತಿ ತೋರಿಸ ಬಯಸಿದ್ದರಷ್ಟೇ. ಕೆಂಪುಕೋಟೆಯಲ್ಲಿ ದಾಂಧಲೆ ನಡೆದಿದ್ದು ಹೊರತುಪಡಿಸಿದರೆ ಯಾವುದೇ ಸರ್ಕಾರಿ ಅಥವಾ ಖಾಸಗಿ ಆಸ್ತಿಪಾಸ್ತಿ ಮೇಲೆ ದಾಳಿ ನಡೆದಿಲ್ಲ, ಅಂಗಡಿಗಳ ಲೂಟಿ ನಡೆಯಲಿಲ್ಲ ಅಥವಾ ಜನಸಾಮಾನ್ಯರ ಮೇಲೆ ದೈಹಿಕ ಹಿಂಸೆಯೂ ಆಗಿಲ್ಲ. ನಿಗದಿತ ಮಾರ್ಗ ಬಿಟ್ಟು ಬೇರೆ ಕಡೆಯಿಂದ ಬಂದ ಪ್ರತಿಭಟನೆಕಾರರು ಮತ್ತು ಅವರನ್ನು ನಿಯಂತ್ರಿಸಲು ಪ್ರಯತ್ನಿಸಿದ ಪೊಲೀಸರ ನಡುವೆ ಕೆಲವು ಘರ್ಷಣೆಗಳು ನಡೆದವು.

ದೆಹಲಿ ಘಟನಾವಳಿಗಳ ಮೇಲೆ ಗಮನ ಕೇಂದ್ರೀಕರಿಸುವಾಗ, ಹರಿಯಾಣದ ಪಲ್ವಾಲ್‌ನಿಂದ ದೆಹಲಿ ಗಡಿಗೆ ಬರುತ್ತಿದ್ದಾಗ ಸಿಕ್ರಿ ಗಡಿಯಲ್ಲಿ ಹರಿಯಾಣ ಪೊಲೀಸರು ಅಮಾನುಷವಾಗಿ ಥಳಿಸಿದ್ದನ್ನು ಮರೆಯಬಾರದು. ದೆಹಲಿ ಗಡಿ ವರೆಗೆ ಹೋಗಲು ಪೊಲೀಸರು ಅನುಮತಿ ನೀಡಿದ್ದರೂ ಅನ್ನದಾತರ ಮೇಲೆ ದೌರ್ಜನ್ಯ ಎಸಗಲಾಯಿತು. ಪೊಲೀಸರು ಸಿಡಿಸಿದ ಅಶ್ರುವಾಯು ತಾಗಿದ್ದರಿಂದ ಟ್ರ್ಯಾಕ್ಟರ್ ಉರುಳಿ ಅದರಲ್ಲಿದ್ದ 23 ವರ್ಷದ ಯುವಕ ಮೃತಪಟ್ಟ ದುರ್ಘಟನೆಯೂ ದಾಖಲಾಗಿದೆ. ದಿಲ್ಲಿ ಪೊಲೀಸರು ರೈತರ ಅನೇಕ ಟ್ರ್ಯಾಕ್ಟರ್‌ಗಳಿಗೆ ಹಾನಿ ಮಾಡಿರುವುದೂ ಇದೆ.

ಚಳಿ ಮತ್ತು ಪ್ರತಿಕೂಲ ಹವೆಯನ್ನೂ ಲೆಕ್ಕಿಸದೆ ಸಾವಿರಾರು ಪುರುಷರು ಮತ್ತು ಮಹಿಳೆಯರು ಕಳೆದ ಎರಡು ತಿಂಗಳಿಂದ ರಾಜಧಾನಿ ಪ್ರವೇಶಿಸುವ ಗಡಿ ಭಾಗಗಳಲ್ಲಿ ಪ್ರತಿಭಟನೆಗಳನ್ನು ನಡೆಸುತ್ತಲೇ ಇದ್ದಾರೆ. ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆಯುವ ವರೆಗೆ ಹೋರಾಟ ನಡೆಸುವುದು ಅವರ ಸಂಕಲ್ಪವಾಗಿದೆ. ಕಾನೂನುಗಳನ್ನು ವಾಪಸ್ ಪಡೆಯುವಲ್ಲಿ ಸರ್ಕಾರದ ಮೊಂಡುತನದ ನಿರಾಕರಣೆ ಹಾಗೂ ಅಸಮರ್ಥನೀಯ ಧೋರಣೆಯೇ ಅನ್ನದಾತರು ಗಣರಾಜ್ಯ ದಿನವಾದ ಜನವರಿ 26 ರಂದು ಟ್ರ್ಯಾಕ್ಟರ್ ರ‍್ಯಾಲಿ ನಡೆಸಿ ಜನ ಗಣರಾಜ್ಯ ಆಚರಿಸಲು ಮುಂದಾಗುವ ಪರಿಸ್ಥಿತಿ ನಿರ್ಮಿಸಿತ್ತು ಎನ್ನುವುದನ್ನು ಗಮನಿಸಬೇಕು.

ಗಣತಂತ್ರ ದಿನದಂದು ನಾವು ನೋಡಿದ್ದು ಜನತಾ ಶಕ್ತಿಯ ವಿರಾಟ್ ರೂಪವನ್ನು. ಇದರಿಂದ ಬಿಜೆಪಿಯ ಆಡಳಿತಗಾರರಲ್ಲಿ ನಡುಕ ಹುಟ್ಟಿರುವುದಂತೂ ವಾಸ್ತವ. ಶಾಂತಿಯುತ ಚಳವಳಿಯನ್ನು ಹಾಳುಗೆಡವಲು ಹಾಗೂ ಕಿಸಾನ್ ಸಂಘಟನೆಗಳಿಗೆ ಅಪಕೀರ್ತಿ ತರುವ ಪ್ರಯತ್ನಗಳು ಮುಂದಿನ ದಿನಗಳಲ್ಲಿ ಬಿರುಸು ಪಡೆಯಲಿದೆ. ಇಂಥ ಪ್ರಯತ್ನಗಳನ್ನು ರೈತ ಸಂಘಟನೆಗಳು ಒಗ್ಗಟ್ಟಿನಿಂದ ಎದುರಿಸಿ ಹಿಮ್ಮೆಟ್ಟಿಸಬೇಕಾಗಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಆಡಳಿತ ವ್ಯಾಪ್ತಿಗೆ ಬರುವ ದಿಲ್ಲಿ ಪೊಲೀಸ್, ಕೇಂದ್ರ ಸರ್ಕಾರದೊಂದಿಗೆ ಸಂಧಾನ ನಡೆಸುತ್ತಿರುವ ಸುಮಾರು 40 ನಾಯಕರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಈ ಎಲ್ಲ ಮುಖಂಡರು ನಿಗದಿಪಡಿಸಿ ಪೊಲೀಸರು ಅನುಮತಿಸಿದ್ದ ಮಾರ್ಗದಲ್ಲೇ ಟ್ರ್ಯಾಕ್ಟರ್ ರ‍್ಯಾಲಿ ನಡೆಸುತ್ತಿದ್ದುದು ಸ್ಪಷ್ಟವಾಗಿರುವುದರಿಂದ ಪೊಲೀಸರ ಈ ನಡೆ ಕುತಂತ್ರದ್ದು ಎನ್ನದೆ ವಿಧಿಯಿಲ್ಲ. ಅಂದಿನ ಕೃತ್ಯಗಳಿಗೆ ರೈತ ಮುಖಂಡರು ಹೊಣೆಯೆಂದು ಹೇಳುವ ದಿಲ್ಲಿ ಪೊಲೀಸ್ ಕಮಿಷನರ್, ಕೆಂಪು ಕೋಟೆಯ ಕೃತ್ಯ ಪ್ರಚೋದಿಸಿ ಗುಂಪಿನ ನೇತೃತ್ವ ವಹಿಸಿದ್ದ ಬಿಜೆಪಿ ಸಂಪರ್ಕ ಹೊಂದಿರುವ ದೀಪ್ ಸಿಧು ಬಗ್ಗೆ ಮೌನವಾಗಿದ್ದರು.

ದೇಶದಾದ್ಯಂತ ವಿವಿಧ ರಾಜ್ಯ ಹಾಗೂ ಜಿಲ್ಲಾ ಕೇಂದ್ರಗಳಲ್ಲೂ ಜನವರಿ 26 ರಂದು ಟ್ರ್ಯಾಕ್ಟರ್ ರ‍್ಯಾಲಿಗಳು ನಡೆದಿವೆ. ಮಹಾರಾಷ್ಟ್ರದ ನಾಸಿಕ್‌ನಿಂದ ಮುಂಬೈ ವರೆಗೆ ಬೃಹತ್ ಕಿಸಾನ್ ರ‍್ಯಾಲಿ ನಡೆದಿದೆ. ಕಳೆದ ವಾರ ಕೊಲ್ಕತಾ ಮತ್ತು ಚೆನ್ನೈನಲ್ಲಿ ರೈತ-ಕಾರ್ಮಿಕರ ಸಂಯುಕ್ತ ರ‍್ಯಾಲಿಗಳು ಆಯೋಜನೆಗೊಂಡಿದ್ದವು. ದೆಹಲಿ ಗಡಿಗಳಲ್ಲಿ ವೀರಾವೇಶದ ಹೋರಾಟ ನಡೆಸುತ್ತಿರುವ ರೈತರು ಏಕಾಂಗಿಗಳಲ್ಲ. ಇತರ ಶ್ರಮಜೀವಿಗಳೂ ವಿವಿಧ ಜನವಿಭಾಗಗಳೂ ಅವರ ಜೊತೆಗಿದ್ದಾರೆ. ಹೊಸ ಕಸುವು-ಸಂಕಲ್ಪದೊಂದಿಗೆ ಚಳವಳಿ ಮುಂದುವರಿಯಲಿದೆ.

ಸಂಸತ್ತಿನ ಬಜೆಟ್ ಅಧಿವೇಶನ ಜನವರಿ 29ರಂದು ಆರಂಭವಾಗಿದೆ. ಮೋದಿ ಸರ್ಕಾರ ಸಂಸತ್ತಿನಲ್ಲಿ ಮೂರು ಕೃಷಿ ಕಾನೂನುಗಳನ್ನು ವಾಪಸ್ ಪಡೆಯಲು ಮುಂದಾಗಬೇಕು. ಪ್ರತಿಪಕ್ಷಗಳು ಒಟ್ಟಾಗಿ ಈ ಬೇಡಿಕೆಯನ್ನು ಪ್ರಬಲವಾಗಿ ಮುಂದೊತ್ತಬೇಕು.

ಅನು: ವಿಶ್ವ



ನಾಸಿಕ್‌ನಿಂದ ಮುಂಬೈಗೆ





ರೈತರ ಚಾರಿತ್ರಿಕ

ಪರ್ಯಾಯ ಗಣತಂತ್ರ ಪರೇಡ್




ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ದೇಶದ ಎಲ್ಲೆಡೆಯಂತೆ ರಾಜ್ಯದಲ್ಲಿ ಗಣರಾಜ್ಯೋತ್ಸವ ದಿನದಂದು ರೈತರ ಪರ್ಯಾಯ ಪರೇಡ್ ವಿಜೃಂಭಣೆಯಿಂದ ನಡೆಯಿತು. ಈ ಅನ್ನದಾತನ ಹೋರಾಟಕ್ಕೆ ಅನೇಕ ಸಂಘಟನೆಗಳು ಬೆಂಬಲ ನೀಡಿದ್ದು ರೈತರ ಪರ್ಯಾಯ ಪರೇಡ್‌ಗೆ ಮತ್ತಷ್ಟು ಮೆರುಗು ತುಂಬಿದೆ.

ಇತಿಹಾಸದಲ್ಲೇ ಮೊಟ್ಟ ಮೊದಲ ಭಾರಿಗೆ ರಾಜ್ಯ ರಾಜಧಾನಿಯಲ್ಲಿ ರಾಷ್ಟ್ರಧ್ವಜದೊಂದಿಗೆ ಕೆಂಪು, ನೀಲಿ, ಶ್ವೇತ ಬಾವುಟಗಳೊಂದಿಗೆ ಹಸಿರು ಶಾಲುಗಳು ರಾರಾಜಿಸಿ ಒಗ್ಗಟ್ಟಿನ ಹೋರಾಟಕ್ಕೆ ಸಾಕ್ಷಿಯಾಗಿದೆ. ಅನ್ನದಾತನು ತನ್ನ ಸ್ವಾಭಿಮಾನದ ಸಂಕೇತವಾಗಿರುವ ಹಸಿರು ಶಾಲುಗಳನ್ನು ಬೀಸಿದರೆ, ಕೆಂಪು ಶ್ರಮಜೀವಿಗಳ ಸಂಕೇತವಾಗಿ, ನೀಲಿ ದಲಿತರ ಸಂಕೆವಾಗಿ, ಶ್ವೇತ ಪಥ ವಿದ್ಯಾರ್ಥಿ, ಮಹಿಳೆಯರ ಸಂಕೇತವಾಗಿ ರೈತನ ಬೆಂಬಲಕ್ಕೆ ನಿಂತಿದ್ದವು. ಇದನ್ನು 'ಸಂಯುಕ್ತ ಹೋರಾಟ ಕರ್ನಾಟಕ' ಎಂಬ ಎಲ್ಲ ರೈತ ಕೂಲಿಕಾರರ ಸಂಘಟನೆಗಳು, ಕಾರ್ಮಿಕ ಐಕ್ಯ ವೇದಿಕೆ ಜೆಸಿಟಿಯು, ದಲಿತ, ವಿದ್ಯಾರ್ಥಿ, ಮಹಿಳಾ ಸಂಘಟನೆಗಳು ಹಾಗೂ ಹಲವಾರು ಸಾಮಾಜಿಕ

ಪುಟ 14 ಕ್ಕೆ















ಚಾರಿತ್ರಿಕ ಕಿಸಾನ್ ಗಣತಂತ್ರ ಪರೇಡ್

ಸ್ವತಂತ್ರ ಭಾರತದ ಅತಿ ದೊಡ್ಡ ಸಾಮೂಹಿಕ ಪ್ರತಿಭಟನಾ ಕಾರ್ಯಾಚರಣೆ-ಎಐಕೆಎಸ್

2021ರ ಗಣತಂತ್ರ ದಿನದಂದು ಕಿಸಾನ್ ಪರೇಡ್ ನಡೆಸಲು ರೈತ ಸಂಘಟನೆಗಳ ಐಕ್ಯವೇದಿಕೆಯಾದ ಸಂಯುಕ್ತ ಕಿಸಾನ್ ಮೋರ್ಚಾದ ಕರೆ ಈಗ ಇತಿಹಾಸ ನಿರ್ಮಿಸಿದೆ. ರಾಷ್ಟ್ರೀಯ ರಾಜಧಾನಿ ಪ್ರದೇಶದ ಸುತ್ತಮುತ್ತ ಲಕ್ಷಾಂತರ ಟ್ರಾಕ್ಟರುಗಳು ಮತ್ತು ಇತರ ವಾಹನಗಳು ರಾಷ್ಟ್ರೀಯ ಬಾವುಟನ್ನು ಏರಿಸಿಕೊಂಡು, ರಾಷ್ಟ್ರಗೀತೆಗಳನ್ನು ಹಾಡಿಕೊಂಡು ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಪರೇಡಿನಲ್ಲಿ ಭಾಗವಹಿಸಿದವು. ಈ ಚಾರಿತ್ರಿಕ ರೈತ–ಕಾರ್ಮಿಕ ಪರೇಡಿನಲ್ಲಿ ದೇಶಾದ್ಯಂತ ಲಕ್ಷಾಂತರ ಜನರು ಭಾಗವಹಿಸಿದ್ದಾರೆ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಒಂದು ಪ್ರಮುಖ ಭಾಗವಾದ ಅಖಿಲ ಭಾರತ ಕಿಸಾನ್ ಸಭಾ ಎಲ್ಲರನ್ನೂ ಅಭಿನಂದಿಸುತ್ತ ಹೇಳಿದೆ.

ಪುಟ 10 ನೋಡಿ


ಶಾಹಜಹಾನ್‌ಪುರದಿಂದ ಹೊರಟ ಪರೇಡ್


ಹರ್ಯಾಣ ಸ್ತಬ್ಧಚಿತ್ರ



ಕೇರಳ ಸ್ತಬ್ಧಚಿತ್ರ


ಮಹಾರಾಷ್ಟ್ರ ಸ್ತಬ್ಧಚಿತ್ರ


ಟಿಕ್ರಿ ಗಡಿಯಿಂದ


ಸಿಂಘು ಗಡಿಯಿಂದ



ದಿಲ್ಲಿ ಸ್ವಾಗತ


ಗಾಜೀಪುರ


ಪಶ್ಚಿಮ ಬಂಗಾಲ


ಬಿಹಾರ


ಮಧ್ಯಪ್ರದೇಶ



ಮೋದಿ ಸರಕಾರ ಮತ್ತು ದಿಲ್ಲಿ ಪೋಲೀಸ್‌ಗೆ ಎ.ಐ.ಕೆ.ಎಸ್.ನ ಏಳು ಪ್ರಶ್ನೆಗಳು

ಪುಟ 10 ನೋಡಿ

ಸರಕಾರ ಮತ್ತು ಪೋಲೀಸ್‌ಗೆ ಎ.ಐ.ಕೆ.ಎಸ್.ನ ಏಳು ಪ್ರಶ್ನೆಗಳು

ದಿಲ್ಲಿಯಲ್ಲಿ ಗಣತಂತ್ರ ದಿನದ ಘಟನೆಗಳ ನಿಷ್ಪಕ್ಷಪಾತ ತನಿಖೆ ನಡೆಯಲಿ



ಗಣತಂತ್ರ ದಿನದಂದು ದಿಲ್ಲಿಯಲ್ಲಿ ನಡೆದಿರುವ ಘಟನೆಗಳು ಬಿಜೆಪಿ ಸರಕಾರ ಮತ್ತು ದಿಲ್ಲಿ ಪೋಲಿಸ್ ಛಿದ್ರಕಾರಿಗಳಿಗೆ ಪ್ರಚೋದನೆ ನೀಡುವಲ್ಲಿ ಶಾಮೀಲಾಗಿರುವುದರತ್ತ ಸ್ಪಷ್ಟವಾಗಿ ಬೊಟ್ಟು ಮಾಡಿ ತೋರಿಸುತ್ತವೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ. ಬಿಜೆಪಿ ಸರಕಾರ ಮತ್ತು ದಿಲ್ಲಿ ಪೊಲಿಸ್ ಈ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ ಎಂದು ಅದು ಹೇಳಿದೆ:

1. ಸಂಯುಕ್ತ ಕಿಸಾನ್ ಮೋರ್ಚಾದ ಭಾಗವಾಗಿರದ ಕಿಸಾನ್ ಮಜ್ದೂರ್ ಸಂಘರ್ಷ ಕಮಿಟಿ(ಕೆಎಂಎಸ್‌ಸಿ) ಗೆ ಪ್ರತ್ಯೇಕವಾಗಿ ಅನುಮತಿ ನೀಡಿದ್ದೇಕೆ? ಸಂಯುಕ್ತ ಕಿಸಾನ್ ಮೋರ್ಚಾ ಅಣಿನೆರೆಸಿದ ರೈತರ ಸುತ್ತ ಭಾರೀ ಬ್ಯಾರಿಕೇಡ್‌ಗಳನ್ನು ಹಾಕಿರುವಾಗ ಕೆಎಂಎಸ್‌ಸಿ ಸುತ್ತ ಬ್ಯಾರಿಕೇಡ್‌ಗಳು



ಸಿಕರಿಯಲ್ಲಿ ಪೊಲೀಸ್ ದಮನ ಏಕೆ?

ಇರಲಿಲ್ಲ ಏಕೆ? ಕೆಎಂಎಸ್‌ಸಿಯೊಂದಿಗೆ ಬಿಜೆಪಿ ಸರಕಾರ ಮತ್ತು ದಿಲ್ಲಿ ಪೋಲಿಸ್ ಸಂಬಂಧವೇನು?

2. ಪೋಲೀಸರು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡತ್ವದೊಂದಿಗೆ ಒಪ್ಪಿಕೊಂಡಿದ್ದ ಮಾರ್ಗದ ಬದಲಾಗಿ ಕೆಎಂಎಸ್‌ಸಿಗೆ ಬೇರೆ ದಾರಿಯಲ್ಲಿ ಕೆಂಪುಕೋಟೆಯ ವರೆಗೆ ಹೋಗಲು ಬಿಟ್ಟಿದ್ದೇಕೆ?
3. ಕೆಂಪು ಕೋಟೆಯಲ್ಲಿ ಬಾವುಟ ಹಾರಿಸಿದ ದೀಪ್ ಸಿದ್ದು ಮತ್ತು ಇತರರೊಂದಿಗೆ ಪ್ರಧಾನ ಮಂತ್ರಿ ಮೋದಿ ಮತ್ತು ಬಿಜೆಪಿಯ ಸಂಬಂಧಗಳೇನು? ಅವರನ್ನು ಇನ್ನೂ ಏಕೆ ಬಂಧಿಸಿಲ್ಲ?
4. ಕೆಂಪುಕೋಟೆಯಲ್ಲಿ ದಾಂಧಲೆ ನಡೆಸಿದ ಅಮ್ರೀಕ್ ಮಿಕಿ ಮತ್ತು ಬಿಜೆಪಿ ಹಾಗು ಅದರ ಸಂಸದ್ ಸದಸ್ಯರಾದ ಪರ್ವೆಶ್ ಸಾಹಿಬ್ ಸಿಂಗ್ ವರ್ಮ ಮತ್ತು ಮನೋಜ್ ತಿವಾರಿ ನಡುವಿನ ಸಂಬಂಧವೇನು?
5. ಪಲ್ವಲ್ ನಿಂದ ಹೊರಟ ಪರೇಡ್‌ಗೆ 45 ಕಿ.ಮೀ.ವರೆಗಿನ ಮಾರ್ಗವನ್ನು ಒಪ್ಪಿದ್ದರೂ, ಅದು ಶಾಂತಿಯುತವಾಗಿ 15ಕಿ.ಮೀ. ದಾಟಿದ ಮೇಲೆ ಸಿಕರಿಯಲ್ಲಿ ಯಾವ ಪ್ರಚೋದನೆಯೂ ಇಲ್ಲದೆ ಅದರ ಮೇಲೆ ಅಮಾನುಷ ಲಾಠೀ ಪ್ರಹಾರ ಮಾಡಿದ್ದೇಕೆ? ಸ್ವತಃ ಎಸ್.ಪಿ.ಯೇ 5–6 ಟ್ರಾಕ್ಟರುಗಳ ಟಯರುಗಳ ಗಾಳಿ ತೆಗೆಯಲು ಪ್ರಯತ್ನಿಸಿದ್ದೇಕೆ?
6. ಪಲ್ವಲ್ ನಲ್ಲಿ ಶಾಂತಿಯುತ ಪ್ರತಿಭಟನಾಕಾರರ ಮೇಲೆ ಅಮಾನುಷ ಲಾಠೀ ಪ್ರಹಾರ ಮಾಡಿದ ಪೋಲೀಸರು ಕೆಂಪುಕೋಟೆಯತ್ತ ಹೊರಟ ಗುಂಪನ್ನು ತಡೆಯಲು ಪ್ರಯತ್ನಿಸಲಿಲ್ಲ ಏಕೆ?
7. ರೈತರ ಮುಖಂಡರ ಮೇಲೆ ಗುಂಡು ಹಾರಿಸಲೆಂದೇ ಬಂದ ಸಮಾಜ ಘಾತುಕ ವ್ಯಕ್ತಿಗಳನ್ನು ಪೋಲೀಸರ ವಶಕ್ಕೆ ಒಪ್ಪಿಸಲಾಗಿತ್ತು. ಜನವರಿ 26ರಂದು ಕೂಡ ಪ್ರಚೋದಕ ಏಜೆಂಟರನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದ ಹಲವು ಉದಾಹರಣೆಗಳಿವೆ. ಇವರಲ್ಲಿ ಕೆಲವರಂತೂ ತಮ್ಮನ್ನು ಪೋಲೀಸರೇ ಕಳಿಸಿದರು ಎಂದಿದ್ದರು. ಅವರ ಮೇಲೆ ಪೋಲಿಸ್ ಕೈಗೊಂಡಿರುವ ಕ್ರಮಗಳೇನು?

ಈ ಘಟನೆಗಳ ಹಿಂದಿರುವ ಸತ್ಯವನ್ನು ತಿಳಿಯಲು ಒಂದು ನಿಷ್ಪಕ್ಷಪಾತ ತನಿಖೆಯನ್ನು ನಡೆಸಬೇಕು ಎಂದು ಎಐಕೆಎಸ್ ಆಗ್ರಹಿಸಿದೆ. ರೈತಮುಖಂಡರ ಮೇಲೆ ಸುಳ್ಳು ಕೇಸುಗಳನ್ನು ಹಾಕಿ ಬಂಧಿಸಿದರೆ ಹೋರಾಟ ಮತ್ತಷ್ಟು ತೀವ್ರಗೊಳ್ಳುತ್ತದೆ ಎಂದು ಅದು ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡಿದೆ.

ಚಾರಿತ್ರಿಕ ಕಿಸಾನ್ ಗಣತಂತ್ರ ಪರೇಡ್

ಆಗಸ್ಟ್ 15, 1947ರ ನಂತರ ಮೊದಲ ಬಾರಿಗೆ ಭಾರತೀಯ ನಾಗರಿಕರು ರೈತಾಪಿಗಳ ನೇತೃತ್ವದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಗಣತಂತ್ರ ದಿನಾಚರಣೆ ಮಾಡಿದ್ದಾರೆ. ದಿಲ್ಲಿಯ ಚಾರಿತ್ರಿಕ ರೈತ ಪರೇಡಿನಲ್ಲಿ 10ಲಕ್ಷಕ್ಕಿಂತಲೂ ಹೆಚ್ಚು ಜನಗಳು ಭಾಗವಹಿಸಿದರು. ದೇಶದ ಎಲ್ಲ ಜಿಲ್ಲೆಗಳಲ್ಲೂ ರೈತ ಪರೇಡ್‌ಗಳು ನಡೆದಿವೆ, ಕೇರಳದಲ್ಲಂತೂ ಎಲ್ಲ 1000 ಪಂಚಾಯತುಗಳಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಒಂದು ದಶಲಕ್ಷ ಜನರು ಭಾಗವಹಿಸಿದರು. ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆಯ ಕರೆಗೆ ಓಗೊಟ್ಟು ಸಾವಿರಾರು ಕಾರ್ಮಿಕರು ಇದರಲ್ಲಿ ಭಾಗವಹಿಸಿದ್ದು, ಇದು ಸ್ವಾತಂತ್ರ್ಯೋತ್ತರ ಭಾರತದ ಅತಿ ದೊಡ್ಡ ಸಾಮೂಹಿಕ ಪ್ರತಿಭಟನಾ ಕಾರ್ಯಾಚರಣೆಯಾಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ವರ್ಣಿಸಿದೆ.

ಈ ಕಿಸಾನ್–ಮಜ್ದೂರ್ ಪರೇಡ್ ದೇಶದ ಮೂಲೆ–ಮೂಲೆಗಳಲ್ಲೂ ರೈತ ಕುಟುಂಬಗಳಲ್ಲಿ ಈಗ ಮನೆಮಾಡಿರುವ ಆಳವಾದ ಮತ್ತು ವ್ಯಾಪಕವಾದ ಆಕ್ರೋಶವನ್ನು ಅಭಿವ್ಯಕ್ತಗೊಳಿಸುವಲ್ಲಿ ಯಶಸ್ವಿಯಾಗಿದೆ ಎಂದಿರುವ ಎಐಕೆಎಸ್ ಇದು ಬಿಜೆಪಿ ಸರಕಾರ ಕಾರ್ಪೊರೇಟ್ ಲೂಟಿಗಾಗಿ ತಂದಿರುವ ರೈತ–ವಿರೋಧಿ, ಕಾರ್ಮಿಕ–ವಿರೋದಿ ಕಾಯ್ದೆಗಳನ್ನು ಸೋಲಿಸುವ ಜನಗಳ ಸಂಕಲ್ಪವನ್ನು ಮತ್ತೊಮ್ಮೆ ದೃಢಪಡಿಸಿದೆ ಎಂದು ಹೇಳಿದೆ. ರೈತರ ಚಳುವಳಿಯಾಗಿ ಆರಂಭವಾದ ಇದೀಗ ಕಾರ್ಮಿಕ ವರ್ಗ, ಮಹಿಳೆಯರು, ವಿದ್ಯಾರ್ಥಿಗಳು, ಯುವಜನರು ಮತ್ತು ದಲಿತ ವಿಭಾಗಗಳು ಸಕ್ರಿಯವಾಗಿ ಭಾಗವಹಿಸುವುದರೊಂದಿಗೆ ಒಂದು ಜನತಾ ಆಂದೋಲನವಾಗಿ ಮಾರ್ಪಟ್ಟಿದೆ.

ಬಹುಪಾಲು ಶಾಂತಿಯುತವಾದ ಈ ಪ್ರತಿಭಟನೆ ಬಿಜೆಪಿ ಸರಕಾರವನ್ನು ಮತ್ತು ಆಳುವ ವರ್ಗಗಳನ್ನು ತಬ್ಬಿಬ್ಬುಗೊಳಿಸಿದೆ. ಕಳೆದ ಎರಡು ತಿಂಗಳಿಂದ ಇದರ ವಿರುದ್ಧ ಹಲವಾರು ಸುಳ್ಳುಗಳನ್ನು ಹರಡಿಸಲು ಪ್ರಯತ್ನಿಸುತ್ತಿರುವ ಕಾರ್ಪೊರೇಟ್ ಮಾಧ್ಯಮಗಳು ಮತ್ತು ಸಂಘ ಪರಿವಾರ ಈಗ ಈ ರೈತ ಆಂದೋಲನದ ಹೆಸರುಗೆಡಿಸಲು ಪಿತೂರಿಗಳಲ್ಲಿ ತೊಡಗಿವೆ. ಈಗಾಗಲೇ ಹಲವು ಗಲಭೆ ಪ್ರಚೋದಕ ಏಜೆಂಟರನ್ನು ರೈತರು ಗುರುತಿಸಿ ಪೋಲೀಸರಿಗೆ ಒಪ್ಪಿಸಿದ್ದಾರೆ. ಅವರಲ್ಲಿ ಹಲವರು ತಮ್ಮನ್ನು ಪೋಲಿಸರೇ ಕಳಿಸಿದ್ದು ಎಂದು ಹೇಳಿಕೊಂಡಿದ್ದಾರೆ. ಆದರೂ ಕಳೆದ ಎರಡು ತಿಂಗಳಲ್ಲಿ 150ಕ್ಕೂ ಹೆಚ್ಚು ರೈತರು ಹುತಾತ್ಮರಾಗಿರುವ ಬಗ್ಗೆ ಬಾಯಿ ಮುಚ್ಚಿಕೊಂಡಿದ್ದ ಈ ಕಾರ್ಪೊರೇಟ್ ಮಾಧ್ಯಮಗಳು ಜನವರಿ 26 ರ ಅಹಿತಕರ ಘಟನೆಗಳ ನಂತರ ಕೂಗಾಡುತ್ತಿವೆ.

ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಎಐಕೆಎಸ್ ಈ ಘಟನೆಗಳನ್ನು ಖಂಡಿಸಿದರೂ ರೈತರ ಆಂದೋಲನ ಪುಂಡಾಟಿಕೆ ನಡೆಸುವ, ಹಿಂಸಾತ್ಮಕ ಆಂದೋಲನ ಎಂದು ಚಿತ್ರಿಸಲು ಬಿಜೆಪಿ ಸರಕಾರ ಮತ್ತು ಕಾರ್ಪೊರೇಟ್ ಮಾಧ್ಯಮಗಳು ಪ್ರಯತ್ನಿಸುತ್ತಿವೆ, ವಾಸ್ತವವಾಗಿ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಒಪ್ಪಿಕೊಂಡ ಮಾರ್ಗದಲ್ಲಿ ಸಾಗುತ್ತಿದ್ದ ಟ್ರಾಕ್ಟರುಗಳನ್ನು ಕೆಂಪುಕೋಟೆಯತ್ತ ಸಾಗುವಂತೆ ಬಲವಂತ ಮಾಡುತ್ತಿದ್ದ

ಪುಟ 9 ರಿಂದ

ಒಂದು ಸಣ್ಣ ವಿಭಾಗವನ್ನು ತಡೆಯಲು ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಿದರು. ಸಿಂಘು ಗಡಿಯಿಂದ ಟ್ರಾಕ್ಟರುಗಳ ಚಲನೆಯನ್ನು ಮಧ್ಯಾಹ್ನ ಎರಡು ಗಂಟೆಗೇ ನಿಲ್ಲಿಸಿದರು ಮತ್ತು ಸಂಜೆ ಆರರ ವೇಳೆಗೆ ಪರೇಡನ್ನು ನಿಲ್ಲಿಸಿದರು. ಇದರಿಂದ ಸರಕಾರದ ಆಟಕ್ಕೆ ಮೋಸಹೋದ ಗುಂಪನ್ನು ಪ್ರತ್ಯೇಕಿಸುವುದು ಸಾಧ್ಯವಾಯಿತು ಎಂದು ಎಐಕೆಎಸ್ ಹೇಳಿದೆ. ಈ ಘಟನೆಗಳು ಈ ವಿಚ್ಛಿದ್ರಕಾರಿ ವ್ಯಕ್ತಿಗಳೊಂದಿಗೆ ಸರಕಾರದ ಶಾಮೀಲನ್ನು ಸ್ಪಷ್ಟವಾಗಿ ತೋರಿಸುತ್ತಿದೆ ಎಂದಿರುವ ಎಐಕೆಎಸ್ ದೇಶದ ಜನತೆ ಈ ಪಿತೂರಿಯನ್ನು ತಿರಸ್ಕರಿಸುತ್ತಾರೆ ಎಂಬ ವಿಶ್ವಾಸವನ್ನು ವ್ಯಕ್ತಪಡಿಸಿದೆ.

ಒಂದು ಸಂಘಟನೆ ಸಂಯುಕ್ತ ಕಿಸಾನ್ ಮೋರ್ಚಾ ಒಪ್ಪಿದ್ದ ದಾರಿಯ ಯೋಜನೆಯನ್ನು ಮುರಿದು ದಿಲ್ಲಿ ಪ್ರವೇಶಿಸಲು ಕರೆ ನೀಡಿತ್ತು ಎಂಬುದು ಪೋಲೀಸರಿಗೆ ಚೆನ್ನಾಗಿ ಗೊತ್ತಿತ್ತು. ಮೋದಿ ಸರಕಾರದ ಸರ್ವಾಧಿಕಾರಶಾಹಿ ಮತ್ತು ಸ್ಪಂದನಾಹೀನ ನಿಲುವು ದಿಲ್ಲಿಯಲ್ಲಿ ನಡೆದಿರುವ ಎಲ್ಲ ಅಹಿತಕರ ಘಟನೆಗಳಿಗೆ ಹೊಣೆ ಎಂದಿರುವ ಎಐಕೆಎಸ್ ಐಕ್ಯ ರೈತ ಆಂದೋಲನದ ವಿರುದ್ಧ ಈ ದುಷ್ಟ ಪಿತೂರಿಗಳನ್ನು ನಮ್ಮ ದೇಶದ ಜನರು ಸೋಲಿಸುತ್ತಾರೆ, ದೇಶದ ಮೂಲೆ–ಮೂಲೆಗೂ ಸಂಚರಿಸಿ ಪ್ರತಿ ನಾಗರಿಕರನ್ನು ತಲುಪಿ ಈ ಪಿತೂರಿಯನ್ನು ಬಯಲಿಗೆಳೆಯುತ್ತೇವೆ ಎಂದು ಬಿಜೆಪಿ ಸರಕಾರವನ್ನು ಮತ್ತು ಪ್ರಧಾನ ಮಂತ್ರಿಗಳನ್ನು ಎಚ್ಚರಿಸಿದೆ.

ಸರಕಾರ ಇಂತಹ ಸುಳ್ಳು ಪ್ರಚಾರಗಳನ್ನು ನಿಲ್ಲಿಸಿ ಈ ಮೂರು ಕೃಷಿ ಕಾಯ್ದೆಗಳನ್ನು ರದ್ದು ಮಾಡಬೇಕು ಮತ್ತು ಕನಿಷ್ಟ ಬೆಂಬಲ ಬೆಲೆಗೆ ಕಾನೂನಿನ ಗ್ಯಾರಂಟಿ ನೀಡಬೇಕು ಎಂಬ ರೈತರ ಬೇಡಿಕೆಗಳನ್ನು ಸ್ವೀಕರಿಸಬೇಕು ಎಂದು ಆಗ್ರಹಿಸಿರುವ ಎಐಕೆಎಸ್, ಈ ಬೇಡಿಕೆಗಳು ಈಡೇರುವ ವರೆಗೂ ಈ ಹೋರಾಟ ಮುಂದುವರೆಯುತ್ತದೆ ಎಂದು ಹೇಳಿದೆ.

ಈ ಹೋರಾಟ ಶಾಂತಿಯುತ ಸ್ವರೂಪದ್ದಾಗಿತ್ತು, ಇನ್ನು ಮುಂದೆಯೂ ಅದು ಹಾಗೆಯೇ ಮುಂದುವರೆಯುತ್ತದೆ. ಇದು ಈ ಹೋರಾಟದಲ್ಲಿ ಗರಿಷ್ಟ ಸಾಮೂಹಿಕ ಭಾಗವಹಿಸುವಿಕೆಯ ಒಂದು ಪೂರ್ವ ಶರತ್ತು. ಈ ಮುಂದುವರೆಯುತ್ತಿರುವ ಹೋರಾಟದ ಭಾಗವಾಗಿರುವ ಎಲ್ಲ ರೈತರೂ ಗಡಿಪ್ರತಿಭಟನಾ ಜಾಗಗಳಲ್ಲೇ ಉಳಿಯಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಎಐಕೆಎಸ್ ವಿನಂತಿ ಮಾಡಿಕೊಂಡಿವೆ.

ಗಾಜೀಪುರ ಗಡಿಯಿಂದ ಎಬ್ಬಿಸುವ ಪ್ರಯತ್ನಕ್ಕೆ ತೀವ್ರ ಪತ್ರಿರೋಧ

ಪುಟ 2 ರಿಂದ

ವರೆಗೆ ತಾವಿದ್ದಲ್ಲಿಂದ ಕದಲುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

ದಿಲ್ಲಿ ಪೋಲೀಸರು ರೈತ ಮುಖಂಡರಿಗೆ ಕೊಟ್ಟ ನೋಟೀಸುಗಳಿಗೇನೂ ಹೆದರುವುದಿಲ್ಲ, ಅದಕ್ಕೆ ಸೂಕ್ತವಾಗಿ ಪ್ರತಿಕ್ರಿಯಿಸಲಾಗುವುದು ಎಂದಿರುವ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡರು ಜನವರಿ 28ರಂದು ಸಿಂಘು ಗಡಿಯಲ್ಲಿ 16 ಕಿ.ಮೀ.ಗಳ ಒಂದು ಸದ್ಭಾವನಾ ಯಾತ್ರೆ ನಡೆಸಿದರು. ಧರ್ಮದ ಹೆಸರಿನಲ್ಲಿ ರೈತರನ್ನು ವಿಭಜಿಸುವ ಪ್ರಯತ್ನಗಳ ಬಗ್ಗೆ ಎಚ್ಚರಿಸಿದರು. ದೇಶಪ್ರೇಮ ಮತ್ತು ರಾಷ್ಟ್ರೀಯವಾದ ಕೇವಲ ಕೆಲವರ ಸೊತ್ತಲ್ಲ ದೇಶದ ಗಡಿಗಳನ್ನು ಕಾಯುವ ಸೈನಿಕರು ರೈತ ಕುಟುಂಬಗಳಿಂದಲೇ ಬಂದವರು, ಆದ್ದರಿಂದ ರೈತರು ಇತರರಿಗಿಂತ ಹೆಚ್ಚಲ್ಲದಿದ್ದರೂ ಇತರರಷ್ಟೇ ದೇಶಪ್ರೇಮಿಗಳು ಮತ್ತು ರಾಷ್ಟ್ರೀಯವಾದಿಗಳು ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಹೇಳಿಕೆ ಒತ್ತಿ ಹೇಳಿದೆ.

ಈ ರೈತ ಹೋರಾಟ ಪಂಜಾಬ್, ಹರ್ಯಾಣ ಅಥವ ಕೆಲವೇ ರಾಜ್ಯಗಳಿಗೆ ಸೀಮಿತವಾಗಿಲ್ಲ, ಇಡೀ ದೇಶ ಈ ಹೋರಾಟದಲ್ಲಿ ಒಂದುಗೂಡಿದೆ ಎಂಬುದನ್ನು ಜನವರಿ 26 ತೋರಿಸಿದೆ.

ಪೋಲೀಸರು ನಿಜವಾದ ಕ್ರಿಮಿನಲ್‌ಗಳನ್ನು ಬಂಧಿಸುವ ಬದಲು ಶಾಂತಿಯುತವಾಗಿ ಪ್ರತಿಭಟಿಸುತ್ತಿರುವವರನ್ನು ಬಂಧಿಸುತ್ತಿದಾರೆ, ಅವರ ವಾಹನಗಳನ್ನು ವಶಪಡಿಸಿಕೊಳ್ಳುತ್ತಿದ್ದಾರೆ. ಎಲ್ಲ ಬಂಧಿತ ಪ್ರತಿಭಟನಾಕಾರರನ್ನು ಬಿಡುಗಡೆ ಮಾಡಬೇಕು, ದೀಪ್ ಸಿಧುನಂತಹ ಸಮಾಜ ಘಾತುಕ ವ್ಯಕ್ತಿಗಳ ವಿರುದ್ಧ ಕಟ್ಟುನಿಟ್ಟಾದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಂಯುಕ್ತ ಕಿಸಾನ್ ಮೋರ್ಚಾ ಆಗ್ರಹಿಸಿದೆ.

ಈ ನಡುವೆ ಜನವರಿ 29 ರಂದು ಆರಂಭವಾದ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಈ ಮೂರು ಕರಾಳ ಕಾಯ್ದೆಗಳಿಗೆ ಪ್ರತಿಭಟನೆ ಸೂಚಿಸಲು ಮತ್ತು ರೈತರ ಹೋರಾಟಕ್ಕೆ ಬೆಂಬಲ ಸೂಚಿಸಲು ಎರಡೂ ಸದನಗಳನ್ನು ಉದ್ದೇಶಿಸಿ ಮಾಡುವ ರಾಷ್ಟ್ರಪತಿಗಳ ಭಾಷಣವನ್ನು 18 ಪ್ರತಿಪಕ್ಷಗಳು ಬಹಿಷ್ಕರಿಸಿವೆ. ಎಡಪಕ್ಷಗಳ ಸದಸ್ಯರು ಸಂಸತ್ತಿನ ಹೊರಗೆ ಈ ಕರಾಳ ಕಾಯ್ದೆಗಳ ವಿರುದ್ಧ ಮತಪ್ರದರ್ಶನ ನಡೆಸಿದರು.



ಗಾಜೀಪುರ ಗಡಿಯಲ್ಲಿ ಬಲಗೊಂಡ ಪ್ರತಿಭಟನೆ

ಮುಂಬಯಿಯಲ್ಲಿ ಭಾರತದ ಕಾರ್ಮಿಕರ ಮೊದಲ ರಾಜಕೀಯ ಮುಷ್ಕರ



ತಿಲಕ್ ಅವರ ಬಂಧನ ಮತ್ತು ಅವರ ಜೈಲುವಾಸದಿಂದ ಉಂಟಾದ ತೀವ್ರ ಅಸಮಾಧಾನವು ದೇಶಾದ್ಯಂತದ ಸಾಮೂಹಿಕ ಬಂಡಾಯಕ್ಕೆ ಕಾರಣವಾಯಿತು. ಜನಸಾಮಾನ್ಯರು ವಿವಿಧ ಸ್ಥಳಗಳಲ್ಲಿ ಮುಷ್ಕರ, ಹರತಾಳ, ಮತ್ತು ಪ್ರದರ್ಶನಗಳನ್ನು ಆಯೋಜಿಸಿದರು. ಆದರೆ ಈ ಆಂದೋಲನವನ್ನು ಅನನ್ಯವಾಗಿಸಿದ ಪ್ರಮುಖ ಲಕ್ಷಣವೆಂದರೆ ಜುಲೈ 1908 ರಲ್ಲಿ ಮುಂಬಯಿ ಕಾರ್ಮಿಕರ ರಾಜಕೀಯ ಮುಷ್ಕರ ಮತ್ತು ಜನಸಾಮಾನ್ಯರ ಹರತಾಳ. ಬೂರ್ಜ್ವಾ ಇತಿಹಾಸಕಾರರು ತಮ್ಮ ವರ್ಗ ಮಿತಿಗಳಿಂದಾಗಿ, ಭಾರತದ ಕಾರ್ಮಿಕ ವರ್ಗದ ಈ ಮೊದಲ ರಾಜಕೀಯ ಮುಷ್ಕರಕ್ಕೆ ಯಾವುದೇ ಪ್ರಾಮುಖ್ಯತೆಯನ್ನು ನೀಡಲಿಲ್ಲ. ಆದರೆ ಈ ರಾಜಕೀಯ ಮುಷ್ಕರವು ವಾಸ್ತವವಾಗಿ, ಭಾರತದ ಜನರ ಕ್ರಾಂತಿಕಾರಿ ಹೋರಾಟದ ಹಾದಿಯಲ್ಲಿ ಅಗಾಧ ಮಹತ್ವವನ್ನು ಹೊಂದಿದೆ. ಬೂರ್ಜ್ವಾ ಇತಿಹಾಸಕಾರರು ಈ ಘಟನೆಯ ಮಹತ್ವವನ್ನು ಮುಚ್ಚಿಡಲು ಪ್ರಯತ್ನಿಸಿದರೂ, ಈ ಹೋರಾಟದ ದೊಡ್ಡ ಪ್ರಾಮುಖ್ಯತೆ ಲೆನಿನ್ ಅವರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಮೂಲ ಲೇಖಕರು: **ಸುಕೋಮಲ್ ಸೇನ್** ಸಂಗ್ರಹ-ಅನುವಾದ: ಸಿ.ಆರ್.ಶಾನಭಾಗ್

ರಾಜಕೀಯ ಮತ್ತು ಸಾಮಾಜಿಕ ಹಿನ್ನೆಲೆ

ಭಾರತದ ಕಾರ್ಮಿಕ ವರ್ಗವು ತನ್ನ ಮೊದಲ ಮತ್ತು ನೇರ ರಾಜಕೀಯ ಮುಷ್ಕರವನ್ನು ಜುಲೈ 1908 ರಲ್ಲಿ ಮುಂಬಯಿ ನಗರದಲ್ಲಿ ಪ್ರಾರಂಭಿಸಿತು. ಭಾರತದ ಕಾರ್ಮಿಕರ ಈ ಮೊದಲ ರಾಜಕೀಯ ಕ್ರಮವು ಈ ಹೊಸ ಸಾಮಾಜಿಕ ಶಕ್ತಿಯ ಪ್ರಚಂಡ ಕ್ರಾಂತಿಕಾರಿ ಸಾಮರ್ಥ್ಯವನ್ನು ಸೂಚಿಸುವ ಒಂದು ದೊಡ್ಡ ಐತಿಹಾಸಿಕ ಘಟನೆಯಾಗಿದೆ.

ಇಪ್ಪತ್ತನೇ ಶತಮಾನದ ಆರಂಭದ ವೇಳೆಗೆ ಮುಂಬಯಿ ಅದಾಗಲೇ ಭಾರತದ ಎರಡನೇ ದೊಡ್ಡ ನಗರವಾಗಿ ಮತ್ತು ಎರಡು ದೊಡ್ಡ ಕೈಗಾರಿಕಾ ಕೇಂದ್ರಗಳಲ್ಲಿ ಒಂದಾಗಿ ಅಭಿವೃದ್ಧಿಯಾಗಿತ್ತು. ಭಾರತದ 1911 ರ ಜನಗಣತಿಯ ಪ್ರಕಾರ, ನಗರದ ಜನಸಂಖ್ಯೆಯು 979,000 ರಷ್ಟಿತ್ತು. 1908 ರ ಫ್ಯಾಕ್ಟರಿ ಕಾಯ್ದೆಯಡಿ ನೋಂದಾಯಿತ ಕಾರ್ಖಾನೆಗಳ ಸಂಖ್ಯೆ 168 ಆಗಿತ್ತು. 1906 ರಲ್ಲಿ, ಶೇಕಡಾ 34 ರಷ್ಟು ಜನಸಂಖ್ಯೆ ಕೈಗಾರಿಕೆ, ನಿರ್ಮಾಣ, ಸಾರಿಗೆ ಸೇವೆಗಳು ಮತ್ತು ಸಹಾಯಕ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿತ್ತು.

ಆದರೆ ಈ ನಗರದಲ್ಲಿ ಕೈಗಾರಿಕೆಯ ಅಭಿವೃದ್ಧಿಯು ಒಂದು ವಿಶಿಷ್ಟ ವಸಾಹತುಶಾಹಿ ಮಾದರಿಯನ್ನು ಪ್ರದರ್ಶಿಸಿತು. ಇದು ಕೈಗಾರಿಕೆಯ ವಿವಿಧ ಶಾಖೆಗಳ ಸಮತೋಲಿತ ಬೆಳವಣಿಗೆಯ ದಾರಿಯಲ್ಲ. ಜವಳಿ ತಯಾರಿಕೆಯು ನಗರದ ಕೈಗಾರಿಕಾ ಚಟುವಟಿಕೆಯ ಮುಖ್ಯ ಶಾಖೆಯಾಗಿ ಮಾರ್ಪಟ್ಟಿತು, ನಗರದ ಒಟ್ಟು 180,000 ರಿಂದ 200,000 ರಷ್ಟಿದ್ದ ಕೈಗಾರಿಕಾ ಕಾರ್ಮಿಕ ಬಲದಲ್ಲಿ ಸುಮಾರು 100,000 ಕಾರ್ಮಿಕರನ್ನು ಜವಳಿ ಕೈಗಾರಿಕೆ ಹೊಂದಿತ್ತು. ಸಹಜವಾಗಿ, ನಗರದಲ್ಲಿ ಇನ್ನುಳಿದ 100,000 ಕೌಶಲ್ಯರಹಿತ ಕಾರ್ಮಿಕರು ಕೂಲಿಗಳಾಗಿ ಕೆಲಸ ಮಾಡುತ್ತಿದ್ದರು ಅಥವಾ ಇತರ ಉದ್ಯೋಗಗಳಲ್ಲಿ ತೊಡಗಿದ್ದರು. ಮುಂಬಯಿಯ ಜನಸಂಖ್ಯೆಯು ವಿವಿಧ ಭಾರತೀಯ ರಾಷ್ಟ್ರೀಯತೆಗಳಿಂದ ಕೂಡಿತ್ತು. ಆದಾಗ್ಯೂ, ಮರಾಠರು ಪ್ರಬಲರಾಗಿದ್ದು ಒಟ್ಟು ಶೇಕಡಾ 51 ರಷ್ಟಿದ್ದರು. ನಂತರ ಗುಜರಾತಿಗಳು ಶೇಕಡಾ 26 ರಷ್ಟಿದ್ದರು ಮತ್ತು ಉಳಿದವರು ಇತರ ರಾಷ್ಟ್ರೀಯತೆಗಳು ಮತ್ತು ಭಾಷಾ ಗುಂಪುಗಳಿಗೆ ಸೇರಿದವರಾಗಿದ್ದರು.

ಮರಾಠರ ಈ ಪ್ರಾಮುಖ್ಯತೆಯ ಹೊರತಾಗಿಯೂ, ಗಣನೀಯ ಸಂಖ್ಯೆಯ ಹಿಂದಿ ಭಾಷಿಕರು, ಗುಜರಾತಿ, ತೆಲುಗು ಮತ್ತು ಇತರ ಕಾರ್ಮಿಕರು ಮುಂಬಯಿಯ ಶ್ರಮಜೀವಿಗಳ ಭಾಗವಾಗಿದ್ದು, ಮೂಲಭೂತವಾಗಿ ಬಹುರಾಷ್ಟ್ರೀಯತೆಯ ಲಕ್ಷಣವನ್ನು ಹೊಂದಿತ್ತು. ಮುಂಬಯಿ ಶ್ರಮಜೀವಿಗಳ ಈ ಸಂಯೋಜನೆಯು ಒಟ್ಟಾರೆಯಾಗಿ ದೇಶದ ಹೋರಾಟದ ಬೆಳವಣಿಗೆಗೆ ಅನುಕೂಲಕರವಾಗಿತ್ತು, ಆದರೆ ಅದೇ ಸಮಯದಲ್ಲಿ ಹೆಚ್ಚಿನ ಸಂಖ್ಯೆಯ ಮರಾಠರು ಮಹಾರಾಷ್ಟ್ರದ ರಾಷ್ಟ್ರೀಯ ಪ್ರಜಾಪ್ರಭುತ್ವ ಶಕ್ತಿಗಳು ಮುಂಬಯಿ ಕಾರ್ಮಿಕರೊಂದಿಗೆ ಸಂಪರ್ಕವನ್ನು ಸ್ಥಾಪಿಸಲು ಅನುಕೂಲ ಮಾಡಿಕೊಟ್ಟರು . ಭಾರತದ ಕಾರ್ಮಿಕ ವರ್ಗದ ಆರಂಭಿಕ ಬೆಳವಣಿಗೆಯಲ್ಲಿ ಧರ್ಮ, ಭಾಷೆ ಮತ್ತು ರಾಷ್ಟ್ರೀಯತೆಯು ಪ್ರಮುಖ ಪಾತ್ರವನ್ನು ವಹಿಸಿದವು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಬೆಳೆಯಲಾರಂಭಿಸಿದ ರಾಷ್ಟ್ರೀಯ ಚಳುವಳಿ ಮತ-ಧರ್ಮದಿಂದ ದೂರವಿರಲು ಪ್ರಯತ್ನ ಮಾಡಲಿಲ್ಲ. ರಾಜಕೀಯ ಮನವಿಗಳು ಧರ್ಮದ ಛಾಯೆಯನ್ನು ಹೊಂದಿದ್ದವು. ಬಾಲ ಗಂಗಾಧರ್ ತಿಲಕ್ ಮತ್ತು ಇತರ ರಾಷ್ಟ್ರೀಯತಾವಾದಿ ನಾಯಕರು ಪ್ರಚಾರ ಮಾಡಿದ ದೇಶಭಕ್ತಿ ಮತ್ತು ರಾಜಕೀಯ ತತ್ವಶಾಸ್ತ್ರವನ್ನು ಪ್ರಾಯೋಗಿಕವಾಗಿ ಹಿಂದೂ ಧರ್ಮದ ಚಿಪ್ಪಿನಲ್ಲಿ ಪೋಷಿಸಲಾಗಿತ್ತು. ಇದಲ್ಲದೆ, ಮಹಾರಾಷ್ಟ್ರದ ನಿರ್ದಿಷ್ಟ ಸಂದರ್ಭದಲ್ಲಿ, ಶಿವಾಜಿಯನ್ನು ಮಹಾರಾಷ್ಟ್ರದ ರಾಷ್ಟ್ರೀಯ ವೀರ ಎಂದು ಸಂಕೇತಿಸಿ,, ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ವಿರುದ್ಧ ಜನಸಾಮಾನ್ಯರನ್ನು ಪ್ರಚೋದಿಸಲು, ಮೊಘಲ್ ಚಕ್ರವರ್ತಿಯ ವಿರುದ್ಧ ಸ್ವಾತಂತ್ರ್ಯಕ್ಕಾಗಿ ಶಿವಾಜಿ ಮಾಡಿದ ವೀರ ಹೋರಾಟದ ಆದರ್ಶೀಕರಣವು, ಮುಹಮ್ಮದೀಯರಿಗಿಂತ ಹಿಂದೂಗಳ ಮೇಲೆ ಹೆಚ್ಚು ಪ್ರಭಾವ ಬೀರಿತು. ಮತ್ತು ಮುಂಬಯಿಯಲ್ಲಿ, ಕಾರ್ಮಿಕರಲ್ಲಿ ನಾಲ್ಕರಲ್ಲಿ ಮೂರು ಭಾಗ ಹಿಂದೂಗಳು, ಮತ್ತು ಉಳಿದವರು ಮುಹಮ್ಮದೀಯರು. ಮೂಲಭೂತವಾಗಿ, ಮುಂಬಯಿಯ ಮೂರು ಲಕ್ಷ ಕಾರ್ಮಿಕರ ಈ ಧರ್ಮ, ಭಾಷೆ ಮತ್ತು ರಾಷ್ಟ್ರೀಯತೆಯ ಬೆರೆಯುವಿಕೆಯ ಪ್ರಮಾಣವು, ಅಂದಿನ ಮಹಾರಾಷ್ಟ್ರದ ರಾಷ್ಟ್ರೀಯ ಚಳವಳಿಯ ಹಂತ ಮತ್ತು ಲಕ್ಷಣಕ್ಕೆ ನಿಕಟ ಹೊಂದಾಣಿಕೆಯಾಗುತ್ತದೆ. ಮುಂಬಯಿ ಶ್ರಮಜೀವಿಗಳ ಈ ವಿಶಿಷ್ಟ ಲಕ್ಷಣಗಳು ಅವರನ್ನು ಭಾರತದ ಮತ್ತೊಂದು ದೊಡ್ಡ ಕೈಗಾರಿಕಾ ಕೇಂದ್ರವಾದ ಕಲ್ಕತ್ತಾದ ಶ್ರಮಜೀವಿಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ರಾಜಕೀಯ ಹೋರಾಟದಲ್ಲಿ ಭಾಗವಹಿಸಲು ಹೆಚ್ಚು ಅನುಕೂಲಕರ ಸ್ಥಾನದಲ್ಲಿ ಇರಿಸಿತು.

ಲೋಕಮಾನ್ಯ ತಿಳಕರ ವಿರುದ್ಧ ರಾಜದ್ರೋಹದ ವಿಚಾರಣೆಯಲ್ಲಿ



ಕಲ್ಕತ್ತಾಕ್ಕಿಂತ ಭಿನ್ನ

ಕಲ್ಕತ್ತಾದಲ್ಲಿ, ಹೆಚ್ಚಿನ ಕಾರ್ಮಿಕರು ಬಂಗಾಳದ ಹೊರಗಿನವರು. ಕಲ್ಕತ್ತಾದ ಬಹುರಾಷ್ಟ್ರೀಯ ಮತ್ತು ಬಹುಭಾಷಾ ಕಾರ್ಮಿಕ ವರ್ಗವು ವಿವಿಧ ರಾಷ್ಟ್ರೀಯತೆಗಳು ಮತ್ತು ಭಾಷಾ ಗುಂಪುಗಳಿಗೆ ಸೇರಿದ ಬಡ ರೈತರಿಂದ ಕೂಡಿತ್ತು. ಅವರು ಹೆಚ್ಚಾಗಿ ಸಂಯುಕ್ತ- ಪ್ರಾಂತ್ಯಗಳು, ಬಿಹಾರ, ಒರಿಸ್ಸಾ ಮತ್ತು ಇತರ ದೂರದ ಪ್ರದೇಶಗಳಿಂದ ಬಂದವರು. ಅವರ ಸಾಂಪ್ರದಾಯಿಕ ವಾಸಸ್ಥಾನದಿಂದ ಬೇರ್ಪಡಿಸಿ, ಅವರನ್ನು ವಿಭಿನ್ನ ಮತ್ತು ಪರಿಚಿತವಲ್ಲದ ಸಾಮಾಜಿಕ ವಾತಾವರಣದಲ್ಲಿ ಕೆಲಸ ಮಾಡುವ ಒತ್ತಾಯಕ್ಕೆ ಒಳಪಡಿಸಲಾಗಿತ್ತು. ಭಾಷೆ, ರೂಢಿಗಳು, ಸಾಮಾಜಿಕ ಮತ್ತು ಆಹಾರ ಪದ್ಧತಿ ಕೂಡ ಬಹಳ ಭಿನ್ನವಾಗಿದ್ದವು. ಈ ದೂರದ ಅನುಭವ ಮತ್ತು ವಿಭಿನ್ನ ಮುಖದ ಅಪರಿಚಿತತೆಯು, ಈ ಕಾರ್ಮಿಕರು ಮತ್ತು ಕಲ್ಕತ್ತಾದ ಮತ್ತು ಇಡೀ ಬಂಗಾಳದ ಬೆಳೆಯುತ್ತಿದ್ದ ರಾಷ್ಟ್ರೀಯ ರಾಜಕೀಯ ಚಳುವಳಿ ನಡುವಿನ ಸಂಬಂಧವನ್ನು ದುರ್ಬಲಗೊಳಿಸಿತು. 1905–08ರ ಅವಧಿಯಲ್ಲಿ ಭಾರತವನ್ನು ಮುನ್ನಡೆಸಿದ ರಾಷ್ಟ್ರೀಯ-ರಾಜಕೀಯ ಜಾಗೃತಿ ಬಂಗಾಳದಲ್ಲಿ ತುಲನಾತ್ಮಕವಾಗಿ ಉನ್ನತ ಮಟ್ಟವನ್ನು ಗಳಿಸಿತು – ಅಲ್ಲಿ ಕಾರ್ಮಿಕರ ಆರ್ಥಿಕ ಹೋರಾಟಗಳು ಬಹುತೇಕ ಪೂರ್ಣವ್ಯಾಪ್ತಿಯನ್ನು ಪಡೆದಿದ್ದವು.. ಈ ಅನುಕೂಲಕರ ಸನ್ನಿವೇಶಗಳ ಹೊರತಾಗಿಯೂ, ಒಟ್ಟಾರೆಯಾಗಿ ಬಂಗಾಳದ ಕಾರ್ಮಿಕ ವರ್ಗವು ಮುಖ್ಯವಾಗಿ ಅದರ ಸಂಪೂರ್ಣ ಮಿಶ್ರರೂಪದ ಸಂಯೋಜನೆ ಮತ್ತು ಹೊಸ ಮಣ್ಣಿನೊಂದಿಗಿನ ಸಂಪರ್ಕದ ಅಭಾವದಿಂದಾಗಿ, ಆ ಪ್ರಾಂತ್ಯದ ಉಕ್ಕೇರುತ್ತಿದ್ದ ರಾಜಕೀಯ ಚಳವಳಿಯೊಂದಿಗೆ ಬೆರೆಯಲಾಗದ ಆತ್ಮವಿಶ್ವಾಸದ ಕೊರತೆಯನ್ನು ಅನುಭವಿಸಿತು. ಆದರೆ ಕಾರ್ಮಿಕ ವರ್ಗದ ಮಣ್ಣಿನಲ್ಲಿ ಬೇರೂರಿದ್ದ ಬಂಗಾಳಿ ವಿಭಾಗವು ಖಂಡಿತವಾಗಿಯೂ ರಾಜಕೀಯ ಪ್ರಭಾವಕ್ಕೆ ಒಳಪಟ್ಟಿತು ಮತ್ತು ಈ ಅವಧಿಯಲ್ಲಿ ಅವರು ಪ್ರಾರಂಭಿಸಿದ ಆರ್ಥಿಕ ಹೋರಾಟಗಳು ಸ್ಪಷ್ಟವಾದ ರಾಜಕೀಯ ಪರಿಮಳವನ್ನು ಹೊಂದಿದ್ದವು. ಬಂಗಾಳಿ ಕಾರ್ಮಿಕರು ಸಂಖ್ಯಾತ್ಮಕ ಬಲದಲ್ಲಿ ಸಂಪೂರ್ಣವಾಗಿ ಪ್ರಾಬಲ್ಯ ಹೊಂದಿದ್ದ ಪೂರ್ವ ಬಂಗಾಳ ರೈಲ್ವೆ, ಭಾರತ ಸರ್ಕಾರದ ಮುದ್ರಣಾಲಯ, ಕಲ್ಕತ್ತಾ ಮತ್ತು ಇತರ ಕೆಲವು ಸಂಸ್ಥೆಗಳಲ್ಲಿನ ಮುಷ್ಕರಗಳು ಇದನ್ನು ಸ್ಪಷ್ಟಪಡಿಸುತ್ತವೆ. ಆದರೆ, ಬಂಗಾಳ ಕಾರ್ಮಿಕ ವರ್ಗದ ಪೂರ್ವಭಾವಿ ಬಹುರಾಷ್ಟ್ರೀಯತೆಯ ಸ್ವಭಾವವು ಕಾಲಕ್ರಮೇಣ ಹೆಚ್ಚು ಪ್ರಯೋಜನಕಾರಿ ಎಂದು ಸಾಬೀತಾಯಿತು ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟದ ಉನ್ನತ ಹಂತದಲ್ಲಿ, ಅದರ ಏಕೀಕರಣದ ಪರಿಣಾಮವು ಸ್ಪಷ್ಟವಾಗಿ ಹೊರಬಂದಿತು. ಉನ್ನತ ಮಟ್ಟದ ಬಹುರಾಷ್ಟ್ರೀಯತೆಯ ಪಾತ್ರವು ಇತ್ತೀಚೆಗೆ ಬಂಗಾಳದ ಕಾರ್ಮಿಕ ವರ್ಗದಲ್ಲಿ ವಿಶಾಲವಾದ ರಾಜಕೀಯ ದೃಷ್ಟಿಕೋನ ಮತ್ತು ಉನ್ನತ ಪ್ರಜ್ಞೆಯನ್ನು ಹುಟ್ಟುಹಾಕುವಲ್ಲಿ ಅನುಕೂಲಕರ ಶಕ್ತಿಯಾಗಿ ಕಾರ್ಯನಿರ್ವಹಿಸಿತು.

ಆದಾಗ್ಯೂ, ಮುಂಬಯಿ ಶ್ರಮಜೀವಿಗಳ ಒಟ್ಟು ಪರಿಸ್ಥಿತಿಯು, ಅದರ ರಾಜಕೀಯ ಅಪಕ್ವತೆ ಮತ್ತು ಸಂಘಟನೆಯ ಕೊರತೆಯ ಹೊರತಾಗಿಯೂ, ನಗರದಲ್ಲಿ ಭುಗಿಲೆದ್ದ ಹೋರಾಟದಲ್ಲಿ ಅದು ನಿರ್ಣಾಯಕ ಶಕ್ತಿಯಾಗಲು ಕಾರಣವಾಯಿತು.


ಕಾರ್ಮಿಕ ವರ್ಗದ ಆರ್ಥಿಕ ಮತ್ತು ರಾಜಕೀಯ ಹೋರಾಟಗಳು ವಸುತಃ ಭಾರತದ ಮೇಲಿನ ವಸಾಹತುಶಾಹಿ ಆಡಳಿತದ ವಿರುದ್ಧವೇ ನಡೆದವು. ಆದ್ದರಿಂದ ಈ ಹೋರಾಟಗಳು ಭಾರತೀಯ ಸಮಾಜದ ವಸಾಹತುಶಾಹಿ ಶೋಷಣೆಯಿಂದ ಅಪಾಯಕ್ಕೊಳಗಾದ ಸ್ತರಗಳಿಂದ ಸಹಾನುಭೂತಿ ಮತ್ತು ಬೆಂಬಲವನ್ನು ಪಡೆದವು. ಅಂತೆಯೇ, ವಸಾಹತುಶಾಹಿ ನಿಯಮಗಳ ಹಿತಾಸಕ್ತಿಗಳಿಗೆ ಅನುಗುಣವಾದ ವರ್ಗಗಳು ಮತ್ತು ಗುಂಪುಗಳು ಈ ಹೋರಾಟಗಳ ವಿರುದ್ಧ ದ್ವೇಷದಿಂದ ಪ್ರಚೋದಿಸಲ್ಪಟ್ಟವು. ಕಾರ್ಮಿಕ ವರ್ಗದ ಮುನ್ನಡೆದ ಚಳುವಳಿ, ನಿರ್ದಿಷ್ಟವಾಗಿ ಮುಂಬಯಿ ಕಾರ್ಮಿಕರ ಮೊದಲ ರಾಜಕೀಯ ಕ್ರಮವು ಭಾರತೀಯ ಸಮಾಜದ ಈ ವಿರೋಧಾಭಾಸವನ್ನು ಮುಂಚೂಣಿಗೆ ತಂದಿತು.

1905 ರಲ್ಲಿ ಪ್ರಾರಂಭವಾದ ಸಾಮೂಹಿಕ ಜಾಗೃತಿಯ ಹಾದಿಯ ತುದಿಯಲ್ಲಿ ನಡೆದ 1908 ರ ಮ್ಹುಂಬಯಿ ಕಾರ್ಮಿಕರ ರಾಜಕೀಯ ಕ್ರಮವು 1905–07ರ ಅವಧಿಯಲ್ಲಿ ಝಾರನ ರಷ್ಯಾದಲ್ಲಿ ನಡೆದ ಬೂರ್ಜ್ವಾ-ಪ್ರಜಾಪ್ರಭುತ್ವ ಕ್ರಾಂತಿಯ ಮತ್ತು ಆ ಕ್ರಾಂತಿಯಲ್ಲಿ ರಷ್ಯಾದ ಕಾರ್ಮಿಕ ವರ್ಗವು ಮುಖ್ಯ ಅಸ್ತ್ರವಾಗಿ ಬಳಸಿದ ರಾಜಕೀಯ ಸಾರ್ವತ್ರಿಕ ಮುಷ್ಕರದ ಪ್ರಭಾವದಿಂದ ಕೂಡ ಗುರುತಿಸಲ್ಪಟ್ಟಿದೆ.

1905–07ರ ತೀಕ್ಷ್ಣವಾದ ಕಾರ್ಮಿಕ-ರೈತ ಹೋರಾಟಗಳು, ಬೃಹತ್ ಚಳುವಳಿ ಮತ್ತು ಜನರ ಬೆಳೆಯುತ್ತಿದ್ದ ಕ್ರಾಂತಿಕಾರಿ ಪ್ರವೃತ್ತಿ, ಭಾರತದ ಬೂರ್ಜ್ವಾಸಿಗಳ ನಡುವೆ ಬಿಕ್ಕಟ್ಟನ್ನು ಹುಟ್ಟುಹಾಕಿತು. ಅದು 1907 ರಲ್ಲಿ ನಡೆದ ಸೂರತ್ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಬಹಿರಂಗವಾಗಿ ಪ್ರಕಟವಾಯಿತು.. ಈ ಅಧಿವೇಶನದಲ್ಲಿ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಎಂದು ಕರೆಯಲ್ಪಡುವ ಎರಡು ಗುಂಪುಗಳಾಗಿ ವಿಭಜನೆಯಾಯಿತು. ಮಂದಗಾಮಿಗಳು ಬ್ರಿಟಿಶ್ ಸರ್ಕಾರದೊಂದಿಗೆ ಸಹಕಾರ ನೀತಿ ಮತ್ತು ಅದೇ ಸಮಯದಲ್ಲಿ ಬಹಿಷ್ಕಾರ ಚಳುವಳಿ ಮತ್ತು ಹಿಂಸಾಚಾರದ ಮಾರ್ಗವನ್ನು ತ್ಯಜಿಸಲು ಸೂಚಿಸಿದರು. ಇನ್ನೊಂದು ಬದಿಯಲ್ಲಿ, ತೀವ್ರಗಾಮಿಗಳು ಎಂದು ಕರೆಯಲ್ಪಡುವ ಗುಂಪಿನ ಪ್ರಮುಖ ನಾಯಕ ತಿಲಕ್, ಬ್ರಿಟಿಶ್ ಆಡಳಿತದ ವಿರುದ್ಧ ಸಾಮೂಹಿಕ ಆಂದೋಲನಕ್ಕೆ ಒತ್ತಾಯಿಸಿದರು. ತನ್ನ ಅನುಯಾಯಿಗಳೊಂದಿಗೆ ಅವರು ಕಾರ್ಮಿಕರನ್ನು ಸಹ ಸಂಪರ್ಕಿಸಿದರು ಮತ್ತು ಸಾಮೂಹಿಕ-ರಾಜಕೀಯ ಹೋರಾಟಕ್ಕೆ ಸೇರಲು ಅವರನ್ನು ಒತ್ತಾಯಿಸಿದರು. ಸಹಜವಾಗಿ, ಅವರ ಕಡೆಯಿಂದ ಈ ಪ್ರಯತ್ನ ಕಾರ್ಮಿಕ ವರ್ಗದ ಕ್ರಾಂತಿಕಾರಿ ಸಾಮರ್ಥ್ಯದ ಸಾಕ್ಷಾತ್ಕಾರದಿಂದ ಅಲ್ಲ, ಆದರೆ ತಮ್ಮದೇ ಆದ ಸಂಕುಚಿತ ವರ್ಗ ನೋಟದಿಂದ ಬದ್ಧವಾಗಿದ್ದ ಶುದ್ಧವಾದ ಪ್ರಾಯೋಗಿಕ ದೃಷ್ಟಿಕೋನದಿಂದ ನಡೆದಿತ್ತು, ಈ ವಿಶಾಲವಾದ

ಪುಟ 14 ನೋಡಿ

ಕೊವಿಡ್ ಕಾಲ ಸಿರಿವಂತರ ಸಿರಿಯನ್ನು ಮತ್ತಷ್ಟು ಹೆಚ್ಚಿಸಿದೆ - ಆಕ್ಸ್ ಫಾಂ ನ 'ಅಸಮಾನತೆಯ ವೈರಸ್' ವರದಿ



ಭಾರತದಲ್ಲಿ ಮಾರ್ಚ್ 2020ರಿಂದ ಕೊವಿಡ್-19 ಮತ್ತು ಲಾಕ್‌ಡೌನ್‌ನಿಂದಾಗಿ ಒಂದೆಡೆಯಲ್ಲಿ 12.2 ಕೋಟಿ ಜನಗಳ ಜೀವನಾಧಾರಗಳನ್ನು ಕಸಿದುಕೊಂಡಿದ್ದರೆ, ಇನ್ನೊಂದೆಡೆಯಲ್ಲಿ ನೂರು ಮಂದಿ ಡಾಲರ್ ಬಿಲಿಯಾಧೀಶರ ಸಂಪತ್ತು 12,97,822 ಕೋಟಿ ರೂ. ಗಳಷ್ಟು ಹೆಚ್ಚಿದೆ, ಅಂದರೆ ದೇಶದ 13.8 ಕೋಟಿ ಅತ್ಯಂತ ಬಡಜನಗಳಿಗೆ ತಲಾ 1 ಲಕ್ಷ ರೂ. ನಷ್ಟು ಕೊಡಲು ಸಾಲುವಷ್ಟು!

ಇದು ಈ ವಾರ ಪ್ರಕಟವಾಗಿರುವ 'ಅಸಮಾನತೆಯ ವೈರಸ್' ಎಂಬ ಆಕ್ಸ್ ಫಾಂ ವರದಿ ಕಂಡುಕೊಂಡಿರುವ ಸಂಗತಿ.

ಕೊವಿಡ್-19 ಭಾರತದಲ್ಲಿ ಮಾತ್ರವಲ್ಲ, ಜಗತ್ತಿನಾದ್ಯಂತ ಅಸಮಾನತೆಯನ್ನು ತೀಕ್ಷ್ಣಗೊಳಿಸಿದೆ ಎಂದು ಈ ವರದಿ ಹೇಳಿದೆ. ಜಗತ್ತಿನಾದ್ಯಂತ 1000 ಬಿಲಿಯಾಧೀಶರುಗಳ ಸಂಪತ್ತುಗಳು ಕೊವಿಡ್-ಪೂರ್ವದ ಮಟ್ಟಗಳಿಗೆ ಮತ್ತೆ ಏರಿವೆ. ಆದರೆ ಜಗತ್ತಿನ ಅತ್ಯಂತ ಬಡಜನಗಳ ಆದಾಯಗಳು ಕೊವಿಡ್-ಪೂರ್ವದ ಮಟ್ಟಕ್ಕಾದರೂ ಮತ್ತೆ ಬರಲು ಕನಿಷ್ಟ ಒಂದು ದಶಕ ಬೇಕಾದೀತು. **ಕೊವಿಡ್ ಮಹಾಸೋಂಕು ಆರಂಭವಾದಂದಿನಿಂದ ಜಗತ್ತಿನ 10 ಅತ್ಯಂತ ಶ್ರೀಮಂತರ ಸಂಪತ್ತಿನಲ್ಲಿ ಆಗಿರುವ ಹೆಚ್ಚಳ "ಜಗತ್ತಿನಲ್ಲಿ ಯಾರೂ ದಾರಿದ್ರ್ಯಕ್ಕೆ ಬೀಳದಂತೆ ತಡೆಯಲು ಮತ್ತು ಪ್ರತಿಯೊಬ್ಬರಿಗೂ ಲಸಿಕೆಯನ್ನು ಉಚಿತವಾಗಿ ಕೊಡಲು ಸಾಕಷ್ಟಾಗುತ್ತದೆ"** ಎಂದು ಈ ವರದಿ ತೌಲನಿಕವಾಗಿ ಹೇಳಿದೆ.

ಭಾರತದಲ್ಲಿ ಕಾರ್ಪೊರೇಟ್-ಪರ ಸರಕಾರದ ಧೋರಣೆಗಳಿಂದಾಗಿ ಈ ಅಸಮಾನತೆಯ ವೈರಸಿನ ದುಷ್ಪರಿಣಾಮ ಇನ್ನೂ ಹೆಚ್ಚು. ಮುಕೇಶ್ ಅಂಬಾನಿಯ ಸಂಪತ್ತು ಈ ಅವಧಿಯಲ್ಲಿ 72%ದಷ್ಟು ಹೆಚ್ಚಿ 5,83,700 ಕೋಟಿ ರೂ.ಗಳಿಗೇರಿ, ಆತನನ್ನು ಜಗತ್ತಿನ ನಾಲ್ಕನೇ ಅತಿ ದೊಡ್ಡ ಶ್ರೀಮಂತನಾಗಿ ಮತ್ತು ಏಷ್ಯಾ ಮತ್ತು ಭಾರತದ ಅತ್ಯಂತ ಶ್ರೀಮಂತ ವ್ಯಕ್ತಿಯನ್ನಾಗಿ ಮಾಡಿತು. ಈ ಕೊವಿಡ್ ಕಾಲದಲ್ಲಿ ಈತ ಒಂದು ಗಂಟೆಯಲ್ಲಿ ಗಳಿಸಿದ ಹಣವನ್ನು ಸಂಪಾದಿಸಬೇಕಾದರೆ ಒಬ್ಬ ಅಕುಶಲ ಕಾರ್ಮಿಕ 10,000 ವರ್ಷ ಕೆಲಸ ಮಾಡಬೇಕಾದೀತು ಎಂದು ಈ ವರದಿ ಅಸಮಾನತೆಯ ಅಗಾಧ ಪ್ರಮಾಣವನ್ನು ಎತ್ತಿ ತೋರಿಸಿದೆ,

" ಸರಕಾರ ಸಾರ್ವಜನಿಕ ಕಲ್ಯಾಣದ ಮೇಲೆ ಖರ್ಚು ಮಾಡಲು ಹಿಂದೇಟು ಹಾಕಿತು, ಆದರೆ ಕಾರ್ಪೊರೇಟ್ ವಲಯಕ್ಕೆ ಮತ್ತು ಭಾರತದ ಕುಲೀನ ವರ್ಗಗಳಿಗೆ ಸಕ್ರಿಯವಾಗಿ ನೆರವುಧನ ಒದಗಿಸಿತು" ಎಂದಿರುವ ವರದಿ ಇದಕ್ಕೆ ಉದಾಹರಣೆಯಾಗಿ ಸರಕಾರದ ಕೊವಿಡ್-19 ಪ್ಯಾಕೆಜಿನ ನಾಲ್ಕನೇ ಕಂತು ಅದಾನಿ ಗುಂಪು, ರಿಲಯನ್ಸ್ ಗುಂಪು, ವೇದಾಂತ ಮುಂತಾದವರಿಗೇ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂಬ ಮಾಧ್ಯಮ ವರದಿಗಳನ್ನು ಉದ್ಧರಿಸಿದೆ.

ಭಾರತದಲ್ಲಿ ಆರ್ಥಿಕ ನಿಧಾನಗತಿ ಅತ್ಯಂತ ಹೆಚ್ಚಾಗಿ ಬಾಧಿಸಿರುವುದು ಅನೌಪಚಾರಿಕ ವಲಯದ ಕಾರ್ಮಿಕರನ್ನು. 12.2 ಕೋಟಿ ಉದ್ಯೋಗನಷ್ಟದಲ್ಲಿ 9.2 ಕೋಟಿ ಈ ವಲಯದ್ದೇ, ಅಂದರೆ 75ಶೇ. ದಷ್ಟು, ಲಾಕ್‌ಡೌನಿನ ಅವಧಿಯಲ್ಲಿ 300ಕ್ಕೂ ಹೆಚ್ಚು ಅನೌಪಚಾರಿಕ ವಲಯದ ಕಾರ್ಮಿಕರು "ಹಸಿವು, ಆತ್ಮಹತ್ಯೆ, ಸುಸ್ತು, ರಸ್ತೆ ಹಾಗೂ ರೈಲು ಅಪಘಾತಗಳು, ಪೊಲೀಸ್ ಅಮಾನುಷತೆ ಮತ್ತು ಸಮಯಕ್ಕೆ ಸರಿಯಾಗಿ ವೈದ್ಯಕೀಯ ಪಾಲನೆ ದೊರೆಯದ" ಪ್ರಾಣ ಕಳಕೊಂಡಿರುವುದು ದಾಖಲಾಗಿದೆ ಎಂದು ಈ ವರದಿ ಉದ್ಧರಿಸಿದೆ.

ಭಾರತ ಸ್ವಾತಂತ್ರ್ಯಾನಂತರದ ಅತಿ ದೊಡ್ಡ ವಲಸೆಯನ್ನು ಕಂಡಿತು, ಸುಮಾರು 1.06 ಕೋಟಿ ವಲಸೆ ಕಾರ್ಮಿಕರು ಸಾವಿರಾರು ಕಿ.ಮೀ. ಗಳಷ್ಟು ನಡೆದು ತಮ್ಮ ಹಳ್ಳಿಗಳಿಗೆ ಮರಳಬೇಕಾಗಿ ಬಂತು ಎಂದಿರುವ ಈ ವರದಿ ಕೊವಿಡ್ ಹೇಗೆ ಲಿಂಗ ಅಸಮಾನತೆ, ಶೈಕ್ಷಣಿಕ ಅಸಮಾನತೆ ಮತ್ತು ಆರೋಗ್ಯ ಅಸಮಾನತೆಗಳನ್ನೂ ಹೆಚ್ಚಿಸಿದೆ ಎಂಬ ವಿವರಗಳನ್ನು ಕೊಟ್ಟಿದೆ.

ಲಿಂಗ ಅಸಮಾನತೆ

ಮಹಿಳೆಯರ ಪ್ರಮಾಣ ಹೆಚ್ಚಿರುವ ವಲಯಗಳೇ ಲಾಕ್‌ಡೌನಿನಿಂದ ಅತಿ ಹೆಚ್ಚು ಬಾಧಿತವಾದವುಗಳು, ಇದರಿಂದಾಗಿ ಎಪ್ರಿಲ್ 2020ರಲ್ಲಿ 1.7 ಕೋಟಿ ಮಹಿಳೆಯರು ಉದ್ಯೋಗ ಕಳಕೊಂಡರು. ಲಾಕ್‌ಡೌನಿನ ಹಿಂದಿನ ಅವಧಿಗೆ ಹೋಲಿಸಿದರೆ ಮಹಿಳಾ ನಿರುದ್ಯೋಗದಲ್ಲಿ 15ಶೇ. ಹೆಚ್ಚಳವಾಯಿತು. ಇದರಿಂದಾಗಿ ಜಿಡಿಪಿಯಲ್ಲಿ 8%ದಷ್ಟು ನಷ್ಟವಾಯಿತು ಎಂದು ಈ ವರದಿ ಹೇಳುತ್ತದೆ.

ಈ ಅವಧಿಯಲ್ಲಿ ಸಂಬಳ ಪಡೆಯುವ ಮತ್ತು ಸಂಬಳವಿಲ್ಲದ ಮಹಿಳೆಯರ ಕೆಲಸಗಳೆರಡೂ ಹೆಚ್ಚಾದವು. ಅಂದರೆ **ಮನೆಯಿಂದ ಕೆಲಸ ಮಾಡುವ ಪದ್ಧತಿಯಲ್ಲಿ ಕಚೇರಿ ಕೆಲಸವೂ ಹೆಚ್ಚಿತು, ಮನೆಗೆಲಸವೂ ಹೆಚ್ಚಿತು, ಕೆಲಸದ ಸಮಯ ಮತ್ತು ವೈಯಕ್ತಿಕ ಸಮಯದ ನಡುವಿನ ಗೆರೆಗಳು ಮಸುಕುಗೊಂಡವು** ಎಂದು ಈ ವರದಿ ಹೇಳಿದೆ.

ಇನ್ನಷ್ಟು ಆತಂಕ ಉಂಟುಮಾಡುವ ಸಂಗತಿಯೆಂದರೆ, ಮಾರ್ಚ್ 25 ರಿಂದ ಮೇ 31, 2020ರ ಎರಡು ತಿಂಗಳ ಅವಧಿಯಲ್ಲೆ ರಾಷ್ಟ್ರೀಯ ಮಹಿಳಾ ಆಯೋಗ 1477 ಮನೆಯೊಳಗಿನ ಹಿಂಸಾಚಾರದ ದೂರುಗಳನ್ನು ಸ್ವೀಕರಿಸಿತು ಎಂಬುದು.

ಶೈಕ್ಷಣಿಕ ಅಸಮಾನತೆಗಳು

ಅಕ್ಟೋಬರ್ 2020ರ ಅಂತ್ಯದ ವರೆಗೆ ಶಾಲಾ-ಕಾಲೇಜುಗಳು ಮುಚ್ಚಿದ್ದರಿಂದ 32 ಕೋಟಿ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಇದರಲ್ಲಿ 84% ಗ್ರಾಮೀಣ ಪ್ರದೇಶಗಳ ವಿದ್ಯಾರ್ಥಿಗಳು ಮತ್ತು 70% ಸರಕಾರೀ ಶಾಲೆಗಳಲ್ಲಿ ಓದುತ್ತಿರುವವರು.

ಅಲ್ಲದೆ 60 ಲಕ್ಷಕ್ಕಿಂತ ಹೆಚ್ಚು ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳ ವಿದ್ಯಾರ್ಥಿಗಳಿಗೆ ಅವರ ವಿದ್ಯಾರ್ಥಿವೇತನಗಳು ಸಿಗಲಿಲ್ಲ.

12.6 ಲಕ್ಷ ಶಾಲೆಗಳ 12 ಕೋಟಿ ಮಕ್ಕಳು ಮಧ್ಯಾಹ್ನದ ಊಟದಿಂದ ವಂಚಿತರಾದರು. ಇವರಿಗೆ ಇದೇ ಪೌಷ್ಟಿಕ ಆಹಾರದ ಮೂಲವಾಗಿದೆ. ಸುಪ್ರಿಂ ಕೋರ್ಟ್ ಆದೇಶದ ನಂತರವೂ 35ಶೇ. ಮಕ್ಕಳಿಗೆ ಅವು ಸಿಗುತ್ತಿಲ್ಲ ಎಂದು ಕಂಡು ಬಂದಿದೆ ಎಂದು ಈ ವರದಿ ಹೇಳಿದೆ.

ಈ ಅವಧಿಯಲ್ಲಿ ಆನ್‌ಲೈನ್ ಶಿಕ್ಷಣದತ್ತ ಒತ್ತಿನಿಂದಾಗಿಯೂ ತೊಂದರೆಯಾಗಿರುವುದು ಬಡ ವಿಭಾಗಗಳಿಗೇ. ಭಾರತದ 20% ಅತಿ ಬಡ ಕುಟುಂಬಗಳಲ್ಲಿ 3% ಮಾತ್ರವೇ ಕಂಪ್ಯೂಟರ್ ಲಭ್ಯತೆ ಹೊಂದಿದ್ದಾರೆ, 9%ಕ್ಕೆ ಮಾತ್ರವೇ ಇಂಟರ್ನೆಟ್ ಲಭ್ಯತೆ ಇರುವುದು.

ಆರೋಗ್ಯ ಅಸಮಾನತೆಗಳು

ಸರಕಾರ ಹೇಳಿದಂತೆ, ಕೊವಿಡ್‌ನಿಂದ ರಕ್ಷಣೆಗೆ ಪ್ರತ್ಯೇಕವಾಗಿರುವುದು, 'ಸಾಮಾಜಿಕ ದೂರ' ಎಂಬುದು ಬಡವಿಭಾಗಗಳಿಗೆ ಸಾಧ್ಯವಾಗದ ಸಂಗತಿ. ಏಕೆಂದರೆ ಮೇಲಿನ 20% ಕುಟುಂಬಗಳಲ್ಲಿ 93.4% ಸ್ವಂತ ನೈರ್ಮಲ್ಯ ವ್ಯವಸ್ಥೆಗಳನ್ನು ಹೊಂದಿದ್ದರೆ, 20% ಅತಿ ಬಡಕುಟುಂಬಗಳಲ್ಲಿ ಕೇವಲ 6%ಕ್ಕೆ ಮಾತ್ರವೇ ಇದು ಲಭ್ಯವಾಗಿದೆ. ದೇಶದ 59.6% ಮಂದಿಗೆ ಲಭ್ಯವಿರುವುದು ಒಂದು ಕೋಣೆಯ, ಅಥವ ಅದಕ್ಕಿಂತಲೂ ಕಡಿಮೆಯ ವಸತಿ.

ಸಾರ್ವಜನಿಕ ಆರೋಗ್ಯಪಾಲನೆಯ ಸಂಸ್ಥೆಗಳೆಲ್ಲ ಕೊವಿಡ್ ತಪಾಸಣೆ ಮತ್ತು ಚಿಕಿತ್ಸೆಗೆ ಮೀಸಲಾಗಿ ಬಿಟ್ಟದ್ದರಿಂದ ಗರ್ಭಿಣಿ ಮಹಿಳೆಯರಿಗೆ ಚಿಕಿತ್ಸೆ ಸೇರಿದಂತೆ ಉಳಿದ ಕಾಯಿಲೆಗಳಿಗೆ ಚಿಕಿತ್ಸೆ ಸಿಗದೆ ಬಡಕುಟುಂಬಗಳು ಸಂಕಷ್ಟಕ್ಕೀಡಾಗಿವೆ.

ಆರೋಗ್ಯಪಾಲನೆಯಲ್ಲಿ ಸರಕಾರದ ಖರ್ಚು ಅತಿ ಕಡಿಮೆ ಪ್ರಮಾಣದಲ್ಲಿ ಇರುವ ದೇಶಗಳ ಸಾಲಿನಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಪ್ರತಿ ಭಾರತೀಯ ತನ್ನ ಆರೋಗ್ಯ ವೆಚ್ಚದ 70%ವನ್ನು ತನ್ನ ಆದಾಯದಿಂದಲೇ ಭರಿಸಬೇಕಾಗಿದೆ. ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಂದಿಗೆ ಕನಿಷ್ಟ ಆರೋಗ್ಯ ಸೌಲಭ್ಯಗಳೂ ಇಲ್ಲ. ಈ ಅಸಮಾನತೆ ಕೊವಿಡ್ ಕಾಲದಲ್ಲಿ ಇನ್ನಷ್ಟು ಉಲ್ಬಣಗೊಂಡಿದೆ ಎಂದು ಈ ಆಕ್ಸ್ ಫಾಂ ವರದಿ ಹೇಳುತ್ತದೆ.

ಭಾರತದ ಬಡಜನರು ಕೊವಿಡ್ ಹೊಡೆತಗಳಿಂದ ನರಳುತ್ತಿದ್ದಾಗ ಸರಕಾರ ಪ್ರಕಟಿಸಿದ ಮೊದಲ ಪರಿಹಾರ ಪ್ಯಾಕೇಜಿನಲ್ಲಿ ಕುಟುಂಬಗಳ ಸಾಮಾಜಿಕ ರಕ್ಷಣೆಗೆ ಕೊಟ್ಟದ್ದು 0.8% ಮಾತ್ರ.

ಕೊವಿಡ್-19 ತಂದ ಬಿಕ್ಕಟ್ಟಿನಿಂದ ಈ ದಿಸೆಯಲ್ಲಿ ಪಾಠ ಕಲಿಯಬೇಕಾಗಿದೆ, ಆರೋಗ್ಯ ವ್ಯವಸ್ಥೆಯನ್ನು ಉತ್ತಮಪಡಿಸಲು ಆರೋಗ್ಯಕ್ಕೆ ಬಜೆಟನಲ್ಲಿ ಕೊಡುವ ಹಣದ ಪ್ರಮಾಣವನ್ನು ಜಿಡಿಪಿಯ 2.5%ಕ್ಕೆ ತಕ್ಷಣವೇ ಏರಿಸಬೇಕು ಎಂದು ಆಕ್ಸ್ ಫಾಂ ಇಂಡಿಯಾದ ಮುಖ್ಯಸ್ಥರಾದ ಅಮಿತಾಬ್ ಬೆಹರ್ ಹೇಳುತ್ತಾರೆ.

ಶ್ರೀಮಂತರು ಮತ್ತು ಕಾರ್ಪೊರೇಟ್‌ಗಳ ಮೇಲೆ ತೆರಿಗೆಯ ಪ್ರಮಾಣವನ್ನೂ ಹೆಚ್ಚಿಸಬೇಕಾಗಿದೆ. ಈ ಕೊವಿಡ್ ಬಿಕ್ಕಟ್ಟಿನಿಂದ ಚೇತರಿಸಿಕೊಳ್ಳುವ ಯಾವುದೇ ಪ್ರಯತ್ನದಲ್ಲಿ ಸಮಾಜದ ಶ್ರೀಮಂತ ವಿಭಾಗಗಳಿಂದ ಕರ-ತೆರಿಗೆಗಳ ಮೂಲಕ ಸಂಪನ್ಮೂಲ ಸಂಗ್ರಹವನ್ನು ಹೆಚ್ಚಿಸುವುದು ಒಂದು ಪ್ರಧಾನ ಅಂಶವಾಗಬೇಕಾಗಿದೆ ಎಂದೂ ಅವರು ಹೇಳುತ್ತಾರೆ.

ಸರಕಾರಗಳು ಜನಗಳ ಅಗತ್ಯಗಳನ್ನು ಪೂರೈಸಲು ಬದ್ಧವಾಗಿದ್ದರೆ ಅದಕ್ಕಾಗಿ ನವೀನ ಮತ್ತು ಸೃಜನಾತ್ಮಕ ದಾರಿಗಳನ್ನು ಕಂಡುಕೊಳ್ಳಲು ಸಾಧ್ಯವಿದೆ ಎಂದೂ ಅವರು ಹೇಳುತ್ತಾರೆ.

ಆದಾಯ ತೆರಿಗೆಯ ಮಿತಿಯಿಂದ ಕೆಳಗಿರುವ ಕುಟುಂಬಗಳಿಗೆ ಬದುಕುಳಿಯಲು ಈ ಕೊವಿಡ್ ದುರಿತ ಕಾಲದಲ್ಲಿ ಮಾಸಿಕ 7500ರೂ. ನಗದು ವರ್ಗಾವಣೆ ಮತ್ತು 10 ಕೆ.ಜಿ. ಆಹಾರಧಾನ್ಯಗಳ ಉಚಿತ ವಿತರಣೆ ಮಾಡಬೇಕೆಂಬ ಬೇಡಿಕೆಯನ್ನು ಸತತವಾಗಿ ಉಪೇಕ್ಷಿಸುತ್ತ ಬಂದಿರುವ ಮತ್ತು ಕೊವಿಡ್ ಬಿಕ್ಕಟ್ಟನ್ನೇ ಮೂರು ರೈತ-ವಿರೋಧಿ ಕೃಷಿ ಕಾಯ್ದೆಗಳು ಮತ್ತು ಕಾರ್ಮಿಕ-ವಿರೋಧಿ ಸಂಹಿತೆಗಳು ಮುಂತಾದ ತನ್ನ ಕಾರ್ಪೊರೇಟ್-ಪರ ಕ್ರಮಗಳನ್ನು ಮುಂದೊತ್ತುವುದಕ್ಕಾಗಿ ಬಳಸಿಕೊಂಡಿರುವ ಸರಕಾರದದಿಂದ ಇದನ್ನು ನಿರೀಕ್ಷಿಸಲು ಸಾಧ್ಯವೇ?

ಮಾಧ್ಯಮಗಳಲ್ಲಿ ಗಣತಂತ್ರ ದಿನ ಕೆಂಪು ಕೋಟೆಯ ಮೇಲೆ ಖಾಲ್ಸಾ ಬಾವುಟದ ಚರ್ಚೆ ಜೋರಾಗಿ ನಡೆಯುತ್ತಿದ್ದಂತೆ ಸದ್ದಿಲ್ಲದೆ ಮತ್ತೆ ಇಂಧನ ಬೆಲೆಗಳ ಏರಿಕೆ. ಪೆಟ್ರೋಲ್ ಬೆಲೆ ಶತಕ ಬಾರಿಸುವತ್ತ!



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಗಣತಂತ್ರ ದಿನ ಪರೇಡ್ 2021



ವ್ಯಂಗ್ಯಚಿತ್ರ: ಮಿಕ ಅಜೀಜ್/ಫೇಸ್‌ಬುಕ್

ಇನ್ನೊಂದು ಗಣತಂತ್ರ ದಿನ ಪರೇಡ್ 2021



20,000 ಕೋಟಿ ರೂ.ಗಳ ಸೆಂಟ್ರಲ್ ವಿಸ್ತಾ ಪರಿಯೋಜನೆ

ವ್ಯಂಗ್ಯಚಿತ್ರ: ಸಜಿತ್‌ಕುಮಾರ್. ಡೆಕ್ಕನ್ ಹೆರಾಲ್ಡ್

ರೈತರ ಹೋರಾಟದ ಬಗ್ಗೆ ಅಪಪ್ರಚಾರ
ಅಡ್ಡದಾರಿಗೆಳೆಯುವ ಅಪಾಯಕಾರಿ ಪ್ರಯತ್ನ


ಪ್ರಜಾಪ್ರಭುತ್ವ ವಿರೋಧಿಯಾಗಿರುವಷ್ಟೇ ಸಂವಿಧಾನ–ವಿರೋಧಿಯೂ ಆಗಿರುವ ರೀತಿಯಲ್ಲಿ ಮೋದಿ ಸರ್ಕಾರವು ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿದೆ. ಕಂತೆ ಕಂತೆ ಸುಳ್ಳುಗಳ ಮೇಲೆ ಕೇಂದ್ರೀಕರಣಗಳನ್ನು ಕೈಗೊಳ್ಳುತ್ತಿದೆ. ಸಮವರ್ತಿ ಪಟ್ಟಿಯ ವಿಷಯಗಳಲ್ಲದೆ ಈಗ ರಾಜ್ಯಪಟ್ಟಿಗೇ ಕೈಹಾಕುತ್ತಿದೆ. ಕಾರ್ಯಾಂಗವನ್ನು ಪ್ರಶ್ನಿಸಲಾಗದಷ್ಟು ಪುಕ್ಕಲುತನವನ್ನು ನ್ಯಾಯಾಂಗವು ತೋರುತ್ತಿರುವುದರಿಂದ ಸರ್ಕಾರವು ತನಗೆ ಬೇಕೆಂದಾಗ ಸಂವಿಧಾನವನ್ನು ಉಲ್ಲಂಘಿಸಿ ಮುಂದುವರೆಯುವ ಧೈರ್ಯ ಮಾಡುತ್ತಿದೆ. ಹಾಗಾಗಿ, ದೇಶವು ಈಗ ತನ್ನ ಸಂವಿಧಾನವು ಸಂಪೂರ್ಣವಾಗಿ ಬುಡಮೇಲಾಗುವ ಅಪಾಯಕಾರಿ ಹಂತದಲ್ಲಿದೆ. ಈ ಸನ್ನಿವೇಶದಲ್ಲಿ ರೈತರು ಒಡ್ಡುತ್ತಿರುವ ಸವಾಲು ನಮ್ಮ ಭವಿಷ್ಯದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದು.

ಪ್ರೊ. ಪ್ರಭಾತ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ರೈತ ಕೃಷಿಯನ್ನು ಕಾರ್ಪೊರೇಟ್‌ಗಳ ಕಬಳಿಕೆಗೆ ತೆರೆದಿಟ್ಟಿರುವ ಮೂರು ಕುಖ್ಯಾತ ಕೃಷಿ ಕಾಯ್ದೆಗಳ ವಿರುದ್ಧ ನಡೆಯುತ್ತಿರುವ ರೈತ ಹೋರಾಟವನ್ನು ವ್ಯವಸ್ಥಿತವಾಗಿ ದಾರಿ ತಪ್ಪಿಸುವ ಪ್ರಯತ್ನದ ಭಾಗವಾಗಿ, ಕೇವಲ ಒಂದೆರಡು ರಾಜ್ಯಗಳ ರೈತರಷ್ಟೇ ಈ ಮಸೂದೆಗಳನ್ನು ವಿರೋಧಿಸುತ್ತಿದ್ದಾರೆ, ಉಳಿದ ರಾಜ್ಯಗಳ ರೈತರು ಈ ಮಸೂದೆಗಳಿಂದ ಸಂತೋಷಗೊಂಡಿದ್ದಾರೆ ಎಂಬುದಾಗಿ ಕೇಂದ್ರ ಸರ್ಕಾರವು ಹೇಳುತ್ತಿದೆ. ಈ ಹೇಳಿಕೆಯು ಎಷ್ಟು ಸುಳ್ಳಿನಿಂದ ಕೂಡಿದೆ ಎಂಬುದಕ್ಕೆ ದೂರದ ಕೇರಳ ರಾಜ್ಯವು ತನ್ನ ವಿಧಾನ ಸಭೆಯ ಒಂದು ವಿಶೇಷ ಅಧಿವೇಶನದಲ್ಲಿ ಈ ಮಸೂದೆಗಳನ್ನು ವಿರೋಧಿಸುವ ಸರ್ವಾನುಮತದ ನಿರ್ಣಯ ಕೈಗೊಂಡಿರುವುದೇ ಸಾಕ್ಷಿ. ಜೊತೆಗೆ, ತಮಿಳು ನಾಡು, ಒಡಿಶಾ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಮಧ್ಯಪ್ರದೇಶ, ಮತ್ತು ಉತ್ತರ ಪ್ರದೇಶ ರಾಜ್ಯಗಳ ರೈತರೂ ಸಹ ದೆಹಲಿಯ ಗಡಿ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕ್ಯಾಂಪ್ ಮಾಡಿ ಹೋರಾಡುತ್ತಿರುವ ಪಂಜಾಬ್ ಮತ್ತು ಹರ್ಯಾಣದ ರೈತರ ಹೆಗಲಿಗೆ ಹೆಗಲು ಕೊಟ್ಟು ಹೋರಾಡುತ್ತಿದ್ದಾರೆ. ಹಾಗಾಗಿ. ಈ ಕೃಷಿ ಕಾಯ್ದೆಗಳ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯು ಕೇವಲ ಒಂದೆರಡು ರಾಜ್ಯಗಳಿಗೆ ಮಾತ್ರ ಸೀಮಿತವಾಗಿದೆ ಎಂಬ ಹೇಳಿಕೆಯು ರೈತ ಚಳುವಳಿಯ ದಿಕ್ಕು ತಪ್ಪಿಸುವ ವ್ಯರ್ಥ ಪ್ರಯತ್ನವೇ ಸರಿ.

ಆದರೆ, ಈ ಪ್ರಕ್ರಿಯೆಯಲ್ಲಿ, ಕೆಲವು ರಾಜ್ಯಗಳ ರೈತರ ಹಿತಾಸಕ್ತಿಗೆ ವಿರುದ್ಧವಾಗಿ, ಈ ರಾಜ್ಯಗಳ ಸಂಖ್ಯೆಯು ಕಡಿಮೆ ಇರುವುದರಿಂದ, ತಾನೇ ಕಾನೂನುಗಳನ್ನು ರೂಪಿಸಿ ಅವುಗಳನ್ನು ಜಾರಿಗೆ ತರುವ ಕ್ರಮವು ನ್ಯಾಯಸಮ್ಮತವಾಗುತ್ತದೆ ಎಂಬ ಸೂಚ್ಯ ಪ್ರತಿಪಾದನೆಯನ್ನು ಕೇಂದ್ರ ಸರ್ಕಾರವು ಸಾರ್ವಜನಿಕರ ಅಂಗೀಕಾರಕ್ಕಾಗಿ ಸದ್ದಿಲ್ಲದೆ ಮಂಡಿಸಿದೆ. ಇದೊಂದು ಅಪಾಯಕಾರಿ ಪ್ರತಿಪಾದನೆ. ಕೇವಲ ಕೆಲವು ರಾಜ್ಯಗಳ ರೈತರು ಮಾತ್ರ ಈ ಕಾಯ್ದೆಯನ್ನು ವಿರೋಧಿಸುತ್ತಿರುವುದರಿಂದ ಈ ಚಳವಳಿಯು ನ್ಯಾಯಬದ್ಧವಲ್ಲ ಎಂದು ಪ್ರತಿಪಾದಿಸುವುದು ತಪ್ಪು ಮಾತ್ರವಲ್ಲ, ಅತ್ಯಂತ ಅಪಾಯಕಾರಿಯೂ ಆಗುತ್ತದೆ.

ಒಂದೆರಡು ರಾಜ್ಯಗಳ ರೈತರ ಪ್ರತಿಭಟನೆಯನ್ನು ಅಥವಾ ಅವರು ದೀರ್ಘ ಚಳುವಳಿಗಳಲ್ಲಿ ತೊಡಗುವುದನ್ನು ನ್ಯಾಯಬದ್ಧವಲ್ಲ ಎಂದು ಪ್ರತಿಪಾದಿಸುವುದು ಅತ್ಯಂತ ಅಪಾಯಕಾರಿ, ಏಕೆಂದರೆ,



ಜನವರಿ 26– ದೇಶವ್ಯಾಪಿ
ಕಿಸಾನ್ ಗಣತಂತ್ರ ಪರೇಡ್

ಯಾವುದೇ ಒಂದು ರಾಜ್ಯದ ರೈತರ ಮೇಲೆ ತನ್ನ ಇಚ್ಛೆಯನ್ನು ಹೇರುವ ಅವಕಾಶವನ್ನು ಭಾರತದ ಸಂವಿಧಾನವು ಕೇಂದ್ರ ಸರ್ಕಾರಕ್ಕೆ ಕೊಟ್ಟಿಲ್ಲ. ಕೃಷಿ ವಿಷಯವು ರಾಜ್ಯಗಳ ಅಧಿಕಾರದ ವ್ಯಾಪ್ತಿಯಲ್ಲಿ ಬರುತ್ತದೆ ಎಂಬುದನ್ನು ಸಂವಿಧಾನದಲ್ಲಿ ಸ್ಪಷ್ಟಪಡಿಸಲಾಗಿದೆ. ವಾಸ್ತವವಾಗಿ, ಪರಿಸ್ಥಿತಿಗಳು ಪ್ರತಿ ರಾಜ್ಯದಲ್ಲೂ ಭಿನ್ನ ಭಿನ್ನವಾಗಿರುತ್ತವೆ. ಆದ್ದರಿಂದ, ಆಯಾ ರಾಜ್ಯದ ಜನರಿಗೆ ನೇರ ಉತ್ತರದಾಯಿತ್ವ ಮತ್ತು ರಾಜ್ಯದ ಸ್ಪಷ್ಟ ಪರಿಸ್ಥಿತಿಗಳ ಬಗ್ಗೆ ಅರಿವಿರುವ, ಆ ರಾಜ್ಯದ ರೈತರ ಬದುಕಿನ ಮೇಲೆ ಪರಿಣಾಮ ಬೀರುವ ವಿಷಯಗಳ ಮೇಲೆ ಶಾಸನ ಮಾಡುವ ಅಧಿಕಾರವನ್ನು ರಾಜ್ಯ ಶಾಸಕಾಂಗವು ಹೊಂದಿರುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ, ಕೃಷಿಯು, ಸಂವಿಧಾನದ ಏಳನೇ ಶೆಡ್ಯೂಲ್ ಅಡಿಯಲ್ಲಿ ರಾಜ್ಯಗಳಿಗೆ ಸಂಬಂಧಪಟ್ಟ ವಿಷಯವೆಂದು ಸ್ಪಷ್ಟವಾಗಿ ಉಲ್ಲೇಖಿತವಾಗಿರುವುದರಿಂದ, ಪ್ರತಿಯೊಂದು ರಾಜ್ಯದ ರೈತರೂ ತಮಗೆ ಇಷ್ಟಬಂದಂತಹ ರೀತಿಯ ಕೃಷಿ ವ್ಯವಸ್ಥೆಯನ್ನು ಶಾಸನಬದ್ಧಪಡಿಸಿಕೊಳ್ಳುವ ಸಾಂವಿಧಾನಿಕ ಹಕ್ಕನ್ನು ಹೊಂದಿರುತ್ತಾರೆ.

ಕೃಷಿ ವಿಷಯಗಳ ಬಗ್ಗೆ ಕಾನೂನು ರೂಪಿಸುವ ಹಕ್ಕು ಕೇಂದ್ರ ಸರ್ಕಾರಕ್ಕಿಲ್ಲ. ಒಂದು ವೇಳೆ ಕೇಂದ್ರ ಸರ್ಕಾರವು, ತನ್ನ ವಿವೇಚನೆಯ ಪ್ರಕಾರ, ಕಾರ್ಪೊರೇಟ್‌ಗಳಿಗೆ ಕೃಷಿ ವಲಯವನ್ನು ತೆರೆದಿಡುವ ಅವಕಾಶ ಕಲ್ಪಿಸಿಕೊಡಬೇಕು ಎಂದು ಬಯಸಿದಲ್ಲಿ, ಮೊದಲು ಅದು ಅಂಗೀಕರಿಸಿರುವ ಮೂರು ಕಾಯ್ದೆಗಳನ್ನು ರದ್ದುಪಡಿಸಬೇಕು. ನಂತರ, ಅದು ತನ್ನ ಅಭಿಪ್ರಾಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವಂತೆ ಮಾಡುವ ಶಾಸನವನ್ನು ರೂಪಿಸುವಂತೆ ರಾಜ್ಯಗಳಿಗೆ ಸಲಹೆ ನೀಡಬಹುದು. ಕೇಂದ್ರದ ಈ ಅಭಿಪ್ರಾಯದ ಬಗ್ಗೆ ಒಲವು ಹೊಂದಿರುವ ರಾಜ್ಯಗಳು ಇಂತಹ ಕಾಯ್ದೆಯನ್ನು ಜಾರಿಗೆ ತರಬಹುದು. ಈ ಅಭಿಪ್ರಾಯಕ್ಕೆ ವಿರೋಧವಾಗಿರುವ ರಾಜ್ಯಗಳು ಅದನ್ನು ಬಿಟ್ಟು ಬಿಡಬಹುದು. ಈ ರೀತಿಯಲ್ಲಿ ಅನೇಕ ವ್ಯವಸ್ಥೆಗಳು ಇರಬಹುದು. ಅಂದರೆ, ಸಂವಿಧಾನದ ಪ್ರಕಾರ ರಾಜ್ಯಗಳ ವ್ಯಾಪ್ತಿಗೆ ಸೇರಿದ ವಿಷಯದಲ್ಲಿ ಕೇಂದ್ರವು ಮೂಗು ತೂರಿಸುವಂತಿಲ್ಲ ಮತ್ತು ತನಗೆ 'ಸರಿ' ಎನಿಸಿದ ವ್ಯವಸ್ಥೆಯನ್ನು ಇದೇ ಸರಿಯಾದದ್ದು ಎಂದು ರಾಜ್ಯಗಳ ರೈತರ ಗಂಟಲಲ್ಲಿ ತುರುಕುವಂತಿಲ್ಲ. ಹಾಗೆ ನೋಡಿದರೆ, ಬಿಹಾರ ರಾಜ್ಯವು ಈಗಾಗಲೇ ಇತರ ರಾಜ್ಯಗಳಿಗಿಂತ ಭಿನ್ನವಾದ ಒಂದು ವ್ಯವಸ್ಥೆಯನ್ನು ಹೊಂದಿದೆ. ಆದ್ದರಿಂದ, ಅಸ್ತಿತ್ವದಲ್ಲಿರುವ ಕೃಷಿ ವ್ಯವಸ್ಥೆಯು ಅತೃಪ್ತಿಕರವೆಂದು ಕಂಡು ಬಂದರೆ, ಪ್ರತಿಯೊಂದು ರಾಜ್ಯವೂ ತನಗೆ ಸರಿಹೊಂದುವಂತಹ ವ್ಯವಸ್ಥೆಗನುಗುಣವಾಗಿ ಕಾನೂನು ರೂಪಿಸುವ ಸ್ವಾತಂತ್ರ್ಯವನ್ನು ಹೊಂದಿದ್ದರೆ, ಅದು ನೈತಿಕವಾಗಿಯೂ ಮತ್ತು ಸಾಂವಿಧಾನಿಕವಾಗಿಯೂ ಸರಿಯಾದ ಕ್ರಮವಾಗುತ್ತದೆ.

ಆದರೆ, ಕೇಂದ್ರ ಸರ್ಕಾರಕ್ಕೆ ಈ ವಿಧಾನವನ್ನು ಅನುಸರಿಸುವ ಧೈರ್ಯವಿಲ್ಲ. ಕಾರ್ಪೊರೇಟ್‌ಗಳು ರೈತ ಕೃಷಿಯನ್ನು ನುಂಗುವ ಅವಕಾಶ ಕಲ್ಪಿಸುವ ಕಾಯ್ದೆಯನ್ನು ಕೇಂದ್ರವೇ ಏಕೆ ಜಾರಿಗೆ ತಂದಿತು ಎಂದರೆ, ಸಂವಿಧಾನಾತ್ಮಕವಾಗಿ ಈ ವಿಷಯವನ್ನು ರಾಜ್ಯಗಳ ವಿವೇಚನೆಗೆ ಬಿಟ್ಟರೆ, ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿಯೂ ಸಹ ಇಂತಹ ರೈತ ವಿರೋಧಿ ಕಾನೂನುಗಳನ್ನು ಜಾರಿಗೆ ತರಲು ಸಾಧ್ಯವಿಲ್ಲ ಎಂಬ ಭಯ ಮೋದಿ ಸರ್ಕಾರವನ್ನು ಕಾಡುತ್ತಿತ್ತು. ಆದ್ದರಿಂದ, ಕೇಂದ್ರ ಸರ್ಕಾರವೇ ಈ ಕಾಯ್ದೆಗಳನ್ನು ಜಾರಿಗೊಳಿಸಿತು. ಎರಡು ಕಾರಣಗಳಿಗಾಗಿ ಈ ಕಾಯ್ದೆಗಳು ಉಂಟುಮಾಡುವ ಪ್ರತಿಕೂಲ ಪರಿಣಾಮಗಳನ್ನು ನಿಭಾಯಿಸಲು ತಾನು ಉತ್ತಮ ಸ್ಥಿತಿಯಲ್ಲಿರುವುದಾಗಿ ಅದು ನಂಬುತ್ತದೆ: ಮೊದಲನೆಯದಾಗಿ, ಬಹುತೇಕ ರಾಜ್ಯಗಳ ಒಂದೊಂದು ಬಿಡಿ ರಾಜ್ಯದ ರೈತರ ಸಂಖ್ಯೆಯು ದೇಶದ ಜನಸಂಖ್ಯೆಯ ಬಹುಪಾಲಿಗಿಂತ ಬಹಳ ಕಡಿಮೆ ಪ್ರಮಾಣದಲ್ಲಿದೆ. ಎರಡನೆಯದಾಗಿ, ಅದರ ಕೋಮು ಪ್ರವೃತ್ತಿ–ಸ್ವರೂಪವನ್ನು ಗಮನಿಸಿದರೆ, ಅದು ಸರಿಯಾದ ಸಮಯದಲ್ಲಿ ಒಂದು ಸರಿಯಾದ ಘಟನೆಯನ್ನು ಹುಟ್ಟಿಹಾಕಬಹುದು ಮತ್ತು ತನ್ನ ರೈತ ವಿರೋಧಿ ನಿಲುವನ್ನು ಹಿನ್ನೆಲೆಗೆ ಸರಿಸಿ ಕೋಮು ಧ್ರುವೀಕರಣದ ಮೂಲಕ ಚುನಾವಣೆಗಳನ್ನು ಗೆಲ್ಲಬಹುದು ಎಂದು ನಂಬುತ್ತದೆ. ಈ ಕಾಯ್ದೆಗಳನ್ನು ರೂಪಿಸಿ ಜಾರಿಗೊಳಿಸುವ ಪ್ರತಿಯೊಂದು ರಾಜ್ಯವೂ "ಸರಿಯಾದ ಸಮಯದಲ್ಲಿ" ಸರಿಯಾದ ಘಟನೆಯನ್ನು ಹುಟ್ಟಿಹಾಕುವುದು ಹೆಚ್ಚು ಕಠಿಣವೂ ಮತ್ತು ಉಂಟಾಗುವ ಪರಿಣಾಮಗಳು ಅನಿಶ್ಚಿತವೂ ಆಗಿರುತ್ತವೆ. ಅಲ್ಲದೆ, ವಿದೇಶಾಂಗ ವ್ಯವಹಾರ ಮತ್ತು ರಕ್ಷಣಾ ಇಲಾಖೆಗಳು ತನ್ನ ವ್ಯಾಪ್ತಿಯಲ್ಲೇ ಇರುವುದರಿಂದ ಇಂತಹ 'ಸರಿಯಾದ' ಘಟನೆಗಳನ್ನು ಸೃಷ್ಟಿಸುವ ಅಥವಾ ಅವುಗಳನ್ನು ಬಳಸಿಕೊಳ್ಳುವ ಅವಕಾಶಗಳು ಕೇಂದ್ರ ಸರ್ಕಾರಕ್ಕೆ ವಿಪುಲವಾಗಿವೆ.

ತನ್ನ ಕಾರ್ಪೊರೇಟ್–ಪರ ಮತ್ತು ಸಾಮ್ರಾಜ್ಯಶಾಹಿ–ಪರ ಕಾರ್ಯಸೂಚಿಯನ್ನು (ಭಾರತವು ಆಹಾರ ಧಾನ್ಯಗಳನ್ನು ಬೆಳೆಯುವುದರ ಬದಲಾಗಿ ಹಣ್ಣು ಹಂಪಲುಗಳನ್ನು ಬೆಳೆದು ಅವುಗಳನ್ನು ಸಾಮ್ರಾಜ್ಯಶಾಹಿ ದೇಶಗಳಿಗೆ ರಫ್ತುಮಾಡಿ, ಅವರಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳಬೇಕೆಂಬುದು ಅಮೆರಿಕ ಮತ್ತು ಯುರೋಪಿನ ಒಕ್ಕೂಟಗಳ ಬಹು ದಿನಗಳ ಬೇಡಿಕೆ) ಜಾರಿಗೆ ತರುವ ಪ್ರಕ್ರಿಯೆಯಲ್ಲಿ, ಪ್ರಜಾಪ್ರಭುತ್ವ ವಿರೋಧಿಯಾಗಿರುವಷ್ಟೇ ಸಂವಿಧಾನ–ವಿರೋಧಿಯೂ ಆಗಿರುವ ರೀತಿಯಲ್ಲಿ ಮೋದಿ ಸರ್ಕಾರವು ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿದೆ. ರಾಜ್ಯಗಳು ಹುಸಿ ಭರವಸೆಗಳನ್ನು ನಂಬುವಂತೆ ಅವರ ತಲೆ ಸವರಿ, ಆರ್ಥಿಕ ಸಂಪನ್ಮೂಲಗಳನ್ನು ಕೇಂದ್ರೀಕೃತಗೊಳಿಸಿದ ಸರಕು ಮತ್ತು ಸೇವೆಗಳ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತಂದಿತು. ಶಿಕ್ಷಣವು ಸಂವಿಧಾನದ ಪ್ರಕಾರ ಸಮವರ್ತಿ ಪಟ್ಟಿಯಲ್ಲಿದ್ದರೂ ಸಹ, ರಾಜ್ಯಗಳೊಂದಿಗೆ ಯಾವುದೇ ಸಮಾಲೋಚನೆಯನ್ನೂ ಮಾಡದೆ, ಮೋದಿ ಸರ್ಕಾರವು ಏಕಪಕ್ಷೀಯವಾಗಿ ಹೊಸ ಶಿಕ್ಷಣ ನೀತಿಯನ್ನು ಜಾರಿಗೆ ತಂದಿತು. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ 370 ಮತ್ತು 35 ಎ ವಿಧಿಗಳನ್ನು ಆ ರಾಜ್ಯದ ಶಾಸಕಾಂಗದೊಂದಿಗೆ ಯಾವುದೇ ಸಮಾಲೋಚನೆಯನ್ನೂ ಮಾಡದೆ (ಈ ಅನುಚ್ಛೇದಗಳಿಗೆ ಸಂಬಂಧಿಸಿದ ಸಾಂವಿಧಾನಿಕ ಏರ್ಪಾಟನ್ನು ರದ್ದುಮಾಡಲು ರಾಜ್ಯ ಶಾಸಕಾಂಗದ ಅನುಮತಿಯಷ್ಟೇ ಸಾಕಾಗುವುದಿಲ್ಲ), ರದ್ದುಗೊಳಿಸಿತು. ಈಗ ಅದು, ಸಮವರ್ತಿ ಪಟ್ಟಿಯಲ್ಲಿಯೂ ಇಲ್ಲದ, ಆದರೆ, ರಾಜ್ಯಗಳಿಗೆ ಮಾತ್ರ ಅಧಿಕಾರವಿದೆ ಎಂಬ ವಿಷಯಗಳ ಪಟ್ಟಿಯಲ್ಲಿರುವ ಮತ್ತು ದೇಶದ ಕೃಷಿ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳನ್ನು ತರುವ ವಿಷಯಕ್ಕೆ ಕೈ ಹಾಕಿದೆ. ಸಂಪನ್ಮೂಲಗಳನ್ನು



ಮತ್ತು ಅಧಿಕಾರವನ್ನು ಈ ರೀತಿಯಲ್ಲಿ ಕೇಂದ್ರೀಕರಣಗೊಳಿಸುವ ಕ್ರಮಗಳಿಂದ ದೇಶದ ಪ್ರಜಾಪ್ರಭುತ್ವವು ಬರಡಾಗುತ್ತದೆ.

ಕಂತೆ ಕಂತೆ ಸುಳ್ಳುಗಳ ಮೇಲೆ ಕೇಂದ್ರೀಕರಣಗಳನ್ನು ಕೈಗೊಳ್ಳಲಾಗಿದೆ. ಜಿಎಸ್‌ಟಿ ವ್ಯವಸ್ಥೆಗೆ ಹೊರಳುವ ಸಂದರ್ಭದಲ್ಲಿ ರಾಜ್ಯಗಳಿಗೆ ಉಂಟಾಗುವ ನಷ್ಟವನ್ನು ತುಂಬಿಕೊಡುವುದಾಗಿ ಕೊಟ್ಟ ಭರವಸೆಯು ಸುಳ್ಳಾಗಿರುವುದನ್ನು ನಾವು ಈಗಾಗಲೇ ನೋಡಿದ್ದೇವೆ. ಮೂರು ಹೊಸ ಕೃಷಿ ಕಾಯ್ದೆಗಳ ಪೈಕಿ ಒಂದು ಮಸೂದೆಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ ಸರ್ಕಾರವು ಪ್ರಸ್ತಾಪಿಸಿದ ಒಂದು ವರದಿಯು ಅಸಲಿಗೆ ಅಸ್ತಿತ್ವದಲ್ಲೇ ಇರಲಿಲ್ಲ ಎಂಬ ಸತ್ಯ ಈಗ ಹೊರಬಂದಿದೆ. ಸರ್ಕಾರದ ಹೇಳಿಕೆಯ ಪ್ರಕಾರ, ನೀತಿ ಆಯೋಗದ ಸದಸ್ಯರು ಮತ್ತು ಹಲವು ಮುಖ್ಯಮಂತ್ರಿಗಳನ್ನೊಳಗೊಂಡ ಒಂದು ಸಮಿತಿಯು, ಖಾಸಗಿ ವ್ಯಾಪಾರಿಗಳು ಅಗತ್ಯ ವಸ್ತುಗಳ ದಾಸ್ತಾನನ್ನು ಇಟ್ಟುಕೊಳ್ಳಬಹುದಾದ ಮಿತಿಯ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕುವಂತೆ ಶಿಫಾರಸು ಮಾಡಿತ್ತು. ಆದರೆ, ಈ ಅಂಶವೇ ಸುಳ್ಳು ಮತ್ತು ಆ ವರದಿಯೇ ಒಂದು ಹಸಿ ಸುಳ್ಳು ಎಂಬುದು ಈಗ ಬಯಲಾಗಿದೆ. ಈ ಸಂಬಂಧವಾಗಿ, ಮಾಹಿತಿ ಹಕ್ಕು ಕಾಯ್ದೆಯಡಿಯಲ್ಲಿ ಕೇಳಲಾದ ಒಂದು ಪ್ರಶ್ನೆಗೆ, ನೀತಿ ಆಯೋಗವು, ಪ್ರಸ್ತಾಪಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಯಾವ ಸಭೆಯೂ ನಡೆದಿಲ್ಲ ಮತ್ತು ಇಂತಹ ಯಾವುದೇ ವರದಿಯನ್ನೂ ಅನುಮೋದಿಸಿಲ್ಲ ಎಂಬುದಾಗಿ ಉತ್ತರ ಕೊಟ್ಟಿದೆ. ವಾಸ್ತವವಾಗಿ, ಇಂತಹ ಒಂದು ವರದಿಯು ಇರಲೇ ಇಲ್ಲ. ಮೇಲಾಗಿ, ಖಾಸಗಿ ವ್ಯಾಪಾರಿಗಳು ಅಗತ್ಯ ವಸ್ತಗಳ ದಾಸ್ತಾನನ್ನು ಇಟ್ಟುಕೊಳ್ಳಬಹುದಾದ ಮಿತಿಯನ್ನು ನಿರ್ಧರಿಸುವ ವಿಶೇಷ ಹಕ್ಕು ರಾಜ್ಯ ಸರ್ಕಾರಗಳಿಗೆ ಮಾತ್ರ ಇದೆ. ರಾಜ್ಯಗಳು ಹೊಂದಿರುವ ಈ ವಿಶೇಷ ಹಕ್ಕುಗಳನ್ನು ಕಿತ್ತುಕೊಳ್ಳಲಾಗುತ್ತಿದೆ ಮಾತ್ರವಲ್ಲ, ಧಾನ್ಯಗಳ ಕೊರತೆ ಉಂಟಾದ ಸಂದರ್ಭದಲ್ಲಿ, ಪರಿಸ್ಥಿತಿಯ ದುರ್ಲಾಭ ಪಡೆಯಲು ಕಾಳಸಂತೆಕೋರ ವ್ಯಾಪಾರಿಗಳಿಗೆ ಹೇಳಿಕೊಟ್ಟಂತಾಗಿದೆ.

ಈ ರೀತಿ ಮೋಸದಿಂದಲೇ ನಡೆಯುತ್ತಿರುವ ಇಂತಹ ಕೇಂದ್ರೀಕರಣದ ಪ್ರಕ್ರಿಯೆಗೆ ಈಗ ಮತ್ತೊಂದು ಅಪಾಯಕಾರಿ ಆಯಾಮ ದೊರೆತಿದೆ. ಸಂವಿಧಾನವು ರಾಜ್ಯಗಳಿಗೆ ವಹಿಸಿರುವ ಪಾತ್ರವನ್ನು ಕೇಂದ್ರ ಸರ್ಕಾರವು ಕಿತ್ತುಕೊಳ್ಳುತ್ತಿದೆ ಮಾತ್ರವಲ್ಲ, ಇನ್ನೂ ಅಧಿಕವಾಗಿ, ರಾಜ್ಯಗಳು ಹೊಂದಿರುವ ಶಾಸನ ರಚಿಸುವ ಹಕ್ಕನ್ನು ಕಿತ್ತುಕೊಂಡು ರಾಜ್ಯಗಳ ಆಶೋತ್ತರಗಳಿಗೆ ವಿರುದ್ಧವಾದ ರೀತಿಯಲ್ಲಿ ಕೇಂದ್ರ ಸರ್ಕಾರವು ವರ್ತಿಸುತ್ತಿದೆ. ಕೆಲವೇ ಕೆಲವು ರಾಜ್ಯಗಳು ಮಾತ್ರ ಇಂತಹ ಕಾನೂನುಗಳನ್ನು ವಿರೋಧಿಸುವುದು ತನಗೆ ಒದಗಿದ ಒಂದು ಭಾಗ್ಯವೆಂದೇ ಅದು ಬೀಗುತ್ತದೆ.

ರಾಜ್ಯಗಳ ಅಧಿಕಾರವನ್ನು ಮೊಟಕುಗೊಳಿಸಿ ತನ್ನ ಅಧಿಕಾರವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಸಂವಿಧಾನದಲ್ಲಿ ತಿದ್ದುಪಡಿ ತರುವುದು ಬಿಜೆಪಿ ಸರ್ಕಾರಕ್ಕೆ ಅವಶ್ಯವಲ್ಲ. ತನಗೆ ಬೇಕೆಂದಾಗ ಅದು ಸಂವಿಧಾನವನ್ನು ಉಲ್ಲಂಘಿಸುತ್ತದೆ. ಕಾರ್ಯಾಂಗವನ್ನು ಪ್ರಶ್ನಿಸಲಾಗದಷ್ಟು ಪುಕ್ಕಲುತನವನ್ನು ನ್ಯಾಯಾಂಗವು ತೋರುತ್ತಿರುವುದರಿಂದ ಸರ್ಕಾರವು ಸಂವಿಧಾನವನ್ನು ಉಲ್ಲಂಘಿಸಿ ಮುಂದೆ ಹೋಗುವ ಧೈರ್ಯ ಮಾಡುತ್ತಿದೆ. ಹಾಗಾಗಿ, ದೇಶವು ಈಗ ತನ್ನ ಸಂವಿಧಾನವು ಸಂಪೂರ್ಣವಾಗಿ ಬುಡಮೇಲಾಗುವ ಅಪಾಯಕಾರಿ ಹಂತದಲ್ಲಿದೆ. ಈ ಸನ್ನಿವೇಶದಲ್ಲಿ ರೈತರು ಒಡ್ಡುತ್ತಿರುವ ಸವಾಲು ನಮ್ಮ ಭವಿಷ್ಯದ ದೃಷ್ಟಿಯಿಂದ ಮಹತ್ವಪೂರ್ಣವಾದದ್ದು. □



ಭಾರತದ ಕಾರ್ಮಿಕರ ಮೊದಲ ರಾಜಕೀಯ ಮುಷ್ಕರ

ಪುಟ 11 ರಿಂದ

ಅಸಂಘಟಿತ ಸಮುದಾಯವನ್ನು ಬೂರ್ಜ್ವಾ ವರ್ಗದ ನೇತೃತ್ವದ ಮತ್ತು ನಿಯಂತ್ರಣದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವನ್ನು ಬಲಪಡಿಸುವುದಕ್ಕಾಗಿ ಸೆಳೆಯುವ ಆಶಯಹೊಂದಿತ್ತು.

ಆದ್ದರಿಂದ, ತನ್ನದೇ ವರ್ಗದ ದೃಷ್ಟಿಕೋನದ ಮಿತಿಯಲ್ಲಿ ಸೀಮಿತವಾಗಿದ್ದ ತಿಲಕರಿಗೆ ಜನಸಾಮಾನ್ಯರ ಸಂಘಟಿತ ಕ್ರಾಂತಿಕಾರಿ ಚಟುವಟಿಕೆಗಳಿಗೆ ಯಾವುದೇ ಪ್ರಾಮುಖ್ಯತೆ ನೀಡಲು ಸಾಧ್ಯವಾಗಲಿಲ್ಲ, ಅಥವಾ ಕಾರ್ಮಿಕ ವರ್ಗವನ್ನು ಸ್ವತಂತ್ರ ರಾಜಕೀಯ ಶಕ್ತಿಯಾಗಿ ಪರಿಗಣಿಸುವ ಸಾಮರ್ಥ್ಯವೂ ಇರಲಿಲ್ಲ. ಈ ನ್ಯೂನತೆಗಳ ಹೊರತಾಗಿಯೂ, ಜನರ ಮೇಲೆ ಮತ್ತು ಮಹಾರಾಷ್ಟ್ರದ ಕಾರ್ಮಿಕ ವರ್ಗದ ಮೇಲೆ ತಿಲಕರ ಪ್ರಭಾವ ಮೇರೆಯಿಲ್ಲದಾಗಿತ್ತು.

1908 ರ ಜೂನ್ 24 ರಂದು ಮುಂಬಯಿಯಲ್ಲಿ ತಿಲಕ್ ಅವರನ್ನು ಬಂಧಿಸಲಾಯಿತು. ಸ್ವದೇಶಿ ಚಳವಳಿಯ ತೀವ್ರತೆ ಮತ್ತು ವಿದೇಶಿ ಸರಕುಗಳ ಬಹಿಷ್ಕಾರ ಮತ್ತು ವಿವಿಧ ಸ್ಥಳೀಯ ದಂಗೆಗಳಿಂದ ಭಯಭೀತರಾಗಿದ್ದ ಬ್ರಿಟಿಶ್ ಸರ್ಕಾರ, ಹೆಚ್ಚುತ್ತಿದ್ದ ಕ್ರಾಂತಿಕಾರಿ ಹೋರಾಟವನ್ನು ತಡೆಗಟ್ಟುವ ಉದ್ದೇಶದಿಂದ ದೇಶದ್ರೋಹದ ಆರೋಪದ ಮೇಲೆ ತಿಲಕ್ ವಿರುದ್ಧ ಕ್ರಮ ಕೈಗೊಂಡಿತು. . ವಿಚಾರಣೆಯ ಪ್ರಹಸನದ ನಂತರ, ತಿಲಕರಿಗೆ ಆರು ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು.

ತಿಲಕ್ ಅವರ ಬಂಧನ ಮತ್ತು ಅವರ ಜೈಲುವಾಸದಿಂದ ಉಂಟಾದ ತೀವ್ರ ಅಸಮಾಧಾನವು ದೇಶಾದ್ಯಂತದ ಸಾಮೂಹಿಕ ಬಂಡಾಯಕ್ಕೆ ಕಾರಣವಾಯಿತು. ಜನಸಾಮಾನ್ಯರು ವಿವಿಧ ಸ್ಥಳಗಳಲ್ಲಿ ಮುಷ್ಕರ, ಹರತಾಳ, ಮತ್ತು ಪ್ರದರ್ಶನಗಳನ್ನು ಆಯೋಜಿಸಿದರು. ಆದರೆ ಈ ಆಂದೋಲನವನ್ನು ಅನನ್ಯವಾಗಿಸಿದ ಪ್ರಮುಖ ಲಕ್ಷಣವೆಂದರೆ ಜುಲೈ 1908 ರಲ್ಲಿ ಮುಂಬಯಿ ಕಾರ್ಮಿಕರ ರಾಜಕೀಯ ಮುಷ್ಕರ ಮತ್ತು ಜನಸಾಮಾನ್ಯರ ಹರತಾಳ. ಬೂರ್ಜ್ವಾ ಇತಿಹಾಸಕಾರರು ತಮ್ಮ ವರ್ಗ ಮಿತಿಗಳಿಂದಾಗಿ, ಭಾರತದ ಕಾರ್ಮಿಕ ವರ್ಗದ ಈ ಮೊದಲ ರಾಜಕೀಯ ಮುಷ್ಕರಕ್ಕೆ ಯಾವುದೇ ಪ್ರಾಮುಖ್ಯತೆಯನ್ನು ನೀಡಲು ಸಾಧ್ಯವಾಗಲಿಲ್ಲ. . ಆದರೆ ಈ ರಾಜಕೀಯ ಮುಷ್ಕರವು ವಾಸ್ತವವಾಗಿ, ಭಾರತದ ಜನರ ಕ್ರಾಂತಿಕಾರಿ ಹೋರಾಟದ ಹಾದಿಯಲ್ಲಿ ಅಗಾಧ ಮಹತ್ವವನ್ನು ಹೊಂದಿದೆ. ಸಾಮ್ರಾಜ್ಯಶಾಹಿಗಳು ಮತ್ತು ಬೂರ್ಜ್ವಾ ಇತಿಹಾಸಕಾರರು ಈ ಘಟನೆಯ ಮಹತ್ವವನ್ನು ಮುಚ್ಚಿಡಲು ಪ್ರಯತ್ನಿಸಿದರೂ, ಈ ಹೋರಾಟದ ದೊಡ್ಡ ಪ್ರಾಮುಖ್ಯತೆ ಲೆನಿನ್ ಅವರ ಕಣ್ಣಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. 1908 ರಲ್ಲಿ ಈ ಮುಷ್ಕರವನ್ನು ಸೂಚಿಸುತ್ತಾ ಅವರು "ಭಾರತದಲ್ಲಿಯೂ ಸಹ, ಶ್ರಮಜೀವಿಗಳು ಈಗಾಗಲೇ ಪ್ರಜ್ಞಾಪೂರ್ವಕ ರಾಜಕೀಯ ಸಾಮೂಹಿಕ ಹೋರಾಟಕ್ಕೆ ಮುನ್ನಡೆದಿದ್ದಾರೆ ಮತ್ತು ಭಾರತದಲ್ಲಿ ರಶಿಯನ್ ಶೈಲಿಯ ಬ್ರಿಟಿಶ್ ಆಡಳಿತವು ಅವನತಿ ಹೊಂದುತ್ತದೆ." ಎಂದು ಗಮನಿಸಿದ್ದರು.

ಹೋರಾಟ ಪ್ರಾರಂಭವಾದಾಗ:

ತಿಲಕರ ವಿಚಾರಣೆಯ ಸಮಯದಲ್ಲಿ ಮುಂಬಯಿಯ ಜನರು ತೀವ್ರ ಅಸಮಾಧಾನ ಮತ್ತು ಕೋಪದಿಂದ ಸಿಡಿಮಿಡಿಗೊಂಡರು. ಜೂನ್ 29 ರಂದು ಸಶಸ್ತ್ರ ಪೊಲೀಸ್ ಪಡೆ ಮತ್ತು ನ್ಯಾಯಾಲಯದ ಹೊರಗೆ ಕಾಯುತ್ತಿದ್ದ ಸಾವಿರಾರು ಜನರ ನಡುವೆ ಮೊದಲ ಘರ್ಷಣೆ ಸಂಭವಿಸಿತು. ಜುಲೈ 13 ರಂದು ವಿಚಾರಣೆ ಪ್ರಾರಂಭವಾದಾಗ ಘರ್ಷಣೆಗಳು ತೀವ್ರಗೊಂಡವು. ಆ ದಿನ, ನ್ಯಾಯಾಲಯದ ಪ್ರದೇಶಕ್ಕೆ ಕಾರ್ಮಿಕರ ಪ್ರವೇಶವನ್ನು ತಡೆಯಲು ಎಲ್ಲಾ ಬೀದಿಗಳಲ್ಲೂ ಸಶಸ್ತ್ರ ಪಡೆಗಳು ತಡೆಯನ್ನು ಒಡ್ಡಿದವು. ಇದರ ಹೊರತಾಗಿಯೂ, ಜುಲೈ 13 ರ ಬೆಳಿಗ್ಗೆ, ಗ್ರೀವ್ಸ್, ಕಾಟನ್ & ಕಂ ಗಿರಣಿ ಕಾರ್ಮಿಕರ ಬಹುತೇಕ ವಿಭಾಗಗಳು ಉಪಕರಣಗಳನ್ನು ಕೆಳಗಿಟ್ಟು ಹೊರ ನಡೆದರು. ಸಶಸ್ತ್ರ ಪೊಲೀಸರು ಪ್ರತಿಭಟನಾಕಾರರನ್ನು ಚದುರಿಸಲು ಪ್ರಾರಂಭಿಸಿದರು ಆಗ ಘರ್ಷಣೆಗಳು ಸಂಭವಿಸಿದವು. ಈ ಘಟನೆಯನ್ನು ಉಲ್ಲೇಖಿಸಿ, ಎ. ಐ. ಚಿಚೆರೋವ್ ಹೀಗೆ ಬರೆದಿದ್ದಾರೆ: 'ತಿಲಕ್ ರ ಪರವಾಗಿ ನಡೆದ ಚಳವಳಿಯ ಮುಖ್ಯ ಲಕ್ಷಣಗಳೆಂದರೆ, ಅವು ವಿಚಾರಣೆಯ ಮೊದಲ ದಿನವೇ ಹೊರಹೊಮ್ಮಿದವು ಎಂದು ಖಂಡಿತವಾಗಿ ಹೇಳಬಹುದು. ಚಳುವಳಿಯ ಪ್ರಮುಖ ಲಕ್ಷಣಗಳೆಂದರೆ, ಬಾಂಬೆ ಗಿರಣಿ–ಕೆಲಸಗಾರರ ಮುಷ್ಕರ ಕ್ರಮ ಮತ್ತು ಸಾಮೂಹಿಕ ಮೆರವಣಿಗೆಯಲ್ಲಿ ಅವರ ಸಕ್ರಿಯ ಭಾಗವಹಿಸುವಿಕೆ. ಲೆನಿನ್ ಅವರ ಮಾತಿನಲ್ಲಿ ಹೇಳುವುದಾದರೆ, ಜನಸಾಮಾನ್ಯರು ತಮ್ಮ ಬರಹಗಾರರು ಮತ್ತು ರಾಜಕೀಯ ನಾಯಕರ ಪರವಾಗಿ ನಿಲ್ಲಲು ಪ್ರಾರಂಭಿಸಿದರು .... ಹೀಗೆ, ಬಾಂಬೆ ಶ್ರಮಜೀವಿಗಳ ಸಾಮೂಹಿಕ ಪ್ರದರ್ಶನಗಳು ತಮ್ಮದೇ ಆದ ರಾಜಕೀಯ ಶಿಕ್ಷಣಕ್ಕೆ ಉತ್ತಮ ಶಾಲೆಯಾಗಿದ್ದು, ನಗರದ ಬಡವರನ್ನು ಮತ್ತು ಸಣ್ಣ ಬೂರ್ಜ್ವಾಸಿಗಳನ್ನು ರಾಜಕೀಯ ಹೋರಾಟಗಳಿಗೆ ಸೆಳೆಯಿತು."

ಕಾರ್ಮಿಕರ ಈ ಪ್ರದರ್ಶನದಲ್ಲಿ ನಿಜಕ್ಕೂ ಮುಂಬಯಿಯ ಜನಸಾಮಾನ್ಯರು ಸೇರಿಕೊಂಡರು ಮತ್ತು ಭಯಭೀತರಾದ ಬ್ರಿಟಿಶ್ ಸರ್ಕಾರವು ಕಾರ್ಮಿಕರನ್ನು ನಗರದ ಕೇಂದ್ರಭಾಗಕ್ಕೆ ಪ್ರವೇಶಿಸದಂತೆ ತಡೆಯಲು ಗಿರಣಿ ಪ್ರದೇಶಗಳನ್ನು ಸುತ್ತುವರಿಯುವಂತೆ ಸೈನ್ಯಕ್ಕೆ ಆದೇಶಿಸಿತು.

ಜುಲೈ 14,15 ಮತ್ತು 16 ರಂದೂ ಅದೇ ರೀತಿಯ ಆಂದೋಲನ ಮುಂದುವರೆಯಿತು, ಆದರೆ ಇದು ಜುಲೈ 17 ರಂದು ವ್ಯಾಪಕ ಸ್ವರೂಪವನ್ನು ಪಡೆದುಕೊಂಡಿತು. ಮಧ್ಯಾಹ್ನದ ಮಧ್ಯಂತರದ ನಂತರ ಲಕ್ಷ್ಮೀದಾಸ್, ಗ್ಲೋಬ್, ಕ್ರೆಸೆಂಟ್, ಜಮಶೇಡ್, ನಾರಾಯಣ್, ಕರಿಂಬಾಯಿ, ಮುಹಮ್ಮದ್ಭಾಯ್, ಬ್ರಿಟಾನಿಯಾ, ಫೀನಿಕ್ಸ್, ಗ್ರೀವ್ಸ್ ಕಾಟನ್ & ಕಂ ಮತ್ತು ಇತರ ಮುಂಬಯಿ ಗಿರಣಿಗಳ ಕೆಲಸಗಾರರು ಕೆಲಸ ಬಂದ್ ಮಾಡಿ ಮೆರವಣಿಗೆಯಲ್ಲಿ ಹೊರಬಂದರು. ಕಾರ್ಮಿಕರು ಭಾರತದ ಮತ್ತು ಬ್ರಿಟಿಶ್ ಒಡೆತನದ ಗಿರಣಿಗಳಲ್ಲಿ ಕೆಲಸ ಮಾಡುವುದನ್ನು ಒಂದೇ ರೀತಿಯಲ್ಲಿ ನಿಲ್ಲಿಸಿದರು. ಕಾರ್ಮಿಕರ 20,000 ದಷ್ಟು ದೊಡ್ಡ ಮೆರವಣಿಗೆ ಕೈಗಾರಿಕಾ ಪ್ರದೇಶವನ್ನು ಸುತ್ತುಹಾಕಿತು, ಮತ್ತು ಎಲ್ಲಾ ಕಾರ್ಖಾನೆಗಳ ಕಾರ್ಮಿಕರು ಮುಷ್ಕರಕ್ಕೆ ಸೇರಬೇಕೆಂದು ಒತ್ತಾಯಿಸಿತು. ಜುಲೈ 18 ರಂದು ಇದೇ ವಿಷಯವನ್ನು ಪುನರಾವರ್ತಿಸಲಾಯಿತು. ಆದರೆ ಆ ದಿನ ಪೊಲೀಸರು ಕಾರ್ಮಿಕರ ಮೇಲೆ ಗುಂಡು ಹಾರಿಸಿದರು. ಜುಲೈ 19 ರಂದು, ಮುಷ್ಕರದ ಅಲೆಗಳು ಹೊಸ ಎತ್ತರವನ್ನು ತಲುಪಿದವು ಮತ್ತು ಮಾಹಿಮ್ ಮತ್ತು ಪರೆಲ್ ಕೈಗಾರಿಕಾ ಕೇಂದ್ರಗಳ ಸುಮಾರು 60 ಕಾರ್ಖಾನೆಗಳ 65,000 ಕಾರ್ಮಿಕರು ಮುಷ್ಕರಕ್ಕೆ ಸೇರಿದರು. ಜುಲೈ 20 ರಂದು ಕಾರ್ಮಿಕರ ಮೇಲೆ ಮತ್ತೆ ಗುಂಡು ಹಾರಿಸಲಾಯಿತು. ಈಗ ಚಳುವಳಿ ಕೈಗಾರಿಕಾ ಕಾರ್ಮಿಕರಿಗೆ ಮಾತ್ರ ಸೀಮಿತವಾಗಲಿಲ್ಲ. ಬಂದರು–ಕಟ್ಟೆಯ ಕೂಲಿಗಳು, ಸಣ್ಣ ವ್ಯಾಪಾರ, ಅಂಗಡಿಗಳು ಮತ್ತು ಬಜಾರ್‌ಗಳೊಂದಿಗೆ ಸಂಪರ್ಕ ಹೊಂದಿದ ಇತರ ಶ್ರಮಜೀವಿಗಳು ಅವರೊಂದಿಗೆ ಸೇರಿಕೊಂಡರು. ಜುಲೈ 21 ಮುಷ್ಕರವನ್ನು ಮತ್ತಷ್ಟು ವಿಸ್ತರಿಸಿತು. ಒಂದು ಸಾವಿರ ಬಂದರು–ಕಟ್ಟೆ ಕಾರ್ಮಿಕರು ಸಹ ಮುಷ್ಕರಕ್ಕೆ ಸೇರಿದರು. ಜುಲೈ 22 ರಂದು ಐದು ಮುಷ್ಕರಕಾರರನ್ನು ವಿಚಾರಣೆಗೆ ಒಳಪಡಿಸಿ ಶಿಕ್ಷೆಗೆ ಗುರಿಮಾಡಲಾಯಿತು. ಈ ಶಿಕ್ಷೆ ಹೆಚ್ಚುತ್ತಿದ್ದ ಕ್ರಾಂತಿಕಾರಿ ಚಳವಳಿಯ ಕಡೆಗೆ ವಸಾಹತುಶಾಹಿ ಆಡಳಿತಗಾರರ ಪ್ರತೀಕಾರದ ಸೂಚನೆಯಾಗಿತ್ತು.

"ಆರೋಪಿಗಳಿಗೆ ಮಾದರಿ ಶಿಕ್ಷೆಯನ್ನು ವಿಧಿಸಿ, ಅಂತಹ ಅಪರಾಧದ ಗುರುತ್ವವನ್ನು ಇತರ ಗಿರಣಿ ಕೆಲಸಗಾರರಿಗೆ ತೋರಿಸುವ ಅಗತ್ಯದೊಂದಿಗೆ ಈ ವಿಚಾರಣೆಯ ನಾಟಕವನ್ನು ಆಡಲಾಗುತ್ತಿದೆ" ಎಂದು ಟೈಮ್ಸ್ ಆಫ್ ಇಂಡಿಯಾ ಇದನ್ನು ಸರಿಯಾಗಿಯೇ ಗಮನಿಸಿತು.

ರೈತರ ಚಾರಿತ್ರಿಕ ಪರ್ಯಾಯ ಗಣತಂತ್ರ ಪರೇಡ್.......

ಪುಟ 8 ರಿಂದ

ಚಳುವಳಿಗಳ ವಿಶಾಲ ವೇದಿಕೆ ಸಂಘಟಿಸಿತ್ತು. ಇಷ್ಟು ಸಂಘಟನೆಗಳು ಒಟ್ಟಾಗಿ ರಾಜ್ಯವ್ಯಾಪಿ ಚಳುವಳಿಯೊಂದನ್ನು ಸಂಘಟಿಸಿದ್ದು ಬಹುಶಃ ಇದೇ ಮೊದಲು.

ರೈತರ ಪರೇಡ್ ತಾವು ಇದ್ದ ಕಡೆಗಳಲ್ಲಿ ಧ್ವಜಾರೋಹಣ ನೆರವೇರಿಸಿ ಬೆಂಗಳೂರಿನ ನೈಸ್ ರೋಡ್, ಹೊಸಕೋಟೆ ಜಂಕ್ಷನ್, ದೇವನಹಳ್ಳಿ ನಂದಿ ಕ್ರಾಸ್, ಬಿಡದಿ ಕೈಗಾರಿಕಾ ಪ್ರದೇಶಗಳಿಂದ ಆರಂಭಗೊಂಡಿತು. ಇನ್ನು ಕೆಲವು ಕಡೆಗಳಲ್ಲಿ ಸಂವಿಧಾನದ ಪೀಠಿಕೆಯನ್ನು ಓದುವುದರ ಮೂಲಕ ಪಥ ಸಂಚಲ ಆರಂಭಿಸಿದರು.

ನಗರದ ಹಲವು ಭಾಗಗಳಿಂದ ಬಂದಿರುವ ಪರೇಡ್ ಗಳು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಕ್ರಾಂತಿ ಗೀತೆಗಳನ್ನು ಹಾಡುತ್ತಾ, ರೈತರ ಹೋರಾಟಕ್ಕೆ ಬೆಂಬಲದ ಘೋಷಣೆಗಳನ್ನು ಕೂಗುತ್ತಾ ದಂಡು ದಂಡಾಗಿ ನಗರದತ್ತ ಆಗಮಿಸಿದ್ದರು. ಕೆಲವು ಕಡೆ ದಾರಿ ಮಧ್ಯದಲ್ಲಿ ಪೊಲೀಸರು ಪರ್ಯಾಯ ಪರೇಡ್ ಗೆ ಅಡ್ಡಿ ಉಂಟುಮಾಡಿದ್ದರು. ಮಾತಿನ ಚಕಮಕಿ ನಡೆದಿದ್ದು, ಇನ್ನು ಕೆಲವು ದಾರಿಗಳಲ್ಲಿ ಟ್ರ್ಯಾಕ್ಟರ್ ಗಳ ಮೂಲಕ ರೈತರು ಬಂದರೆ ಟೋಲ್ ಗಳ ಒಳಗಡೆ ಬಿಡದೇ ಅವರನ್ನು ತಡೆಹಿಡಿದ್ದರು. ಎಲ್ಲ ಹಾದಿಗಳಲ್ಲಿ ಟ್ರಾಕ್ಟರ್ ಗಳನ್ನು ತಡೆಯುವ ಪ್ರಯತ್ನ ಮಾಡಿದರು. 500ಕ್ಕೂ ಹೆಚ್ಚು ಟ್ರಾಕ್ಟರ್‌ಗಳು ಪರೇಡ್ ಗಾಗಿ ಬಂದಿದ್ದು 100ಕ್ಕೂ ಹೆಚ್ಚು ಟ್ರಾಕ್ಟರ್ ಗಳು ನಗರದೊಳಕ್ಕೆ ಬಂದಿವೆ ಎಂದು ವರದಿಯಾಗಿದೆ.

ರಾಜ್ಯದ ಮೂಲೆ ಮೂಲೆಗಳಿಂದ ಬಂದು ನಗರಕ್ಕೆ 4 ಹಾದಿಗಳಿಂದ ಬೆಳಗ್ಗೆನೇ ಹೊರಟು ಬಂದ ರೈತರ ಮೆರವಣಿಗೆಗಳು ನಗರದ ರೈಲ್ವೇ ಸ್ಟೇಶನ್ ಬಳಿ ಒಗ್ಗೂಡಿದವು. ಸುಮಾರು 1.30 ಗಂಟೆಯ ಹೊತ್ತಿಗೆ ಈ ಒಗ್ಗೂಡಿದ ರೈತರ ಬೃಹತ್ ಮೆರವಣಿಗೆ ಫ್ರಿಡಂ ಪಾರ್ಕ್ ನತ್ತ ನಡೆಯಿತು. ಫ್ರೀಡಂ ಪಾರ್ಕನಲ್ಲಿ ನೆರೆದಿದ್ದ ಸಭೆಯಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಜನ ಸೇರಿದ್ದರು. ರೈತರ ಹೋರಾಟಕ್ಕೆ ಬೆಂಬಲ ನೀಡಲು ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ, ಮಹಿಳಾ, ಪ್ರಗತಿಪರ, ಸಿಖ್ ಸಮುದಾಯ, ಮುಸ್ಲಿಂ ಸಂಘಟನೆ, ಲೈಂಗಿಕ ಅಲ್ಪಸಂಖ್ಯಾತ ಸಮುದಾಯ ಸೇರಿದಂತೆ ಹಲವು ಸಂಘಟನೆಗಳು ಭಾಗವಹಿಸಿದ್ದವು.

ಫ್ರೀಡಂ ಪಾರ್ಕನಲ್ಲಿ ನೆರೆದ ಬೃಹತ್ ಸಭೆಯನ್ನು ಉದ್ದೇಶಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾ. ಯು. ಬಸವರಾಜ್ ಮತ್ತು ರಾಜ್ಯದ ಇತರ ಪ್ರಮುಖ ರೈತ ನಾಯಕರು ಮಾತನಾಡಿದರು. ಚಾರಿತ್ರಿಕ ನರಗುಂದ–ನವಲಗುಂದ ರೈತ ಚಳುವಳಿಯಲ್ಲಿ ಭಾಗವಹಿಸಿದ್ದ ಕರ್ನಾಟಕ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಕಾ. ನಿತ್ಯಾನಂದಸ್ವಾಮಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು

ಮೋದಿ ಸರಕಾರದ ವಿರುದ್ದ ರೈತ, ಜನಪರ ಸಂಘಟನೆಗಳು ಕರೆ ನೀಡಿದ್ದ ರೈತ ಗಣರಾಜ್ಯೋತ್ಸವ ಪರೇಡ್ ರಾಜ್ಯದ ಎಲ್ಲೆಡೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಯುವಜನರು, ಮಹಿಳೆಯರು ಉತ್ಸಾಹದಿಂದ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ರ‍್ಯಾಲಿಗೆ ಮೆರಗು ತಂದಿದ್ದರು. ಆ ಮೂಲಕ ವಿವಿಧ ಭಾಗಗಳಲ್ಲಿ ಮೋದಿ ಸರಕಾರದ ವಿರುದ್ದ ದೊಡ್ಡ ಧ್ವನಿಯ ಧಿಕ್ಕಾರ ಮೊಳಗಿತು.

ಬೆಂಗಳೂರು ಅಲ್ಲದೇ ರಾಜ್ಯದ ಹಲವು ಭಾಗಗಳಾದ ಕಲಬುರ್ಗಿ, ಕೊಪ್ಪಳ, ರಾಯಚೂರು, ಹಗರಿಬೊಮ್ಮನಹಳ್ಳಿ, ಹೊಸಪೇಟೆ, ಚಿಕ್ಕಬಳ್ಳಾಪುರ, ಗದಗ್, ಹುಬ್ಬಳ್ಳಿ, ಮಂಗಳೂರು, ಉತ್ತರ ಕನ್ನಡ, ವಿಜಯಪುರ, ಧಾರವಾಡ, ಬಳ್ಳಾರಿ ಸೇರಿದಂತೆ ಅನೇಕ ಕಡೆಗಳಲ್ಲಿ ಧ್ವಜಾರೋಹಣ ಮಾಡಿ ಪರೇಡ್ ನಡೆಸಿ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಲಾಯಿತು. ಹೆಚ್ಚು ಕಡಿಮೆ ಎಲ್ಲ ಜಿಲ್ಲಾ ತಾಲೂಕು ಕೇಂದ್ರಗಳಲ್ಲೂ ಇಂತಹ ರೈತ ಸಂಘಟನೆಗಳು ಜಂಟಿಯಾಗಿ ಪರ್ಯಾಯ ಗಣತಂತ್ರ ಪರೇಡ್ ನಡೆಸಿದವು. ಎಲ್ಲ ಕಾರ್ಮಿಕ, ದಲಿತ, ವಿದ್ಯಾರ್ಥಿ, ಯುವಜನ, ಮಹಿಳಾ ಸಂಘಟನೆಗಳು, ಸಾಮಾಜಿಕ ಚಳುವಳಿಗಳು ಪರೇಡ್ ನಲ್ಲಿ ಭಾಗವಹಿಸಿ ಅನ್ನದಾತನ ಬೆಂಬಲಕ್ಕೆ ನಿಂತವು.

ಮಂಗಳೂರಿನಲ್ಲಿ ನಡೆದ ರೈತರ ಪರೇಡ್ ನಲ್ಲಿ ಡಿವೈ ಎಫ್ ಐನ ಸದಸ್ಯರು ಚೇ ಅವರ ಭಾವ ಚಿತ್ರ ಉಳ್ಳ ಟೀ ಶರ್ಟ್ ಧರಿಸಿದ್ದರು. ಚೇ ಅಂದರೆ ಪ್ರೀತಿ ಮತ್ತು ಅನ್ಯಾಯದ ವಿರುದ್ಧ ಹೋರಾಡಬೇಕೆನ್ನುವ ಚೇ ಮಾತನ್ನು ಇಲ್ಲಿ ಕಾಣಬಹುದಾಗಿತ್ತು.

ಕಲಬುರ್ಗಿ ಯಲ್ಲಿ ನೂರಕ್ಕೂ ಹೆಚ್ಚು ಟ್ರಾಕ್ಟರುಗಳ ಆಕರ್ಷಕ ಪರೇಡ್ ನಡೆಯಿತು. ಧಾರವಾಡದಲ್ಲಿ ರೈತರ ಟ್ರ್ಯಾಕ್ಟರ್ ಪೆರೇಡ್ ನಲ್ಲಿ ವಿವಿಧ ಗ್ರಾಮಗಳ ರೈತರು, ಸಂಘಟನೆಗಳ ಮುಖಂಡರು ಹಾಗೂ ಇತರ ಜನವಿಭಾಗಗಳು, ಇತರ ವಾಹನಗಳು ಸಾಥ್ ನೀಡಿದವು. ಇದೇ ರೀತಿಯ ಟ್ರಾಕ್ಟರುಗಳ ಪರೇಡ್ ಗಳು ಚಿಕ್ಕಬಳ್ಳಾಪುರ, ಬಳ್ಳಾರಿ, ಗಂಗಾವತಿಗಳಲ್ಲಿ ನಡೆದ ವರದಿಗಳು ಬಂದಿವೆ. ●

ರಾಜ್ಯವ್ಯಾಪಿ ಯಶಸ್ವಿ ರೈತ–ಕಾರ್ಮಿಕ ಜಾಥಾಗಳು....

ಪುಟ 16 ರಿಂದ

ಮೂರು ಕೇಂದ್ರ ಮತ್ತು ಎರಡು ರಾಜ್ಯ ರೈತ-ವಿರೋಧಿ ಕಾನೂನುಗಳನ್ನು ಹಿಂತೆಗೆದುಕೊಳ್ಳಲು ಚಾರಿತ್ರಿಕವಾದ ನಿರ್ಣಾಯಕ ಹೋರಾಟಕ್ಕೆ ಬೆಂಬಲ ಕೊಡುವುದಲ್ಲದೆ, ರೈತ–ಕಾರ್ಮಿಕರು ಮತ್ತು ಜನತೆಯ ಮೇಲಿನ ಸರಣಿ ಆರ್ಥಿಕ ರಾಜಕೀಯ ದಾಳಿಗಳನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗೂಡಿ ಹಿಮ್ಮೆಟ್ಟಿಸಲು ಸಿ.ಐ.ಟಿ.ಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಕೃಷಿ ಕೂಲಿಕಾರರ ಸಂಘಟನೆ, ಎಸ್.ಎಫ್.ಐ, ಡಿ.ವೈ.ಎಫ್.ಐ, ಜನವಾದಿ ಮಹಿಳಾ ಸಂಘಟನೆ, ದಲಿತ ಹಕ್ಕುಗಳ ಸಮಿತಿ – ಈ ಸಂಘಟನೆಗಳು ಜಂಟಿಯಾಗಿ ರಾಜ್ಯವ್ಯಾಪಿ ಏಳು ಪ್ರಾದೇಶಿಕ ರೈತ–ಕಾರ್ಮಿಕ ಜಾಥಾಗಳನ್ನು ಸಂಘಟಿಸಿದ್ದವು. ಜನವರಿ 17 ರಿಂದ 24ರ ವರೆಗೆ ನಡೆದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರಗಳಲ್ಲಿ ಸಂಚರಿಸಿದ ಜಾಥಾ–1 ರ ಕುರಿತು ಕಳೆದ ವಾರದ ಸಂಚಿಕೆಯಲ್ಲಿ ವರದಿಯಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಸಂಚರಿಸಿದ ಜಾಥಾ ಶಿವಮೊಗ್ಗದಲ್ಲಿ ಜನವರಿ 24 ರಂದು ಆರಂಭವಾಗಿ, ಉತ್ತರ ಕನ್ನಡ ಹೆಚ್ಚಿನ ತಾಲೂಕುಗಳನ್ನು ಹಾದು ಇಂದು (ಶುಕ್ರವಾರ ಜ.29) ಉಡುಪಿಯಲ್ಲಿ ಸಂಚರಿಸುತ್ತಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನಲ್ಲಿ ಕೊನೆಗೊಳ್ಳಲಿದೆ. ಜನವರಿ 28ರಂದು ಬಸವಕಲ್ಯಾಣ ದಲ್ಲಿ ಯು. ಬಸವರಾಜ್ ಮತ್ತು ನಿತ್ಯಾನಂದಸ್ವಾಮಿ ಉದ್ಘಾಟಿಸಿದ ಜಾಥಾ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳ ತಾಲೂಕುಗಳಲ್ಲಿ ಸಂಚರಿಸಿ ಫೆ. 5ರಂದು ಕೊನೆಗೊಳ್ಳಲಿದೆ. ಬಳ್ಳಾರಿಯಲ್ಲಿ ಜನವರಿ 29ರಂದು ಯು. ಬಸವರಾಜ್ ಉದ್ಘಾಟಿಸಿದ ಜಾಥಾ ಬಳ್ಳಾರಿಯಲ್ಲಿ ಆರಂಭವಾಗಿದ್ದು ಕೊಪ್ಪಳ, ಚಿತ್ರದುರ್ಗ, ದಾವಣಗೆರೆ, ಹಾವೇರಿ ಜಿಲ್ಲೆಗಳಲ್ಲಿ ಸಂಚರಿಸಿ ಫೆ.6 ರವರೆಗೆ ನಡೆಯಲಿದೆ.

ಬೆಳಗಾವಿ ಜಿಲ್ಲೆಯ ನಂದಗಡದಲ್ಲಿರುವ ಹುತಾತ್ಮ ಸಂಗೊಳ್ಳಿ ರಾಯಣ್ಣ ಸ್ಮಾರಕದ ಎದುರಿನಲ್ಲಿ ಎಸ್.ವರಲಕ್ಷ್ಮಿ ಅವರು ಜ.22ರಂದು ಉದ್ಘಾಟಿಸಿ ಆರಂಭವಾದ ಜಾಥಾ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ ಗಳನ್ನು ಹಾದು ಗದಗದಲ್ಲಿ ನಾಳೆ (ಜ.30) ಕೊನೆಗೊಳ್ಳಲಿದೆ. ಕೋಲಾರ ಜಿಲ್ಲಾ ಜಾಥಾ ಜನವರಿ 18ರಿಂದ 24 ರ ವರೆಗೆ ನಡೆದಿದ್ದು ಎಲ್ಲಾ 6 ತಾಲೂಕುಗಳಲ್ಲಿ ಸಂಚರಿಸಿದೆ. ಕೋಲಾರ ಜಾಥಾದಲ್ಲಿ ಇತರ ರೈತ ಮತ್ತು ದಲಿತ ಸಂಘಟನೆಗಳ ಜತೆ ಜಂಟಿಯಾಗಿ ಸಂಘಟಿಸಲಾಗಿತ್ತು. ಚಿಕ್ಕಬಳ್ಳಾಪುರ ದಲ್ಲೂ ಜಿಲ್ಲಾ ಜಾಥಾ ನಡೆದಿದೆ. ಹಾಸನದಲ್ಲಿ ಜ.28ರಿಂದ ಜಿಲ್ಲಾ ಜಾಥಾ ಆರಂಭವಾಗಿದೆ. ಮೈಸೂರು ಜಿಲ್ಲೆಯಲ್ಲಿ ಟಿ ನರಸಿಪುರ, ಸರಗೂರು, ಎಚ್.ಡಿ ಕೋಟೆ, ಪಿರಿಯಾಪಟ್ಟಣಗಳಲ್ಲಿ ಸಭೆಗಳನ್ನು ಸಂಘಟಿಸಲಾಗಿದ್ದು, ಮೈಸೂರು ಮತ್ತು ಹುಣಸೂರುಗಳಲ್ಲಿ ಸಭೆ ನಡೆಯಲಿವೆ. ●

ಬ್ಯಾಕ್ ಲಾಗ್ ಹುದ್ದೆ: ಯಾರಿಗೂ ಬೇಡವಾದ ಕೂಸು

2020–21 ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್ ಲಾಗ್ ಹುದ್ದೆಗಳ ಬರ್ತಿಗೆ ತಡೆಯನ್ನು ಒಡ್ಡಲಾಗಿದೆ. ಆರ್ಥಿಕ ಸ್ಥಿತಿ ಹೆಸರಲ್ಲಿ ಬ್ಯಾಕ್ ಲಾಗ್ ಹುದ್ದೆಗಳನ್ನು ತಡೆದದ್ದು ಎಷ್ಟು ಸರಿ? ಬ್ಯಾಕ್ ಲಾಗ್ ಹುದ್ದೆಗಳೆಂದರೆ ಯಾರಿಗೂ ಬೇಡವಾದ ಕೂಸೆ ಎಂಬಂತಾಗಿದೆ.

ಕರ್ನಾಟಕ ಸರ್ಕಾರದ ಸಚಿವಾಲಯವು ಈ ಹಿಂದೆ 6.7.2020ರಂದು ಒಂದು ಸುತ್ತೋಲೆಯನ್ನು ಹೊರಡಿಸಿತ್ತು, ಆ ಸುತ್ತೋಲೆಯಲ್ಲಿ 'ರಾಜ್ಯದಲ್ಲಿ ಕೋವಿಡ್ 19ನಿಂದ ಉಂಟಾದ ಪರಿಸ್ಥಿತಿಯನ್ನು ನಿಬಾಯಿಸಬೇಕು ಮತ್ತು ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರಬೇಕಿದೆ. ಹಾಗಾಗಿ 2020–21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು ಮತ್ತು ಬ್ಯಾಕ್ ಲಾಗ್ ಹುದ್ದೆಗಳೂ ಸೇರಿದಂತೆ ಎಲ್ಲಾ ನೇಮಕಾತಿಗಳನ್ನು ಬರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ' ಎಂದು ಹೇಳಲಾಗಿತ್ತು.

ಈಗ ಅದನ್ನು ಪರಿಶೀಲಿಸಿ ದಿನಾಂಕ 12.1.2021ರಂದು ಮತ್ತೊಂದು ಸುತ್ತೋಲೆ ಹೊರಡಿಸಿದೆ. ಇದರಲ್ಲಿ 'ಅನುಕಂಪದ ಆಧಾರದ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹಿಂದಿನ ಸುತ್ತೋಲೆಯಲ್ಲಿ ವಿನಾಯಿತಿ ನೀಡಲಾಗಿದೆ ಮತ್ತು ಅನುಕಂಪದ ಆಧಾರದ ಹುದ್ದೆಗಳನ್ನು ಭರ್ತಿ ಮಾಡಲು ಒಪ್ಪಿಗೆ ಕೊಡಲಾಗಿದೆ' ಎಂದು ಹೇಳಲಾಗಿದೆ. ಇದು ಒಂದು ಕಡೆ ಸ್ವಾಗತಿಸಬಹುದಾದ ತೀರ್ಮಾನ, ಉದ್ಯೋಗ ಪ್ರಕ್ರೀಯೆ ನಡೆಯದೆ ಇದ್ದಾಗ ಇಂತಹದ್ದೊಂದು ಪ್ರಕ್ರೀಯೆ ನಡೆಯುತ್ತಿರುವುದು ಒಪ್ಪಿಕೊಳ್ಳಬಹುದಾದ ವಿಚಾರ ಆದರೆ ಇದೇ ಮಾನದಂಡವನ್ನು ಬ್ಯಾಕ್ ಲಾಗ್ ಹುದ್ದೆಗಳಿಗೆ ಯಾಕೆ ಅನ್ವಯಿಸಲಿಲ್ಲ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಚರ್ಚೆಯಾಗುತ್ತಿದೆ.

ಬ್ಯಾಕ್ ಲಾಗ್ ಹುದ್ದೆಗಳ ಭರ್ತಿಗೆ ರಾಜ್ಯ ಸರಕಾರ ನಿರ್ಲಕ್ಷ್ಯ ತೋರಿಸಲಾಗುತ್ತದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಅನುಕಂಪದ ಆದಾರದ ಹುದ್ದೆಗಳಿಗೆ ನೇಮಕ ಮಾಡಲು ಹಣಕಾಸು ಅನುದಾನ ವಿದ್ದರೆ, ಬ್ಯಾಕ್ ಹುದ್ದೆಗಳಿಗೆ ಯಾಕಿಲ್ಲ? ತಳ ಸಮುದಾಯಗಳ ವಿದ್ಯಾವಂತ ಹುಡುಗರು ಹೀಗೆಯೇ ನಿರುದ್ಯೋಗಿಗಳಾಗಿ ನೇಪಥ್ಯದಲ್ಲಿರಲಿ ಎಂದು ಸರಕಾರ ಬಯಸುತ್ತಿದೆಯೇ? ತಳ ಸಮುದಾಯದ ಬಗ್ಗೆ ಸರಕಾರ ನಿರ್ಲಕ್ಷ್ಯ ಮಾಡುತ್ತಿರುವುದು ಸರಿಯಾದ ಕ್ರಮವಲ್ಲ ಎಂದು ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಆರೋಪಿಸಿದ್ದಾರೆ.

ಕಲ್ಯಾಣ ಕರ್ನಾಟಕ (ಹಿಂದಿನ ಹೈದರಾಬಾದ್ ಕರ್ನಾಟಕ) ಕ್ಕೆ 371 ಜೆ ಅಡಿಯಲ್ಲಿ ವಿಶೇಷ ಸ್ಥಾನಮಾನ ಕೊಡಲಾಗಿದೆ. ಆದರೆ ಸರಕಾರ ಅದರ ಅನುಸಾರ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಉತ್ಸಾಹ ತೋರುತ್ತಿಲ್ಲ. ಇದೇ ಯಡಿಯೂರಪ್ಪ ಸರಕಾರ ಗ್ರುಪ್ ಸಿ ಮತ್ತು ಗ್ರುಪ್ ಡಿ ವಲಯಗಳಲ್ಲಿ ಕನ್ನಡಿಗರಿಗೆ ಮೀಸಲಾತಿ ನೀಡುವುದಾಗಿ ಹೇಳಿಕೊಂಡಿದೆ. ಅಂದರೆ ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ಈಗ ಕನ್ನಡಿಗರಿಗೆ ಮೀಸಲಾತಿ ಕೊಡುತ್ತೇವೆ ಎನ್ನುವ ಸರಕಾರದ ಈ ಕಪಟ ನೀತಿಯು ತಳ ಸಮುದಾಯಗಳಿಗೆ ಮಾಡಿದ ನೇರವಾದ ವಂಚನೆಯಾಗಿದೆ ಎಂದು ಎಸ್.ಎಫ್.ಐ ಮುಖಂಡ ಶಿವಕುಮಾರ ಮ್ಯಾಗಳಮನಿ ಆರೋಪಿಸಿದ್ದಾರೆ.

ಸಂವಿಧಾನದ ಪರಿಚ್ಛೇದ 16(4) ರ ಅನುಸಾರ 'ಸೂಕ್ತ ಪ್ರಾತಿನಿಧ್ಯವಿಲ್ಲದ ಎಲ್ಲಾ ಹಿಂದುಳಿದ ವರ್ಗಗಳ ನೇಮಕಾತಿ ಮಾಡಲು ಸರಕಾರಕ್ಕೆ ಸಂಪೂರ್ಣ ಅಧಿಕಾರವಿದೆ ಮತ್ತು ಆ ಹುದ್ದೆಗಳನ್ನು ಭರ್ತಿ ಮಾಡಬೇಕು'. ಆದರೆ ರಾಜ್ಯ ಸರಕಾರವು ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡದೆ ಇರುವಂತದ್ದು ಸಂವಿದಾನದ ಮೂಲಭೂತ ಹಕ್ಕುಗಳನ್ನು ಉಲ್ಲಂಘನೆ ಮಾಡಿದಂತೆ ಎಂಬ ಅರಿವು ಸರಕಾರಕ್ಕೆ ಇರಬೇಕಿತ್ತು.

ಇನ್ನೊಂದು ಆಶ್ಚರ್ಯಕರ ಸಂಗತಿ ಎಂದರೆ ಅಕ್ಟೋಬರ್ 20ರಂದು ಯುಜಿಸಿಯು ಕೇಂದ್ರ ಮತ್ತು ರಾಜ್ಯ ವಿಶ್ವವಿದ್ಯಾಲಯಗಳಿಗೆ ಪತ್ರ ಬರೆದು ಎಲ್ಲಾ ಬಗೆಯ ಬೋಧಕ ಮತ್ತು ಬೋಧಕೇತರ ಬ್ಯಾಕ್ ಲಾಗ್ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕೆಂದು ಆದೇಶಿಸಿದೆ.

ಒಂದು ಅಂದಾಜಿನ ಪ್ರಕಾರ ಕೇಂದ್ರ ವಿ.ವಿಗಳಲ್ಲಿ 1084 ಪ. ಜಾತಿಗೆ ಮೀಸಲಿರಿಸಿದ ಹುದ್ದೆಗಳು ಖಾಲಿ ಇವೆ. 604 ಪ. ಪಂಗಡಕ್ಕೆ ಮಿಸಲಿರಿಸಿದ ಹುದ್ದೆಗಳು ಖಾಲಿ ಇವೆ. 1684 ಹಿಂದುಳಿದ ವರ್ಗಗಳ ಬೋಧಕ ಹುದ್ದೆಗಳು ಖಾಲಿ ಇದೆ. ರಾಜ್ಯ ವಿವಿಗಳಲ್ಲಿ ಶೇ. 28% ಪ್ರಮಾಣದ ಬ್ಯಾಕ್ ಲಾಗ್ ಬೋಧಕ ಹುದ್ದೆಗಳು ಖಾಲಿ ಇವೆ. ಇವುಗಳ ಭರ್ತಿ ಇನ್ನೂ ಕೋಡಾ ನಡೆಯುತ್ತಿಲ್ಲ. ಯಾಕೆ ಭರ್ತಿ ಮಾಡಿಕೊಳ್ಳುತ್ತಿಲ್ಲ ಎಂದರೆ ತಳ ಸಮುದಾಯಗಳ ಕುರಿತಾದ ಅಸಡ್ಡೆ ಮತ್ತು ಅವರ ಸಬಲೀಕರಣ ಸರಕಾರಕ್ಕೆ ಬೇಕಾಗಿಲ್ಲ ಎಂದು ಚಿಂತಕ ಶ್ರೀಪಾದ್ ಭಟ್ ಆರೋಪಿಸಿದ್ದಾರೆ.

ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಸಂಗತಿ ಏನು ಅಂದರೆ, ಬಹುತೇಕ ವಿಶ್ವ ವಿದ್ಯಾಲಯಗಳು ತಮ್ಮ ಅಂತರ್ಜಾಲ ತಾಣಗಳಲ್ಲಿ ಮೀಸಲಾತಿ ರೋಸ್ಟರ್ ಕುರಿತಾದ ಸಂಪೂರ್ಣ ಮಾಹಿತಿಯನ್ನು, ಬ್ಯಾಕ್ ಲಾಗ್ ಹುದ್ದೆಗಳ ಮಾಹಿತಿಯನ್ನು ಪ್ರಕಟಿಸುತ್ತಿಲ್ಲ. ಇನ್ನು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಸಾವಿರಾರು ಬ್ಯಾಕ್ ಲಾಗ್ ಹುದ್ದೆಗಳು ಹಲವು ವರ್ಷಗಳಿಂದ ಖಾಲಿ ಇವೆ. ತಳ ಸಮುದಾಯದವರನ್ನು ಶಿಕ್ಷಕರನ್ನಾಗಿ, ಉಪನ್ಯಾಸಕರನ್ನಾಗಿ ನೇಮಿಸಿಕೊಳ್ಳಬಾರದು ಎಂದು ಸರಕಾರ ನಿರ್ಧಾರ ಮಾಡಿದಂತೆ ಕಾಣುತ್ತಿದೆ. ಬ್ಯಾಕ್ ಲಾಗ್ ಹುದ್ದೆಗಳ ಜಾಗದಲ್ಲಿ ಅತಿಥಿ ಉಪನ್ಯಾಸಕರು ಈಗ ಕಾರ್ಯನಿರ್ವಹಿಸುತ್ತಿದ್ದಾರೆ.

ಇದನ್ನೆಲ್ಲ ಗಮನಿಸುತ್ತಿದ್ದರೆ ಈ ಬ್ಯಾಕ್ ಲಾಗ್ ಹುದ್ದೆಗಳು ಎಂಬುದು ಯಾರಿಗೂ ಬೇಡದ ಕೂಸು ಎಂಬಂತೆ ಕಾಣ್ತಾ ಇದೆ. ಸರಕಾರ ಇಂತಹ ನಿರ್ಧಾರದಿಂದ ಹಿಂದೆ ಸರಿಯಬೇಕಿದೆ. ಬ್ಯಾಕ್ ಲಾಗ್ ಹುದ್ದೆಗಳನ್ನು ಭರ್ತಿ ಮಾಡಿ ತಳ ಸಮುದಾಯದ ಉದ್ಯೋಗಾಂಕ್ಷಿಗಳ ಹಕ್ಕನ್ನು ರಕ್ಷಿಸಲು ಮುಂದಾಗಬೇಕಿದೆ. ●



ಸಮರ್ಪಣೆಯ ಸಮಯ........ ಪುಟ 6 ರಿಂದ

ಸ್ವಯಂಸೇವಕರು ಬಕೆಟ್‌ಗಳ ತುಂಬ ದಾಲ್ ಮತ್ತು ಖೀರನ್ನು ಒಯ್ಯುತ್ತಿದ್ದಾರೆ, ಯುದ್ಧ ಸಾಮಗ್ರಿಗಳನ್ನಲ್ಲ", ಇನ್ನೊಬ್ಬ ರೈತ ನಮಗೆ ನೆನಪಿಸುತ್ತಾನೆ.

ಲಾಂಗರ್‌ಗಳು ಇಲ್ಲಿ ಬಡಿಸುವ ಊಟಗಳಷ್ಟೇ ವೈವಿಧ್ಯಪೂರ್ಣವಾಗಿವೆ ಹಾಗೂ ದೈನಿಕದ ಅಗತ್ಯಗಳೆಲ್ಲ ಪ್ರತಿ ಹೊಸ ದಿನ ಹೊಸತಾಗಿ ನಿರ್ಧರಿತವಾಗುತ್ತವೆ; ಹೆದ್ದಾರಿಗುಂಟ ಡೀಸಲ್ ಲಾಂಗರ್‌ಗಳು: ಯುನೈಟೆಡ್ ಸಿಖ್ಖ ಸಂಸ್ಥೆಯ ಡೇರೆ ಮತ್ತು ತಾಡಪತ್ರೆ ಲಾಂಗರ್‌ಗಳು; ದೈನಿಕದ ಅಗತ್ಯಗಳಿಗಾಗಿ ಖಾಲ್ಸಾ ಏಯ್ಡ್‌ನವರ ಕಿಸಾನ್ ಮಾಲ್‌ಗಳು; ದಿಲ್ಲಿ ಗುರುದ್ವಾರ ಆಡಳಿತ ಸಮಿತಿಯವರ ರಾತ್ರಿ ವಸತಿ ಬಸ್ ಲಾಂಗರ್‌ಗಳು; ಕಬಡ್ಡಿ ತಂಡವೊಂದರ ಸೇವೆಯಾಗಿ ಬಟ್ಟೆ ಒಗೆದುಕೊಡುವ ಲಾಂಗರ್‌ಗಳು; ನ್ಯೂಜೆರ್ಸಿಯಿಂದ ಬಂದ ಹೃದ್ರೋಗ ತಜ್ಞನೂ ಇರುವ ವೈದ್ಯಕೀಯ ಲಾಂಗರ್‌ಗಳು; ಕಾರ್ಯಕರ್ತರು ಹಾಗೂ ಸಿನೆಮಾ ನಿರ್ಮಾಪಕರು ಪ್ರಕಟಿಸುವ 'ಟ್ರೊಲಿ ಟೈಮ್ಸ್' ಎಂಬ ಬಹುಭಾಷಿಕ ವೃತ್ತಪತ್ರಿಕೆ.... ಎಲ್ಲ ಸ್ವಯಂ ಸೇವಕರು ರೈತರು, ವ್ಯಾಪಾರಿಗಳು ಹಾಗೂ ಭೂರಹಿತರನ್ನು ಈ ಸದುದ್ದೇಶದ ಶಾಂತಿಧಾಮಗಳಲ್ಲಿ ಒಗ್ಗೂಡಿಸುತ್ತಿವೆ.

ಶತಮಾನಗಳಿಂದ ಪ್ರದರ್ಶಿಸುತ್ತಿರುವ ಗಡಿ ರಕ್ಷಣೆಯೇ ಆಗಿರಲಿ ಅಥವಾ ಇದು ರೈತರು ಸರಳವಾಗಿ ಕರೆಯುತ್ತಿರುವ "ಕಪ್ಪು ಕಾನೂನು" ಆಗಿರಲಿ, ಪೋಹ್ ಸುರಿಸುವ ಮಳೆ ಹಾಗೂ ಮಂಜು ಯಾವುದೂ ನಿರ್ಧಾರವನ್ನು ಕುಂದಿಸಿಲ್ಲ. ಸರ್ದಾರ್ ದಿಲ್ಬಾಗ್ ಸಿಂಗ್ ಸೈಕಲ್ ಮೇಲೆ ಟಾರ್ನ್‌ಟಾರ್ನ್‌ನಿಂದ ಲಾಂಗರ್‌ಗೆ ನೂರು ರೂಪಾಯಿ ದೇಣಿಗೆ ನೀಡಲು ಬಂದ. ಅರವತ್ತೆರಡು ವರ್ಷದ ಮನ್‌ಜೀತ್ ಕೌರ್ ಪಟಿಯಾಲದಿಂದ ಜೀಪ್ ತುಂಬ ಮಹಿಳೆಯರನ್ನು ಕರೆತಂದಳು.

ಬಹುರಾಷ್ಟ್ರೀಯ ಔಷಧ ಕಂಪನಿಗಳು ಹೆಚ್ಚು ಪರಿಣಾಮಕಾರಿಯಾದ ವೈದ್ಯಕೀಯ ಲಸಿಕೆ ತಯಾರಿಸಲು ಸ್ಪರ್ಧೆಯಲ್ಲಿರುವಾಗ ದೃಢ ನಿಶ್ಚಯದ ವೃದ್ಧರು "ನಾವು ರೈತರು ಭೂ ಕಬಳಿಕೆ ಸಾಂಕ್ರಾಮಿಕಕ್ಕೆ ಲಸಿಕೆ" ಎಂದು ಘೋಷಿಸುತ್ತಾರೆ.

ಪೋಹ್‌ನ ಮಧ್ಯರಾತ್ರಿಯ ಆಕಾಶದ ಅಡಿಯಲ್ಲಿ ಜಂಟಿಯಾಗಿ ನಿರ್ಮಿಸಲಾದ ಪ್ರತಿವಿಷದ ಈ ಸಾರ್ವಜನಿಕ ಘೋಷಣೆಯ ಪ್ರತಿಧ್ವನಿಗಳನ್ನು ಕಂಡುಕೊಳ್ಳುತ್ತಿದೆ. ಅವರ ಹೋರಾಟ ಈಗ ಪಂಜಾಬ್ ರೈತರ ಪ್ರತಿಭಟನೆಯಿಂದ ರಾಷ್ಟ್ರೀಯ ಕೃಷಿ ಚಳುವಳಿಯಾಗಿ ಪದೋನ್ನತಿ ಪಡೆದಿದೆಯೇ? ಈ ಭೂ ಲಾಕ್‌ಡೌನ್‌ನಲ್ಲಿ 1905 ರ "ಪಗ್ರಿ ಸಂಭಾಲ್ ಜಟ್ಟಾ" (ರೈತರೇ ನಿಮ್ಮ ಮುಂಡಾಸು ರಕ್ಷಿಸಿಕೊಳ್ಳಿ) ಚಳುವಳಿಯ ತ್ಯಾಗ ಮತ್ತು ವಿಜಯದ ಫಲಕವನ್ನು ಪಂಜಾಬ್ ರೈತರು ಉಳಿಸಿಕೊಳ್ಳುವರೇ? ಮತ್ತೊಮ್ಮೆ ಅವರು ರಕ್ಷಣೆಯ ಮೊದಲ ಸಾಲಿನಲ್ಲಿ ನಿಂತಿದ್ದಾರೆ – ದೇಶದ ವಿವಿಧ ಮೂಲೆಗಳಿಂದ ಬಂದ ಸುಮಾರು ನಲವತ್ತು ರೈತ ಸಂಘಟನೆಗಳನ್ನು ಒಟ್ಟುಗೂಡಿಸಿರುವ ಮುಂಚೂಣಿಯ ಸರದಾರರು. ಇಲ್ಲ, ಅವರನ್ನು ಒಡೆಯಲಾಗುವುದಿಲ್ಲ.

ಜೋಶ್ ಅಥವಾ "ಚಾರ್ಡಿ ಕಾಲಾ" ದ ವೈರಸ್ ಸಾಂಕ್ರಾಮಿಕವಾಗಿದೆ. ಗೀತ ರಚನಾಕಾರ–ಗಾಯಕರಾದ ಕನ್ವರ್ ಗ್ರೆವಾಲ್ ಮತ್ತು ಹಾರ್ಫ್ ತಮ್ಮ ಗುರುವಿನ ಬಗೆಯಲ್ಲೇ "ಪ್ರಿಯ ಮಿತ್ರ"ನಿಗೆ ಪ್ರತಿಕ್ರಿಯಿಸುತ್ತಾರೆ. ಅವರು ದೆಹಲಿಯ ಹೆದ್ದಾರಿಗಳು ಮತ್ತು ವಿಭಾಜಕಗಳನ್ನು ಸೆರೆಹಿಡಿಯುತ್ತಾರೆ. ಅಲ್ಲಿಯ ನಿವಾಸಿಗಳನ್ನೂ ಸಹಿತ. ಅವರೂ ಸಹ ಸ್ವಇಚ್ಛೆಯಿಂದಲೇ ಅನಿಕೇತನರಾದವರು: "ದಿಲ್ಲಿಯ ಗಡಿಗಳಲ್ಲಿ ಅಲ್ಲಾಹನ ಆಶೀರ್ವಾದದ ಮಳೆ ಸುರಿಯಲಿ...... ನಮಗೆ ಬೀದಿಗಳೇ ಕೋಟೆಗಳಾಗಿ ಮಾರ್ಪಟ್ಟಿವೆ, ನನ್ನ ಪ್ರಭುವೇ." ●

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ (ಸಿಐಟಿಯು) ಸಂಘಟನೆಯಿಂದ

ಅನಿರ್ಧಿಷ್ಠ ಧರಣಿ ಸತ್ಯಾಗ್ರಹ 9 ದಿನಕ್ಕೆ

ಗ್ರಾ.ಪಂ. ನೌಕರ ಸಂಘದ ಗೌರವಾಧ್ಯಕ್ಷ ಅಣ್ಣಾರಾಯ ಈಳಗೇರ ಮಾತನಾಡಿ 14/15 ನೇ ಹಣಕಾಸು ಅನುದಾನದಲ್ಲಿಯೂ ವೇತನ ನೀಡಬೇಕು. ಕರ ವಸೂಲಿಯಲ್ಲಿ ವಸೂಲಾದ ಹಣವನ್ನು ಸಿಬ್ಬಂದಿಗಳ ವೇತನ ಬಾಕಿ, ನಿಂತಿರುವ ವೇತನ ನೀಡಬೇಕು. ನಿವೃತಿ ಹೊಂದಿದ ಸಿಬ್ಬಂದಿಗಳಿಗೆ ತಕ್ಷಣವೇ ನಿವೃತಿ ಉಪದನ ನೀಡಬೇಕು. ಎಲ್ಲ ಸಿಬ್ಬಂದಿಗಳಿಗೆ ಸೇವಾ ಪುಸ್ತಕ ತೆಗೆಯಬೇಕು. ಸರಕಾರದ ಆದೇಶವಿದ್ರೂ ಏಕಕಾಲಕ್ಕೆ ಅನುಮೋದನೆ ನೀಡದೆ ಹಲವಾರು ಸಿಬ್ಬಂದಿಗಳಿಗೆ ಸತಾಯಿಸಲಾಗುತ್ತಿದೆ. ತಕ್ಷಣವೇ ಎಲ್ಲ ಸಿಬ್ಬಂದಿಗಳಿಗೆ ಅನುಮೋದನೆ ನೀಡಬೇಕು. ಖಾಲಿ ಇರುವ ಕಾರಕೂನ ಹುದ್ದೆಗೆ ಎಸ್‌ಎಸ್‌ಎಲ್‌ಸಿ ಪಾಸಾದ ವಾಟರಮನ್ ಹಾಗೂ ಸಿಪಾಯಿ ಮುಂತಾದ ಗ್ರಾಪಂ ಸಿಬ್ಬಂದಿಗಳಿಗೆ ಬಡ್ತಿ ನೀಡಬೇಕು. ಇವೆಲ್ಲ ಸೇರಿದಂತೆ ಎಲ್ಲ ಬೇಡಿಕೆಗಳು ಈಡೇರಿಸಬೇಕು ಎಂದು ತಾಪಂ ಕಛೇರಿ ಎದುರಿಗೆ ಧರಣಿ ಪ್ರಾರಂಭಿಸಲಾಗಿದೆ. ಇದಕ್ಕೆ ಕಾರ್ಯನಿರ್ವಾಹಕ ಅಧಿಕಾರಿಗಳು ಎಲ್ಲ ಪಿಡಿಓಗಳಿಗೆ ನೋಟಿಸ ನೀಡಿ ವೇತನ ಡೇ ಬುಕ್, ವಸೂಲಿಯಾದ ಡೆ ಬುಕ್, ಪಾವತಿ ಬುಕ್ ಪರಿಶೀಲಿಸಿ ಪ್ರತಿ ದಿನ 5 ಗ್ರಾಪಂಗಳಲ್ಲಿ ವೇತನ ನೀಡಲು ಕ್ರಮ ಜರಿಗಿಸೋಣ ಎಂದು ತಿಳಿಸಿದ್ದಾಗ್ಯೂ ಇನ್ನೂವರೆಗೆ ಯಾವುದೇ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ ಸ್ಪಂದಿಸಿಲ್ಲ. ಅದರಿಂದ ಎಲ್ಲ ಬೇಡಿಕೆಗಳು ಈಡೇರುವರೆಗೆ ಧರಣಿ ನಿಲ್ಲದು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಪಂ ಇಓ ಸುನೀಲಕುಮಾರ ಮದ್ದಿನ, ಎ.ಡಿ. ಅವರಾದಿ, ನಿತ್ಯಾನಂದ ಯಲಗೋಡ. ಪಿಡಿಓ ಸಂಘದ ಅಧ್ಯಕ್ಷ ಸಂಜು ದೊಡಮನಿ ಧರಣಿಗೆ ಬೇಟಿ ನೀಡಿ, ತಮ್ಮ ಆದೇಶಕ್ಕೆ ಉತ್ತರ ನೀಡದ ಅಭಿವೃದ್ಧಿ ಅಧಿಕಾರಿಗಳಿಗೆ 1 ರಿಂದ 4ರ ವರೆಗೆ ಕಾಲಾವಕಾಶ ನೀಡಿದ್ದು ಇಲ್ಲದಿದ್ದರೆ ಕಾನೂನು ಕ್ರಮ ಜರುಗಿಸಲು ಮೇಲಾಧಿಕಾರಿಗಳಿಗೆ ಸಿಫ್ಪಾರಸ್ಸು ಮಾಡಲಾಗುವುದು ಎಂದು ಧರಣಿಯಲ್ಲಿ ಆಗಮಿಸಿ ತಿಳಿಸಿದರು.

ಈ ಧರಣಿಯಲ್ಲಿ ಅಧ್ಯಕ್ಷ ಎಂ.ಕೆ. ಚಳ್ಳಿಗಿ, ಕಾರ್ಯದರ್ಶಿ ಎಂ.ಎಸ್. ಕೊಂಡಗೂಳಿ, ಖಜಾಂಚಿ ಎಂ.ಎಂ. ಹುಣಶ್ಯಾಳ, ಎಂ.ಜಿ. ಪರಗೊಂಡ, ಮಾನಯ್ಯ ಮಠ, ಪ್ರಕಾಶ ವಾಲಿಕಾರ, ಧರೇಪ್ಪ ಕಕ್ಕಳಮೇಲಿ, ಸುಬಾಷ ನಾಯ್ಕೋಡಿ, ಎಂ.ಎಸ್. ನಾಯ್ಕೋಡಿ, ಈರಮ್ಮ ಬಾಣಿ, ಶರಣಪ್ಪ ಹರಿಜನ್, ಶಿವಪ್ಪ ಬಾಸಗಿ, ಚಾಂದಬಾಷಾ ದರ್ಗಾ, ಮಲಕು ಸುಂಗಠಾಣ. ●

ಕೆಪಿಎಸಿ.... ಪುಟ 5 ರಿಂದ

ಹೇಳಬಾರದು, ಸಂದರ್ಶನಕ್ಕೆ ಅರ್ಹರಾದವರ ಪಟ್ಟಿಯನ್ನು ಮೊದಲೆ ಬಿಡುಗಡೆ ಮಾಡಬೇಕು, ದಿನಕ್ಕೆ 9 ಜನರನ್ನು ಮಾತ್ರ ಸಂದರ್ಶನಕ್ಕೆ ಕರೆಯಬೇಕು. 30 ನಿಮಿಷಕ್ಕಿಂತ ಹೆಚ್ಚಿನ ಸಂದರ್ಶನ ಇರಬಾರದು ಎಂಬುದು ಸೇರಿದಂತೆ ಕೆ.ಪಿ.ಎಸ್.ಸಿ ಯನ್ನು ಶುದ್ಧೀಕರಿಸಲು ಹೋಟಾ ಸಮಿತಿ ಶಿಫಾರಸ್ಸುಗಳನ್ನು ನೀಡಿತ್ತು.

ಲೋಕಸೇವಾ ಆಯೋಗದಲ್ಲಿನ ಭ್ರಷ್ಟಾಚಾರ, ಅಕ್ರಮಗಳನ್ನು ತಡೆಹಿಡಿಯುವುದಾಗಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ಚುನಾವಣೆಯಲ್ಲಿ ಹೇಳುತ್ತಲೆ ಬಂದಿವೆ. ಆದರೆ ಇಲ್ಲಿಯವರೆಗೆ ತಪ್ಪು ಮಾಡಿದ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಶಿಕ್ಷೆಯನ್ನು ನೀಡಿಲ್ಲ. ಮಾಜಿ ಅಧ್ಯಕ್ಷರಾದ ಹೆಚ್.ಎನ್. ಕೃಷ್ಣ, ಗೋನಾಳು ಭಿಮಪ್ಪರವರ ಮೇಲಿನ ವಿಚಾರಣೆಯನ್ನು ಇನ್ನೂ ಪೂರ್ಣಗೊಳಿಸಲಾಗಿಲ್ಲ. ಪ್ರತಿವರ್ಷ ನಾವು ಅರ್ಜಿಹಾಕುತ್ತೇವೆ, ಅವರ ಪ್ರಶ್ನೆಪತ್ರಿಕೆ ಮಾರಾಟ ಮಾಡ್ತಾರೆ. ಶಿಕ್ಷಣವೂ ಮಾರಾಟ ಆಗಿದೆ, ಉದ್ಯೋಗವೂ ಮಾರಾಟ ಆಗುತ್ತಿದೆ. ನಮ್ಮಗೋಳು ಕೇಳೋರು ಯಾರು ಅಂತಾ ಪರೀಕ್ಷಾರ್ಥಿಗಳು ಸರಕಾರವನ್ನು ಪ್ರಶ್ನಿಸುತ್ತಿದ್ದಾರೆ.

ಕೆಪಿಎಸ್ಸಿ ತನ್ನ ಅಂಗೈನಲ್ಲಿ ದೊಡ್ಡಪ್ರಮಾಣದ ಭ್ರಷ್ಟಾಚಾರವನ್ನು ನಡೆಸಿ, ನೇಮಕಗೊಂಡ ವ್ಯಕ್ತಿಗಳನ್ನು ಅಂದಿನಿಂದಲೆ ಲಂಚ ಪಡೆಯುವಂತೆ ಮಾಡುತ್ತಿದೆ. ಯುಪಿಎಸ್‌ಸಿ ಮಾದರಿಯಲ್ಲಿ ಅಮೂಲಾಗ್ರ ಸುಧಾರಣೆ ಮಾಡುವ ದೊಡ್ಡ ಜವಾಬ್ದಾರಿ ಸರಕಾರದ ಮೇಲೆ ಇದೆ. ಆ ನಿಟ್ಟಿನಲ್ಲಿ ಸರಕಾರ ಆಸಕ್ತಿಯನ್ನು ವಹಿಸಿ ಕೆಪಿಎಸ್ಸಿ ಅಂಗೈಯನ್ನು ಶುದ್ಧಗೊಳಿಸಬೇಕಿದೆ. ●

JANASHAKTHI KANNADA VARA PATRIKE February 1-7, 2021 Price: Rs. 10/- Date of Publication: 29 January 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21





ಸಂವಿಧಾನ ರಕ್ಷಣಾ ದಿನ ಆಚರಣೆ



ಜನವರಿ 26 ರಂದು ರೈತ ಪರ್ಯಾಯ ಪರೇಡ್, ಮೆರವಣಿಗೆಗಳಲ್ಲದೆ 'ಸಂವಿಧಾನ ಸಂರಕ್ಷಣಾ ದಿನ'ವಾಗಿ ಸಭೆ ನಡೆಸುವ ಮೂಲಕವೂ ಆಚರಿಸಲಾಯಿತು. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಂದು ಬೆಳಿಗ್ಗೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಗಳು ಸಂಘಟಿಸಿದ ಮುಖ್ಯ ಸಭೆಯನ್ನು ಖ್ಯಾತ ಚಿಂತಕ ಪ್ರೊ. ರಾಜೇಂದ್ರ ಚೆನ್ನಿ ಉದ್ಘಾಟಿಸಿದರು. ಕಾ.ಮೀನಾಕ್ಷಿ ಸುಂದರಂ 'ಕಾರ್ಮಿಕ ಸಂಹಿತೆಗಳು ಮತ್ತು ಕಾರ್ಮಿಕ ಚಳುವಳಿ", ಕಾ.ಯು.ಬಸವರಾಜ್ "ಕೃಷಿ ಕಾಯಿದೆಗಳು ಮತ್ತು ರೈತ ಹೋರಾಟ", ಕಾ. ಕೆ.ಎಸ್.ವಿಮಲ "ಲಾಕ್ ಡೌನ್ ಮತ್ತು ಮಹಿಳೆಯರು", ಕಾ. ವಾಸುದೇವ ರೆಡ್ಡಿ "ನೂತನ ಶಿಕ್ಷಣ ನೀತಿಯ ಅಪಾಯಗಳು" ಹಾಗೂ ಕಾ. ಗೋಪಾಲಕೃಷ್ಣ ಅರಳಹಳ್ಳಿ "ದಲಿತ ಹಕ್ಕುಗಳು ಮತ್ತು ಪ್ರಸಕ್ತ ಪರಿಸ್ಥಿತಿ" ಕುರಿತು ಮಾತನಾಡಿದರು. ಎಲ್ಲ ಮಾತನಾಡಿದವರು ಪ್ರಸ್ತುತ ಸರಕಾರ ಹೇಗೆ ಸಂವಿಧಾನದ ಆಶಯಗಳಿಗೆ ಮತ್ತು ಆಯಾ ಜನವಿಭಾಗಗಳಿಗೆ ವಿರುದ್ಧವಾದ ನೀತಿಗಳನ್ನು ಹರಿಯಬಿಡುತ್ತಾ ಸಂವಿಧಾನವನ್ನು ಒಳಗಿನಿಂದಲೇ ಕೊರೆಯುತ್ತಾ ಅರ್ಥಹೀನ ಮತ್ತು ದುರ್ಬಲಗೊಳಿಸುತ್ತಿದೆ ಎಂದು ವಿವರಿಸಿದರು. ಕಾ.ಕೆ.ಎನ್. ಉಮೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಕಾ. ಎಚ್.ಎನ್. ಗೋಪಾಲಗೌಡ ಧ್ವಜಾರೋಹಣ ಮಾಡಿದರು. ಕಾ. ಕೆ. ಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯದ ಇತರೆಡೆ ಇಂತಹ ಹಲವು ಸಭೆಗಳನ್ನು ನಡೆಸಲಾಯಿತು ಎಂದು ವರದಿಯಾಗಿದೆ.





ರಾಜ್ಯವ್ಯಾಪಿ ಯಶಸ್ವಿ ರೈತ-ಕಾರ್ಮಿಕ ಜಾಥಾಗಳು

ವರದಿ ಪುಟ 14 ರಲ್ಲಿ


ಕಲಬುರಗಿ ಜಾಥ, ಹುಮನಬಾದ್


ಧಾರವಾಡ ಜಾಥ


ಉ.ಕ. ಜಾಥ, ಹೊನ್ನಾವರ


ಬಳ್ಳಾರಿ ಜಾಥ


ಕೋಲಾರ ಜಾಥ


ಬಳ್ಳಾರಿ ಜಾಥ


ಹಾಸನ ಜಾಥ

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**